ಐಕ್ಯರಂಗ

ಸಂಪುಟ 21 ಸಂಚಿಕೆ 51
ಡಿಸೆಂಬರ್ 14-20, 1998
ರೂ. 2.00
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಕೋಟಿ-ಕೋಟಿ ಜನಗಳ ಬೃಹತ್ ಐತಿಹಾಸಿಕ ಡಿಸೆಂಬರ್ 11 ರ ಕಾರ್ಯಾಚರಣೆ

ಭಾರತೀಯ ಜನತೆಯ ಪ್ರತಿರೋಧದ ಹೊಸ ದೃಢನಿರ್ಧಾರದ ಸಂಕೇತ

ಡಿಸೆಂಬರ್ 11, 1998. ಭಾರತದ ಕಾರ್ಮಿಕ ವರ್ಗ ಒಂದು ಅತ್ಯಂತ ಮಹತ್ವಪೂರ್ಣ ಮುಷ್ಕರ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಸಿತು. ಗ್ರಾಮೀಣ ಭಾರತದ ಅವರ ಕೋಟ್ಯಾಂತರ ಬಡ ಸೋದರರೂ ಸೋದರಿಯರೂ ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಅವರೊಂದಿಗೆ ಕೈಜೋಡಿಸಿದರು. ದೇಶಾದ್ಯಂತ ಕಾರ್ಮಿಕರು, ನೌಕರರು ಸಾರ್ವತ್ರಿಕ ಮುಷ್ಕರ ನಡೆಸಿದರೆ ರೈತರು, ಕೃಷಿಕೂಲಿಕಾರರು, ಮಹಿಳೆಯರು, ಯುವಜನ, ವಿದ್ಯಾರ್ಥಿಗಳು ರಸ್ತೆ-ತಡೆ, ರೈಲುತಡೆಗಳನ್ನು ನಡೆಸಿ ಈ ಕಾರ್ಯಾಚರಣೆಗೆ ಸ್ವತಂತ್ರ ಭಾರತದ ಅತ್ಯಂತ ಬೃಹತ್ ಪ್ರಮಾಣದ ಸಾರ್ವತ್ರಿಕ ಹರತಾಳದ ಸ್ವರೂಪವನ್ನು ನೀಡಿದರು.

ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ತನ್ನ ಬಲಿಷ್ಟ ನೆಲೆಗೆಳೆನಿಸಿಕೊಂಡ ಪ್ರದೇಶಗಳಿಂದಲೇ ಬಲವಾದ ತಿರಸ್ಕಾರ ಪಡೆದ ನಂತರ ಬಿಜೆಪಿ ಸರಕಾರದ ಜನ-ವಿರೋಧಿ, ರಾಷ್ಟ್ರ-ವಿರೋಧಿ ನೀತಿಗಳ ವಿರುದ್ಧ ಮತ್ತೊಂದು ಬೃಹತ್ ತೀರ್ಪು ಇದಾಯಿತು.

ನಾಲ್ಕು ತಿಂಗಳ ಹಿಂದೆ ಆಗಸ್ಟ್ 12, 1998 ರಂದು ನವದೆಹಲಿಯಲ್ಲಿ ನಡೆದ 56 ಸಾಮೂಹಿಕ ಸಂಘಟನೆಗಳನ್ನೊಳಗೊಂಡ **'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ'** ಏರ್ಪಡಿಸಿದ್ದ ಬೃಹತ್ ಸಮಾವೇಶ ಈ ದೇಶವ್ಯಾಪಿ ಕಾರ್ಯಾಚರಣೆಗೆ ಕರೆ ನೀಡಿದಂದಿನಿಂದ ಈ ಚಳುವಳಿಯ ಸಂದೇಶ ದೇಶ ಮೂಲೆ ಮೂಲೆಗೂ ತಲುಪಿತು. ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ, ರಾಜ್ಯ ಮಟ್ಟದ ಸಮಾವೇಶಗಳಲ್ಲಿ ನಂತರ ನಡೆದ ಪ್ರತಿಭಟನಾ ಜಾಥಾಗಳಲ್ಲಿ, ರಾಜ್ಯಗಳ ರಾಜಧಾನಿಗಳಲ್ಲಿ ನಡೆದ ಬೃಹತ್ ರ್‍ಯಾಲಿಗಳಲ್ಲಿ ನೂರಾರು, ಸಾವಿರಾರು, ನಂತರ ಲಕ್ಷಾಂತರ ಜನ ಪಾಲುಗೊಂಡರು. ಇವೆಲ್ಲಾ ಸೃಷ್ಟಿಸಿದ ಹೋರಾಟದ ವಾತಾವರಣ ಇನ್ನೂ ಲಕ್ಷಾಂತರ ಮಂದಿಗಳಲ್ಲಿ ಹೊಸ ಆಶಾಭಾವನೆಗಳನ್ನು ಜಾಗ್ರತಗೊಳಿಸಿತು. ರಾಷ್ಟ್ರೀಯ ವೇದಿಕೆಯಲ್ಲಿಲ್ಲದ ಸಂಘಟನೆಗಳೂ, ಅದುವರೆಗಿನ ಕಾರ್ಯಾಚರಣೆಗಳಲ್ಲಿ ಭಾಗವಹಿಸದ ಹಲವು ಸಂಘಟನೆಗಳೂ ಡಿಸೆಂಬರ್ 11ರ ಐತಿಹಾಸಿಕ ಕಾರ್ಯಾಚರಣೆಯಲ್ಲಿ ತಾವು ಹಿಂದೆ ಬೀಳಬಾರದು ಎಂದು ನಿರ್ಧರಿಸಿದರು. ಕಾಂಗ್ರೆಸ್ಸಿಗರ ಮುಖಂಡತ್ವದಲ್ಲಿರುವ ಇಂಟಕ್‌ಗೆ ಸೇರಿದ ಹಲವು ಸಂಘಗಳು ಈ ಕಾರ್ಯಾಚರಣೆಯಲ್ಲಿ

ಪುಟ 7 ನೋಡಿ

ರಾಜ್ಯಾದ್ಯಂತ ಸ್ಪಂದಿಸಿದ ಜನತೆ - 2000 ಕ್ಕೂ ಹೆಚ್ಚು ಬಂಧನ

ದೇಶದ ಕೋಟ್ಯಾಂತರ ಕಾರ್ಮಿಕರ ಜೀವನವನ್ನು ಅಭದ್ರಗೊಳಿಸಿ ದೇಶದ ಬೆನ್ನೆಲುಬು ರೈತಾಪಿ ವರ್ಗವನ್ನು ದಿವಾಳಿ ಎಬ್ಬಿಸಿ ನರಕಕ್ಕೆ ತಳ್ಳಿ, ಅಗತ್ಯ ವಸ್ತುಗಳ ಬೆಲೆಗಳನ್ನು ಗಗನದಲ್ಲಿಟ್ಟು, ಜನ ಸಾಮಾನ್ಯರ ಬದುಕನ್ನು ಬೇಗುದಿಗಿಟ್ಟಿರುವ 1991 ರ ಹೊಸ ಆರ್ಥಿಕ ಕೈಗಾರಿಕಾ ಹಾಗೂ ಕೃಷಿ ನೀತಿವಿರುದ್ಧ, ಬಿಜೆಪಿ ನೇತೃತ್ವದ ಕೇಂದ್ರಸರಕಾರದಡಿಯಲ್ಲಿ ದೇಶದ ಅಲ್ಪ ಸಂಖ್ಯಾತರು ಭಯದ ಛಾಯೆಯಲ್ಲಿ ನರಳಾಡುವಂತೆ ಮಾಡಿರುವ ಕೋಮುವಾದೀಕರಣದ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಕರೆಯ ಮೇರೆಗೆ ಓಗೊಟ್ಟು ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರದಲ್ಲಿ ಪಾಲ್ಗೊಂಡು ರಾಜ್ಯದ ಜನತೆ ಯಶಸ್ವಿಗೊಳಿಸಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ರಾಯಚೂರು ಚಿಕ್ಕಮಗಳೂರು, ಬಳ್ಳಾರಿ, ಗುಲ್ಬರ್ಗಗಳಲ್ಲಿ ಸಂಪೂರ್ಣ ಬಂದ್ ಆಗಿದೆ. ಎಲ್ಲಾ ಸರ್ಕಾರಿ ಉದ್ದಿಮೆಗಳು ಮುಚ್ಚಿದ್ದವು. ಸಾರಿಗೆ ಸಂಚಾರ ನಿಂತಿತ್ತು. ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಕಾರ್ಮಿಕರು, ವಿದ್ಯಾರ್ಥಿ-ಯುವಜನತೆ ಹಾಗೂ ರೈತರು ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ. ಮೈಸೂರು, ಕೋಲಾರ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಾಗಶ ಹರತಾಳ ಆಗಿದ್ದು ಕಾರ್ಮಿಕರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ರಸ್ತೆತಡೆ ರೈಲು ತಡೆ ನಡೆಸಿದ್ದಾರೆ.

ಭಟ್ಕಳ ಹೊನ್ನಾವರಗಳಲ್ಲಿ ರಸ್ತೆ, ರೈಲು ತಡೆ ಚಳುವಳಿ ನಡೆಸಿ 1500 ಕ್ಕೂ ಹೆಚ್ಚು ಪ್ರತಿಭಟನಾಕಾರರು ಬಂಧನಕ್ಕೊಳಗಾಗಿದ್ದಾರೆ. ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಸಂಪೂರ್ಣ ಬಂದ್ ಆಗಿದೆ. ಬಿಜೆಪಿ ಮತ್ತು ಪೋಲೀಸರು ಜೊತೆಗೂಡಿ ಪ್ರತಿಭಟನಾಕಾರರನ್ನು ಥಳಿಸಿದ್ದಾರೆ.

ಬೆಂಗಳೂರಿನ ಪೀಣ್ಯಾ, ಯಶವಂತಪುರ ಕೆಂಗೇರಿ, ಕನಕಪುರರಸ್ತೆ, ಕೆ.ಆರ್ ಪುರಂ ಹೊಸೂರು ರಸ್ತೆಗಳಲ್ಲಿ ಶೇ. 90ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಬಹಿಷ್ಕರಿಸಿ ಕಾರ್ಖಾನೆ ಮುಂದೆ ಹರತಾಳ ನಡೆಸಿದ್ದಾರೆ. ಬಹುತೇಕ ಶಾಲಾ ಕಾಲೇಜು ಬಹಿಷ್ಕರಿಸಿದ ಸಾವಿರಾರು ವಿದ್ಯಾರ್ಥಿಗಳು 9 ಕಡೆ ಮಾನವ ಸಂಪನ್ಮೂಲ ಮಂತ್ರಿಗಳ ಭೂತ ದಹನ, ರಸ್ತೆ ತಡೆ ನಡೆಸಿದ್ದಾರೆ. ರಸ್ತೆ ತಡೆ ನಡೆಸಿದ 120 ಕಾರ್ಮಿಕರು ಬಂಧನಕ್ಕೊಳಗಾದರು. ಹಲವು ಕಡೆ ಆರ್.ಎಸ್.ಎಸ್ ಗೂಂಡಾಗಳು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದರೆ, ಮತ್ತೊಂದೆಡೆ ಪೊಲಿಸರ ಜೊತೆ ಸೇರಿ ಥಳಿಸಿದ್ದಾರೆ. ಜಿಲ್ಲೆಯ ಹೊಸಪೇಟೆ ದೊಡ್ಡಬಳ್ಳಾಪುರದಲ್ಲಿ ಸಂಪೂರ್ಣ ಬಂದ್ ನಡೆದಿದೆ.

ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು, ಭಾರತಿ ನಗರ, ಕೆಸ್ತೂರುಗಳಲ್ಲಿ ಸಂಪೂರ್ಣ ಬಂದ್ ಆಗಿದ್ದು ಜಿಲ್ಲೆಯ ಬಹುತೇಕ ಶಾಲಾ-ಕಾಲೇಜುಗಳು ಬಂದ್ ಆಗಿದ್ದವು. ಸಾವಿರಾರು ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ತುಮಕೂರಿನಲ್ಲಿ ಶಾಲಾಕಾಲೇಜುಗಳನ್ನು ಬಹಿಷ್ಕರಿಸಿದ 1500 ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ಬಿಜೆಪಿಯ ಕೋಮುವಾದದ ವಿರುದ್ಧ, ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು.

ಹಾಸನದಲ್ಲಿ 500 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಗರದಲ್ಲಿ ಮೆರವಣಿಗೆ ನಡೆಸಿದರೆ, ಸಕಲೇಶಪುರದಲ್ಲಿ ಸಾವಿರಾರು ತೋಟ ಕಾರ್ಮಿಕರು ಕೆಲಸ ಬಹಿಷ್ಕರಿಸಿ ಮೆರವಣಿಗೆ ಸಭೆ ನಡೆಸಿದ್ದಾರೆ.

ರಾಜ್ಯದೆಲ್ಲೆಡೆ ಬ್ಯಾಂಕ್, ವಿಮಾ, ನೌಕರರು ಬಿ.ಹೆಚ್.ಇ.ಎಲ್, ಎನ್.ಜಿ.ಇ.ಎಫ್. ಕಿರ್ಲೋಸ್ಕರ್ ಕಾರ್ಮಿಕರು ಸಾರ್ವತ್ರಿಕ ಮುಷ್ಕರದಲ್ಲಿ ಸಂಪೂರ್ಣವಾಗಿ ಭಾಗವಹಿಸಿದರು. ಖಾಸಗೀ ವಲಯದ ಮೈಕೋ ಕಾರ್ಖಾನೆಯಲ್ಲಿ ಭಾಗಶಃ ಮುಷ್ಕರ ನಡೆದಿದೆ. ಈ ಕಾರ್ಯಾಚರಣೆಯನ್ನು ಬೆಂಬಲಿಸಿದ ಬೆಂಗಳೂರಿನ ಸಾರ್ವಜನಿಕ ವಲಯದ ಇತರ ಉದ್ದಿಮೆಗಳ ನೌಕರರು ಡಿಸೆಂಬರ್ 14 ರಂದು ಮುಷ್ಕರ ನಡೆಸುತ್ತಾರೆ. ಬೆಂಗಳೂರಿನಲ್ಲಿ ಏರೋ ಇಂಡಿಯಾ ಕಾರ್ಯಕ್ರಮದಿಂದಾಗಿ ಇದನ್ನು ಮುಂದೂಡಲಾಯಿತು ಎಂದು ಅಲ್ಲಿಯ ನೌಕರರ ಸಂಘಟನೆಗಳು ಹೇಳಿವೆ.

ಜನತೆಗೆ ಸಿಪಿಐ(ಎಂ) ಅಭಿನಂದನೆ

ಕೇಂದ್ರ ಸರಕಾರದ ಜನವಿರೋಧಿ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯು ನೀಡಿದ ಕರೆಯ ಮೇರೆಗೆ ಮುಷ್ಕರ ಹರತಾಳದಲ್ಲಿ ಭಾಗವಹಿಸಿದ ರಾಜ್ಯದ ಕಾರ್ಮಿಕರು, ವಿದ್ಯಾರ್ಥಿ ಇನ್ನಿತರ ವಿಭಾಗದ ಜನರನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಅಭಿನಂದಿಸಿದೆ.

ರಾಜ್ಯಾದ್ಯಂತ ಸಾವಿರಾರು ಕಾರ್ಮಿಕರನ್ನು ವಿದ್ಯಾರ್ಥಿಗಳನ್ನು ಬಂಧಿಸಿ ಬಿಡುಗಡೆ ಮಾಡಲಾಗಿದೆ. ಇನ್ನೂ ಕೆಲವರನ್ನು ಬಿಡುಗಡೆ ಮಾಡಿಲ್ಲ ಹಾಗೂ ಸುಳ್ಳು ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಬಿಡುಗಡೆ ಮಾಡದೆ ಇರುವವರನ್ನು ಬಿಡುಗಡೆ ಮಾಡಬೇಕೆಂದೂ, ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಮಾಡಬೇಕೆಂದೂ ಸಿಪಿಐ(ಎಂ) ಒತ್ತಾಯಿಸಿದೆ.

ಬೆಂಗಳೂರಿನಲ್ಲಿ ಆರ್. ಎಸ್.ಎಸ್. ನ ಗೂಂಡಾಗಳು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿರುವುದನ್ನೂ ಸಿಪಿಐ(ಎಂ) ಉಗ್ರವಾಗಿ ಖಂಡಿಸಿದೆ.

ಬಿಜೆಪಿ ಸರಕಾರ ಬೆಲೆ ಏರಿಕೆ, ನಿರುದ್ಯೋಗ ಮೊದಲಾದ ದುಃಸ್ಥಿತಿಗಳಿಗೆ ಕಾರಣವಾಗುವ ಆರ್ಥಿಕ ನೀತಿಗಳನ್ನು ಮುಂದುವರಿಸಿದಲ್ಲಿ ಹಾಗೂ ಕೋಮುವಾದವನ್ನು ಕೈಬಿಡದಿದ್ದಲ್ಲಿ ಜನಸಾಮಾನ್ಯರು ತಮ್ಮ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸದೆ ಬೇರೆ ದಾರಿಯೇ ಇಲ್ಲ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಎಚ್ಚರಿಸಿದೆ.

"ರಾಷ್ಟ್ರದ ವಾಣಿಯಿದು ಇದಕ್ಕೆ ಕಿವಿಗೊಡಿ"

ಎಡಪಕ್ಷಗಳ ಆಗ್ರಹ

ಎಡ ಆಳ್ವಿಕೆಯ ರಾಜ್ಯಗಳಾದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಮಾತ್ರವಲ್ಲ ಇಡೀ ದಕ್ಷಿಣ ಮತ್ತು ಪೂರ್ವ ಭಾರತದಲ್ಲಿ , ಬಿಹಾರದಲ್ಲಿ, ಕಾಂಗ್ರೆಸ್, ಬಿಜೆಪಿ ಪ್ರಭಾವದ ಮುಂಬೈ, ದಿಲ್ಲಿ, ಮತ್ತಿತರ ಪ್ರದೇಶಗಳಲ್ಲೂ ಸಾಮೂಹಿಕ ಮುಷ್ಕರ ಮತ್ತು ಹರತಾಳದ ಕರೆಗೆ ಅಮೋಘ ಸ್ಪಂದನ ದೊರೆಯುತ್ತಿದ್ದಾಗ ನವದೆಹಲಿಯಲ್ಲಿ ಸಭೆ ಸೇರಿದ್ದ ಸಂಸತ್ತಿನಲ್ಲೂ ಈ ಹೋರಾಟದ ಪ್ರತಿಧ್ವನಿ ಮೊಳಗಿತು. ಕೋಟ್ಯಾಂತರ ಜನಗಳ ಈ ಐತಿಹಾಸಿಕ ಕಾರ್ಯಾಚರಣೆಯ ಮೂಲಕ ಎತ್ತಿದ ಮಹತ್ವದ ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಚರ್ಚೆಯಾಗಬೇಕೆಂದು ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಆರ್.ಜೆ.ಡಿ, ಜನತಾದಳ, ಸಮಾಜವಾದಿ ಪಾರ್ಟಿ, ಟಿ.ಎಂ.ಸಿ., ಡಿ.ಎಂ.ಕೆ. ಹಾಗೂ ನ್ಯಾಶನಲ್ ಕಾನ್ಫರೆನ್ಸ್‌ನ ಸದಸ್ಯರು ಒಟ್ಟಿನಲ್ಲಿ ಸುಮಾರಾಗಿ ಎಲ್ಲಾ ಬಿಜೆಪಿಯೇತರ, ಕಾಂಗ್ರೆಸ್ಸೇತರ ಪಕ್ಷಗಳ ಸದಸ್ಯರು ಮತ್ತೆ ಮತ್ತೆ ಒತ್ತಾಯಿಸಿದರು. ಅವರ ಈ ಒತ್ತಾಯವನ್ನು ನಿರ್ಲಕ್ಷಿಸುವ ಪ್ರಯತ್ನದ ಪರಿಣಾಮವಾಗಿ ಸಂಸತ್ತಿನ ಎರಡೂ ಸದನಗಳ ಕಲಾಪ ಸ್ಥಗಿತಗೊಂಡಿತು. ಸಂಸತ್ತಿನ ಎದುರು ಕೂಡಾ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಸಂಸತ್‌ಸದಸ್ಯರು ರಾಷ್ಟ್ರೀಯ ವೇದಿಕೆಯೆತ್ತಿದ ಬೇಡಿಕೆಗಳನ್ನು ಬೆಂಬಲಿಸಿ ಪ್ರತಿಭಟನಾ ಧರಣಿ ನಡೆಸಿದರು.

ಅತ್ತ ಇವೆಲ್ಲಾ ಪ್ರತಿಕ್ರಿಯೆಗಳಿಂದ ಆಳುವ ಕೂಟದ ಮುಖಂಡರಲ್ಲಿ ಉಂಟಾಗಿರುವ ಹತಾಶೆಯನ್ನು ಕೂಟದ ವಕ್ತಾರ ವೆಂಕಯ್ಯ ನಾಯ್ಡುರವರ ಹೇಳಿಕೆ ಬಿಂಬಿಸಿತು. ಅವರು ಈ ಕಾರ್ಯಾಚರಣೆ 'ತರ್ಕಹೀನ', ಇವು ದೇಶದ ಅಥವಾ ಕಾರ್ಮಿಕ ವರ್ಗದ ಹಿತಾಸಕ್ತಿಗೆ ವಿರುದ್ಧವಾದದ್ದು ಎಂದರಂತೆ. ಈ ಹೇಳಿಕೆಯ ಹಿಂದಿರುವ ಹತಾಶ ತರ್ಕಹೀನತೆಗೆ ಕೇವಲ ಒಂದು ವಾರದ ಹಿಂದೆ ಸಂಘ ಪರಿವಾರಕ್ಕೆ ಸೇರಿದ ಬಿ.ಎಂ.ಎಸ್. ಇವೇ ಆರ್ಥಿಕ ನೀತಿಗಳ ವಿರುದ್ಧ ನಡೆಸಿದ - ದೇಶದ ಕೋಟ್ಯಾಂತರ ಜನಗಳ ಕಾರ್ಯಾಚರಣೆಯಲ್ಲಿ ಸೇರಲೂ ಆಗದೆ, ದೂರವಿರಲೂ ಆಗದೆ ನಡೆಸಿದ - ಪ್ರತಿಭಟನಾ ಧರಣಿಯೇ ಸಾಕ್ಷಿ. ಏಳು ವರ್ಷಗಳ ಹಿಂದೆ ಕಾಂಗ್ರೆಸ್ ಆರಂಭಿಸಿದ ನೀತಿಗಳಿವು ಎಂದು ಎಲ್ಲರಿಗೂ ಗೊತ್ತು. ರಾಷ್ಟ್ರೀಯ ವೇದಿಕೆ ಇದನ್ನು ಮತ್ತೆ-ಮತ್ತೆ ಹೇಳಿದೆ. ಬಿಜೆಪಿ ಇದನ್ನು ಭಾರೀ ಉತ್ಸುಕತೆಯಿಂದ ಜಾರಿಗೆ ತರುತ್ತಿದೆ ಎಂಬುದೇ, ತಾವೇ ಹಿಂದೆ ವಿರೋಧಿಸಿದ್ದ ಕಾಂಗ್ರೆಸ್ ಪ್ರೇರಿತ ಮಸೂದೆಗಳನ್ನು ಈಗ ಅದೇ ಕಾಂಗ್ರೆಸ್ಸಿಗರ ಬೆಂಬಲದಿಂದ ಪಾಸು ಮಾಡಿಸಿಕೊಳ್ಳುವ ತರಾತುರಿ ಏಕೆ (ಪುಟ 4-5 ರ ಲೇಖನಗಳನ್ನು ನೋಡಿ) ಎಂಬುದೇ ರಾಷ್ಟ್ರೀಯ ವೇದಿಕೆಯ ಪ್ರತಿಭಟನೆಯ ಮುಖ್ಯ ಅಂಶ. ಇತ್ತೀಚೆಗಷ್ಟೆ ತಮ್ಮದೇ ಬಲಿಷ್ಟ ನೆಲೆಗಳಲ್ಲಿ ಜನಗಳ ಕಪಾಳಮೋಕ್ಷ ಪಡೆದೂ ಬಿಜೆಪಿ ಮುಖಂಡರು ಇದನ್ನು ಕಡೆಗಣಿಸಲು ಹತಾಶ ಪ್ರಯತ್ನ ನಡೆಸಿ ತಾವು ಸಾಮ್ರಾಜ್ಯಶಾಹಿಗಳ, ದೇಶಿ ಗುತ್ತೇದಾರಿಗಳ ಬಾಲಬಡುಕರು ಎಂಬುದನ್ನು ಸಾಬಿತುಗೊಳಿಸುತ್ತಿದ್ದಾರೆ.

'ಸರಕಾರ ಈ ಸಾರ್ವತ್ರಿಕ ಕಾರ್ಯಾಚರಣೆಯ ಮೂಲಕ ವ್ಯಕ್ತಗೊಂಡಿರುವ ದೇಶದ ವಾಣಿಗೆ ಕಿವಿಗೊಡಬೇಕು. ವಿಮಾ ವಲಯವನ್ನು ಖಾಸಗೀಕರಿಸುವ, ಪೇಟೆಂಟ್ ತಿದ್ದುಪಡಿ ತರುವ ಮಸೂದೆಗಳನ್ನು ಹಿಂತೆಗೆದುಕೊಳ್ಳಬೇಕು, ಸಾರ್ವಜನಿಕ ವಲಯವನ್ನು ಬೇಕಾಬಿಟ್ಟಿಯಾಗಿ ಖಾಸಗೀಕರಿಸುವ ದಾರಿಯನ್ನು, ದೇಶದ ಆರ್ಥಿಕ ಸಾರ್ವಭೌಮತೆಯನ್ನು ಹಾಳುಗೆಡಹುವ ದಾರಿ ಯನ್ನು ತ್ಯಜಿಸ ಬೇಕು' ಎಂದು ಎಡ ಪಕ್ಷಗಳ ಮುಖಂಡರು ನೀಡಿರುವ ಜಂಟಿ ಹೇಳಿಕೆ ಎಚ್ಚರಿಸಿದೆ.



ಸಂಸತ್ತಿನೆದುರು ಸಂಸತ್ ಸದಸ್ಯರ ಬೆಂಬಲ

ನವೆಂಬರ್ ವಿಧಾನಸಭಾ ಚುನಾವಣೆಗಳು ಸ್ಪಷ್ಟವರ್ಗಪ್ರವೃತ್ತಿಯನ್ನು ತೋರಿವೆ

- ಕಾಂ. ಪ್ರಕಾಶ್ ಕಾರಟ್



ಈ ನವೆಂಬರ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಒಂದು ಸ್ಪಷ್ಟ ವರ್ಗ ಪ್ರವೃತ್ತಿಯಿದೆ. ದಿಲ್ಲಿಯಲ್ಲಿ ನಾವಿದನ್ನು ಸ್ಪಷ್ಟವಾಗಿ ಕಂಡಿದ್ದೇವೆ. ಜನಗಳು ಎಷ್ಟು ಹೆಚ್ಚು ಬಡ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೋ ಅಷ್ಟೇ ಹೆಚ್ಚು ನಿರ್ಣಾಯಕವಾಗಿ ಬಿಜೆಪಿಯ ವಿರುದ್ಧ ಮತನೀಡಿದ್ದಾರೆ. ಇದು ಸ್ಪಷ್ಟವಾಗಿತ್ತು, ಈ ಬಗ್ಗೆ ಸಂದೇಹವೇ ಇಲ್ಲ ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್. 'ಫ್ರಂಟ್‌ಲೈನ್' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅವರು ಹೀಗೆ ಹೇಳಿದ್ದಾರೆ. ಈ ಸಂದರ್ಶನದ ಅನುವಾದವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡಲಾಗಿದೆ.

• ನಿಮ್ಮ ದೃಷ್ಟಿಯಲ್ಲಿ ಈ ಚುನಾವಣಾ ಫಲಿತಾಂಶಗಳ ತಕ್ಷಣದ ಸಂಕೇತಗಳು ಹಾಗೂ ವ್ಯಾಪಕ ಪರಿಣಾಮಗಳೇನೇನು?

ಈ ಚುನಾವಣೆಗಳು ಒಂದು ವಿಶಾಲ ಸ್ವರೂಪ ಹಾಗೂ ಪರಿಣಾಮ ಪಡೆದುಕೊಂಡಿವೆ. ಈ ನಾಲ್ಕರಲ್ಲಿ ಮೂರು ಬಿಜೆಪಿಯ ಬಲಿಷ್ಠ ನೆಲಗಳು - ಬಿಜೆಪಿ ಗಮನಾರ್ಹ ನೆಲೆ ಹೊಂದಿರುವ ಪ್ರದೇಶಗಳಲ್ಲಿ ಅರ್ಧದಷ್ಟಾಗುತ್ತವೆ ಇವು. ಒಂದರ್ಥದಲ್ಲಿ ಇದು ಬಿಜೆಪಿಯ ರಾಜಕೀಯ ಸ್ವೀಕಾರಾರ್ಹತೆಯ ನೇರ ಪರೀಕ್ಷೆಯಾಗಿತ್ತು. ಬಂದಿರುವ ತೀರ್ಪು ಬಹಳ ಸ್ಪಷ್ಟ - ಕೇಂದ್ರದ ಹಾಗೂ ರಾಜ್ಯಗಳ ಬಿಜೆಪಿ ಸರಕಾರಗಳಿಗೆ ಸಾರಾಸಗಟು ತಿರಸ್ಕಾರ. ಇದು ಕೇಂದ್ರದಲ್ಲಿನ ಬಿಜೆಪಿ ಸರಕಾರದ ಮೇಲೆ ಹಾಗೂ ಒಂದು ಪಕ್ಷವಾಗಿಯೂ ಬಿಜೆಪಿಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ನನ್ನ ಭಾವನೆ.

ಈಗಾಗಲೇ ಕೇಂದ್ರ ಸರಕಾರ ಒಂದು ಸಮ್ಮಿಶ್ರ ಕೂಟವಾಗಿ ತೊಂದರೆಯಲ್ಲಿದೆ. ಏಕೆಂದರೆ ಈ ಕೂಟದ ಪಾಲುದಾರರಿಗೆ ಸಾಮೂಹಿಕವಾಗಿ ನಿರ್ಣಯ ಕೈಗೊಳ್ಳಲು, ನಿರ್ವಹಿಸಲು ಹಾಗೂ ಜಾರಿಗೆ ತರಲು ಎಂದೂ ಸಾಧ್ಯವಾಗಿಲ್ಲ. ಇದರಲ್ಲಿ ಒಂದು ಅಂಶವೆಂದರೆ ಅದು ರಾಜಕೀಯ ಅಂಶ. ಅದೆಂದರೆ ಕೇಂದ್ರದ ಸರಕಾರ ಮುಂದುವರಿಯುವುದರಲ್ಲಿ ಗಂಭೀರ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಎರಡನೆಯ ಅಂಶವೆಂದರೆ ಇದು ಬಿಜೆಪಿಯ ಜನ-ವಿರೋಧಿ ದಾಖಲೆಯನ್ನು ಬಯಲಿಗೆಳೆದಿದೆ. ಬೆಲೆಯೇರಿಕೆಗಿಂತ ಹೆಚ್ಚಾಗಿ ಬಿಜೆಪಿ ನಿಜವಾಗಿಯೂ ಒಂದು ವ್ಯಾಪಾರೀ ಪರ, ದೊಡ್ಡ ಬಂಡವಾಳಶಾಹೀ ಪರ ಪಕ್ಷ ಎಂದು ಜನ ಕಾಣಲಾರಂಭಿಸಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಜನ ಅವರನ್ನು ಶಿಕ್ಷಿಸಿರುವುದು ಬೆಲೆಯೇರಿಕೆಯನ್ನು ತಡೆಯುವ ಇಚ್ಛಾಶಕ್ತಿ ಅದರ ಬಳಿಯಿರಲಿಲ್ಲ ಎಂಬ ಕಾರಣಕ್ಕೆ.

ಹೀಗೆ ಇಲ್ಲೊಂದು ಸ್ಪಷ್ಟ ವರ್ಗ ಪ್ರವೃತ್ತಿಯಿದೆ. ದಿಲ್ಲಿಯಲ್ಲಿ ನಾವಿದನ್ನು ಸ್ಪಷ್ಟವಾಗಿ ಕಂಡಿದ್ದೇವೆ. ಜನಗಳು ಎಷ್ಟು ಹೆಚ್ಚು ಬಡಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೋ ಅದಕ್ಕನುಗುಣವಾಗಿ ಅಷ್ಟೇ ಹೆಚ್ಚು ನಿರ್ಣಾಯಕವಾಗಿ ಬಿಜೆಪಿಯ ವಿರುದ್ಧ ಮತನೀಡಿದ್ದಾರೆ. ಇದು ಸ್ಪಷ್ಟವಾಗಿತ್ತು. ಈ ಬಗ್ಗೆ ಸಂದೇಹವೇ ಇಲ್ಲ.

ಮತದಾರರು ತಿರಸ್ಕರಿಸಿದ ಬಿಜೆಪಿಯ ಇನ್ನೊಂದು ಅಂಶವೆಂದರೆ ಅದರ ಸಂಕುಚಿತ ಅಸಹಿಷ್ಣುತೆ. ಈ ಚುನಾವಣೆಯು ಸ್ವಲ್ಪವೇ ಮೊದಲು ಶಿಕ್ಷಣದಲ್ಲಿ ಹಿಂದುತ್ವ ಅಜೆಂಡಾವನ್ನು ತುರುಕಲು ಅದು ಪ್ರಯತ್ನಿಸಿತು, ವಿಫಲಗೊಂಡಿತು. ಮೈತ್ರಿಕೂಟಕ್ಕೊಂದು ರಾಷ್ಟ್ರೀಯ ಅಜೆಂಡಾ ಇದ್ದರೂ ಬಿಜೆಪಿ ತಾನು ಆ ಒಪ್ಪಂದದ ಮಿತಿಯೊಳಗೆ ಕೆಲಸ ಮಾಡಬಯಸುವುದಿಲ್ಲ ಎಂದು ಮತ್ತೆ-ಮತ್ತೆ ತೋರಿಸಿಕೊಂಡಿತು.

ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಧಾಳಿಗಳನ್ನೇ ತಗೊಳ್ಳಿ - ಬಿಜೆಪಿ ಸರಕಾರದಿಂದ ಎರಡನೇ ದರ್ಜೆಯ ಸ್ಥಾನಮಾನ ಬಿಟ್ಟು ಬೇರೇನೂ ನಿರೀಕ್ಷಿಸುವಂತಿಲ್ಲ ಎಂದು ಅದು ಎಲ್ಲಾ ಅಲ್ಪಸಂಖ್ಯಾತರನ್ನು ಎಚ್ಚರಿಸಿತು. ಇದೊಂದು ಅತ್ಯಂತ ಸಣ್ಣ ಕೋಮು. ಆದರೂ ಗುಜರಾತ್, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲೂ ಕೂಡಾ ಕ್ರಿಶ್ಚಿಯನ್ನರ ಮೇಲೆ ನಡೆದ ಧಾಳಿಗಳ ಸ್ವರೂಪವನ್ನು ನೋಡಿ ಹಲವು ಜನ ಚಕಿತರಾಗಿದ್ದಾರೆ.

ಬಿಜೆಪಿ ಪೋಖ್ರಾನ್ ಪರಮಾಣು ಪರೀಕ್ಷಣೆಗಳ ಮೇಲೆ ಜನಗಳಲ್ಲಿ ಸಂಕುಚಿತ ರಾಷ್ಟ್ರವಾದವನ್ನು ಉದ್ರೇಕಿಸಿ ಅದರ ಚುನಾವಣಾ ಲಾಭ ಪಡೆಯಬಹುದೆಂದು ಆಶಿಸಿತ್ತು. ಇದು ಈಡೇರಲಿಲ್ಲ ಎಂಬುದು ಸ್ವಯಂ ವೇದ್ಯ. ಇವೆಲ್ಲವುಗಳಿಂದ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆಯೆಂದರೆ ವಾಜಪೇಯಿ ಸರಕಾರ ಆಳ್ವಿಕೆ ನಡೆಸುವ ತನ್ನ ನೈತಿಕ ಹಕ್ಕನ್ನು ಕಳಕೊಂಡಿದೆ. ತನ್ನ ರಾಜಕೀಯ ಕ್ರಮಬದ್ಧತೆಯನ್ನು ಕಳಕೊಂಡಿದೆ.

• ತಾನು ಸ್ವಯಂಪ್ರೇರಣೆಯಿಂದ ಅಧಿಕಾರವನ್ನು ಬಿಟ್ಟು ಕೊಡುವುದಿಲ್ಲ ಎಂದು ಬಿಜೆಪಿ ಸ್ಪಷ್ಟಪಡಿಸಿದೆ. ಮಿತ್ರ ಪಕ್ಷಗಳು ಹೊರಗೆ ಹೋಗುವ ಸಾಧ್ಯತೆಗಳಿವೆ. ಆದರೆ ಒಂದು ಪರ್ಯಾಯ ದೊರೆಯದೆ ಯಾರೂ ಹಾಗೆ ಮಾಡಲಾರರು. ಮತ್ತು ಈಗಿನ ಲೋಕಸಭೆಯಲ್ಲಿನ ಬಲಾಬಲ ನೋಡಿದರೆ ಅಂತಹದೊಂದು ಪರ್ಯಾಯ ಸಾಧ್ಯ ಎಂದೆನಿಸುವುದಿಲ್ಲ.

ಬಿಜೆಪಿಯೊಂದಿಗೆ ಮಿತ್ರತ್ವ ತಮಗೊಂದು ರಾಜಕೀಯ ಹೊರೆ ಎಂದು ಈ ಪಕ್ಷಗಳಿಗೆ ಅರಿವಾಗಲಿದೆ. ಈಗ ಈ ಭಯದ ಭಾವನೆ ಹೆಚ್ಚುತ್ತಾ ಇದೆ. ಸಮತಾ ಪಾರ್ಟಿ ಬಿಹಾರದಲ್ಲಿ ಬಹಳ ಕೆಟ್ಟ ಫಲಿತಾಂಶ ಕಂಡಿದೆ. ಅಕಾಲಿಗಳು ಕೂಡಾ ಒಂದು ಸ್ಥಾನ ಕಳಕೊಂಡಿದ್ದಾರೆ. ಅವರದೇ ರಾಜಕೀಯ ಲೆಕ್ಕಾಚಾರದಲ್ಲಿ ಈ ಮೈತ್ರಿ ಅವರಿಗೊಂದು ಹೊರೆ ಎಂಬುದನ್ನು ಇದು ತೋರಿಸುತ್ತದೆ. ಈ ಗೋಜಲಿನಿಂದ ಅವರು ಹೇಗೆ ತಪ್ಪಿಸಿಕೊಳ್ಳುತ್ತಾರೋ ನಾವು ಈಗಲೇ ಹೇಳಲು ಸಾಧ್ಯವಿಲ್ಲ. ಈಗಾಗಲೇ ಎಐಎಡಿಎಂಕೆ ದೂರವಿರಲಾರಂಭಿಸಿದೆ. ಈಗೇನಾಗಬಹುದೆಂದರೆ ಈ ಪಕ್ಷಗಳು ತಮ್ಮದೇ ಬೇಡಿಕೆಗಳನ್ನು ಹೆಚ್ಚೆಚ್ಚು ಒತ್ತಾಯಿಸಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತೋರಿಸುತ್ತವೆ. ಇದು ಅಸ್ಥಿರತೆಯನ್ನು ಹಾಗೂ ಈ ಮೈತ್ರಿಕೂಟದ ಅಸಮರ್ಥತತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

• ನಿಮ್ಮ ಪಕ್ಷದ ಹಾಗೂ ಎಲ್ಲಾ ಎಡಪಕ್ಷಗಳ ನಿಲುವೇನಿರುತ್ತದೆ?

ನಮಗೆ ಕೇಂದ್ರ ಸರಕಾರವನ್ನು ಅಸ್ಥಿರಗೊಳಿಸುವ ಅಥವಾ ಬೀಳಿಸುವ ಆತುರವೇನೂ ಇಲ್ಲ. ಅದು ಸಹಜವಾಗಿಯೇ ಆಗಲಿದೆ. ಇದೊಂದು ಸಮಯಸಾಧಕ, ನೀತಿಬಾಹಿರ ಮೈತ್ರಿ ಕೂಟವೆಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ವಿಘಟನೆಯ ಪ್ರಕ್ರಿಯೆ ಮುಂದುವರೆಯುತ್ತದೆ. ನಮ್ಮ ಪ್ರಕಾರ ಇದೊಂದು ಸಕಾರಾತ್ಮಕ ಬೆಳವಣಿಗೆ. ಅದರರ್ಥ ಬಿಜೆಪಿಯಿಂದ ಯಾರನ್ನೇ ಆಗಲಿ ಈಚೆಗೆ ಸೆಳೆಯಲು ಯಾವುದೇ ಕ್ರಮ ಕೈಗೊಳ್ಳುತ್ತೇವೆ, ಇಂತಹುದೇ ಬೇರೇನಾದರೂ ಮಾಡುತ್ತೇವೆ ಎಂದಲ್ಲ.

• ಅಂದರೆ ಪ್ರತಿಯೊಂದು ಧೋರಣೆಯ ಕ್ರಮ ಮತ್ತು ಶಾಸನ ತರುವ ಪ್ರಸ್ತಾವ ಬಿಜೆಪಿ ಮತ್ತು ಅದರ ಮಿತ್ರರ ನಡುವೆ ಕಿತ್ತಾಟದ ಅಂಶವಾಗುತ್ತದೆಯೇ?

ತಮ್ಮ ಕೆಲಸಗಳಲ್ಲಿ ಏನು ತಪ್ಪಿತ್ತು ಎಂದು ಕಂಡು ಹಿಡಿದು ಕಳೆದುಕೊಂಡ ನೆಲೆಯನ್ನು ಮರಳಿ ಪಡೆಯಲು ಪ್ರಯತ್ನಿಸುವ ಬದಲು ಈ ಮೈತ್ರಿಕೂಟ ತಿಕ್ಕಾಟ-ಘರ್ಷಣೆಗಳ ಸುಳಿಯಲ್ಲಿ ಹೆಚ್ಚೆಚ್ಚು ಸಿಕ್ಕಿಕೊಳ್ಳಲಿದೆ.

• ಹಾಗಿದ್ದರೆ ಚಳಿಗಾಲದ ಸಂಸತ್ ಅಧಿವೇಶನ ಈ ಬೇಡಿಕೆಗಳಿಂದ ಸುಮಾರಾಗಿ ಅಸ್ತವ್ಯಸ್ತಗೊಳ್ಳಬಹುದು?

ಪಾಸು ಮಾಡಬಾರದಾದ ಹಲವು ಶಾಸನ ಕ್ರಮಗಳಿವೆ ಎಂದು ನನ್ನ ಭಾವನೆ. ಖಾಸಗೀಕರಣ, ಹತೋಟಿ ರದ್ಧತಿ, ಸಾರ್ವಜನಿಕ ವಲಯ ಶೇರು ಮಾರಾಟ ಇತ್ಯಾದಿ. ದೇಶದ ಹಿತಾಸಕ್ತಿಗೆ ಅನುಗುಣವಾಗಿಲ್ಲ ಎಂದು ನಮಗೆ ಅನಿಸುವ ಮಸೂದೆಗಳ ಮೇಲೆ ಗಮನ ಕೇಂದ್ರೀಕರಿಸಲಾಗುವುದು. ಇನ್ನೊಂದು ಅಂಶವೆಂದರೆ ರಾಜಕೀಯ ಸಮರ. ಅಲ್ಪಸಂಖ್ಯಾತರ ಮೇಲೆ ವ್ಯಾಪಕ ಧಾಳಿಗಳಾಗಿವೆ. ಇದಕ್ಕೆ ತಮ್ಮ ಜನ.ಹೊಣೆ ಎಂದು ಪ್ರಧಾನ ಮಂತ್ರಿಗಳಾಗಲೀ, ಗೃಹಮಂತ್ರಿಗಳಾಗಲೀ ಇನ್ನೂ ಒಪ್ಪಿಕೊಳ್ಳದಿರುವುದು ನಿಜಕ್ಕೂ ಚಕಿತಗೊಳಿಸುವ ಸಂಗತಿ ಎಂದು ನನ್ನ ಅನಿಸಿಕೆ.

• ಆಡಳಿತ ಅಸ್ತವ್ಯಸ್ತತೆ ಹಾಗೂ ಒಂದು ಪರ್ಯಾಯ ರಚಿಸುವ ಪ್ರಯತ್ನ ಇವೆರಡರ ನಡುವೆ ನಿಮ್ಮ ಪಕ್ಷ ಏನು ಮಾಡಬೇಕೆಂದಿದೆ? ಒಂದು ಕಾಂಗ್ರೆಸ್ ನೇತೃತ್ವದ ಸರಕಾರವನ್ನು ನೀವು ಬೆಂಬಲಿಸುತ್ತೀರಾ?

ಕಾಂಗ್ರೆಸ್ಸಿಗಂತೂ ಜನಗಳ ಈ ಬೃಹತ್ ಅಸಂತೃಪ್ತಿಯ ಲಾಭ ದೊರೆತಿದೆ. ಆದರೆ ಅವರು ತಮ್ಮ ಭೂತಕಾಲವನ್ನೂ ನೆನಪಿಸಿಕೊಳ್ಳಬೇಕು. ನರಸಿಂಹರಾಯರು ಸುಮಾರು ಐದು ವರ್ಷದ ಆಳ್ವಿಕೆ ನಡೆಸಿದ ನಂತರವೂ ತಮ್ಮ ಸಂಖ್ಯಾಬಲ ಸುಮಾರು 140 ಕ್ಕೆ ಏಕೆ ಇಳಿಯಿತು ಎಂಬುದನ್ನು ಅವರು ನೆನಪಿಟ್ಟುಕೊಳ್ಳಬೇಕು. ಆರ್ಥಿಕ ನೀತಿಗಳಲ್ಲಂತೂ ತಮ್ಮ ಮೇಲೆ ಅನಗತ್ಯ ಹೊರೆ ಹೇರುವ ಕ್ರಮಗಳನ್ನು ಜನ ಸ್ವೀಕರಿಸುವುದಿಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು. ಈ ಎಲ್ಲಾ ಪ್ರಶ್ನೆಗಳ ಮೇಲೆ ನಮ್ಮ ಸ್ವತಂತ್ರ ಧೋರಣೆಗಳನ್ನು ನಾವು ಉಳಿಸಿಕೊಳ್ಳುತ್ತೇವೆ ಎಂದು ಸ್ಪಷ್ಟ ಪಡಿಸುತ್ತೇವೆ.

• ಹಿಂದುತ್ವ ಅಜೆಂಡಾದಿಂದ ದೂರ ಸರಿದುದರಿಂದ ಇಂತಹ ಚುನಾವಣಾ ಪರಾಭವ ಕಾಣಬೇಕಾಯಿತು ಎಂಬ ಒಂದು ವಿಚಾರವೂ ಬಿಜೆಪಿಯೊಳಗಿದೆ. ಆದ್ದರಿಂದ ಈಗಿರುವ ದಾರಿಯೆಂದರೆ ಈ ಅಜೆಂಡಾವನ್ನು ಮುಂಚೂಣಿಗೆ ತರುವುದು ಎಂಬ ಯೋಚನೆ ಅವರ ಮನದಲ್ಲಿದ್ದಂತಿದೆ.

ಇಂತಹ ಪ್ರವೃತ್ತಿ ಇದ್ದೇ ಇರುತ್ತದೆ. ತಮಾಷೆಯ ಸಂಗತಿಯೆಂದರೆ ರಾಷ್ಟ್ರೀಯ ಅಜೆಂಡಾದ ಆಣೆಯಿಟ್ಟು ಹೇಳುತ್ತಿದ್ದರೂ ಬಿಜೆಪಿ ತನ್ನ ಅಜೆಂಡಾವನ್ನೇ ಬಹಿರಂಗವಾಗಿ ತರುತ್ತಿದೆ. ಬಿಜೆಪಿಯೊಳಗಿನ ಒಂದು ವಿಭಾಗ ಈ ದಿಕ್ಕಿನಲ್ಲಿ ನಾವು ಸಾಕಷ್ಟು ಮಾಡಿಲ್ಲ ಎನ್ನುತ್ತದೆ. ಪರಮಾಣು ಪರೀಕ್ಷಣೆಯಾಗಲೀ, ಅಲ್ಪಸಂಖ್ಯಾತರ ಮೇಲೆ ಧಾಳಿಗಳಾಗಲೀ ಅಥವಾ ಶಿಕ್ಷಣದಲ್ಲಿ ತರಬೇಕೆಂದಿರುವ ಬದಲಾವಣೆಗಳಾಗಲೀ - ಈ ಅಜೆಂಡಾವನ್ನು ತುರುಕಿಸುವ ಪ್ರಯತ್ನಗಳಿಂದಾಗಿಯೇ ಅವರು ಮೂಲೆಗೊತ್ತಲ್ಪಟ್ಟಿದ್ದಾರೆ. ಈ ಮೈತ್ರಿ ಕೂಟವನ್ನು ಮುರಿಯಲು ಅದೊಂದು ಖಂಡಿತವಾದ ದಾರಿ. ಇದು ಅವರಿಗೊಂದು ಗಂಭೀರ ಇಕ್ಕಟ್ಟಿನ ಪ್ರಸಂಗ. ಅವರು ಈಗ ಕಾಶಿ, ಮಥುರಾದ ಬಗ್ಗೆ ಯೋಚಿಸಲಾರಂಭಿಸುವುದಿಲ್ಲ. ಏಕೆಂದರೆ ಅವರಿಗೆ ಸರಕಾರದಲ್ಲಿ ಉಳಿಯಬೇಕಾಗಿದೆ.

ಇದು ಬಿಜೆಪಿ ಆಳ್ವಿಕೆಯಲ್ಲಿ ಪ್ರಜಾಪ್ರಭುತ್ವ

ಪರಮಾಣು ಪರೀಕ್ಷಣೆಯನ್ನು ವಿರೋಧಿಸಿದ್ದಕ್ಕೆ ವಿಜ್ಞಾನಿಯನ್ನು ದಂಡಿಸುವ ಪ್ರಯತ್ನ

ಡಾ. ಟಿ.ಜಯರಾಮನ್ ಚೆನ್ನೈನಲ್ಲಿರುವ ಗಣಿತ ವಿಜ್ಞಾನಿಗಳ ಸಂಸ್ಥೆಯಲ್ಲಿ ದುಡಿಯುತ್ತಿರುವ ಒಬ್ಬ ಹಿರಿಯ ವಿಜ್ಞಾನಿ. ಅವರು ಪರಮಾಣು ಪರೀಕ್ಷಣೆಗಳ ಮೂಲಕ ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರೀಕರಣ ಆರಂಭಗೊಂಡಿರುವುದನ್ನು ವಿರೋಧಿಸಿ ಇತರ 74 ವಿಜ್ಞಾನಿಗಳೊಡಗೂಡಿ ಒಂದು ಹೇಳಿಕೆ ಹೊರಡಿಸಿದ್ದಕ್ಕೆ ಹಾಗೂ 'ಸೆಮಿನಾರ್' ಎಂಬ ಪತ್ರಿಕೆಯಲ್ಲಿ ಪರೀಕ್ಷಣೆಗಳನ್ನು ವಿರೋಧಿಸಿ ಲೇಖನ ಬರೆದದ್ದಕ್ಕೆ ಅವರನ್ನು ವಜಾ ಮಾಡುವ ಪ್ರಯತ್ನ ಕೊನೆಗೂ ವಿಶ್ವಾದ್ಯಂತ ಪ್ರಕಟಗೊಂಡ ವಿರೋಧದಿಂದಾಗಿ ವಿಫಲವಾಗಿದೆ.

ಈ ಸಂಸ್ಥೆ ಅಣುಶಕ್ತಿ ಇಲಾಖೆಯಡಿ ಬರುತ್ತದೆ. ಈ ಇಲಾಖೆಯ ಮುಖ್ಯಸ್ಥ ಹಾಗೂ ಪೋಖ್ರಾನ್ ಸ್ಫೋಟದ ಒಬ್ಬ ಮುಖ್ಯಪಾತ್ರಧಾರಿ ಡಾ. ಆರ್. ಚಿದಂಬರಂ ಒಬ್ಬ ಹಿರಿಯ ವಿಜ್ಞಾನಿಯ ಪ್ರತಿಭಟನೆಗೆ ಕಾರಣವನ್ನು ಅರ್ಥ ಮಾಡಿಕೊಳ್ಳುವ ಬದಲು ಅವರನ್ನು ಶಿಕ್ಷಿಸಲು ಮುಂದಾದರು. ಗಣಿತ ಶಾಸ್ತ್ರಗಳ ಸಂಸ್ಥೆಯ ನಿರ್ದೇಶಕರಿಗೆ ಡಾ. ಟಿ.ಜಯರಾಮನ್ ವಿರುದ್ಧ 'ವರ್ತನೆಯ ನಿಯಮಗಳ' ಉಲ್ಲಂಘನೆಯ ಆರೋಪ ಹೊರಿಸಿ ಕ್ರಮ ಕೈಗೊಳ್ಳುವಂತೆ ಹೇಳಿದರು. ಇದರರ್ಥ ಈ ಪ್ರಸಿದ್ಧ ಭೌತ ವಿಜ್ಞಾನಿಯನ್ನು ವಜಾ ಮಾಡುವುದಷ್ಟೇ ಅಲ್ಲ, ಮುಂದೆ ಭಾರತ ಯಾವ ವೈಜ್ಞಾನಿಕ ಸಂಸ್ಥೆಯಲ್ಲೂ ಅವರು ಕೆಲಸಕ್ಕೆ ಅನರ್ಹರಾಗುತ್ತಾರೆ.

ಈ ವಿಷಯ ಕೇಳಿದ ವಿಜ್ಞಾನಿಗಳು ಇದನ್ನು ಪ್ರತಿಭಟಿಸಿದರು. ಮುಂಬೈ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ಭುವನೇಶ್ವರ ಭೌತಶಾಸ್ತ್ರ ಸಂಸ್ಥೆ ಮತ್ತಿತರ ಸಂಸ್ಥೆಗಳ ವಿಜ್ಞಾನಿಗಳ ಮುತುವರ್ಜಿಯಿಂದ ಪ್ರತಿಭಟನೆಗಳು ಬರಲಾರಂಭಿಸಿದವು. ಮುಂಬೈಯ ಸಂಸ್ಥೆಯ ವಿಜ್ಞಾನಿಗಳು ಒಂದು ತುರ್ತು ಸಭೆ ನಡೆಸಿ ಇ-ಮೈಲ್ ಮೂಲಕ ಗಣಿತಶಾಸ್ತ್ರಗಳ ಸಂಸ್ಥೆಯ ನಿರ್ದೇಶಕರಿಗೆ ಪ್ರತಿಭಟನಾ ಸಂದೇಶ ಕಳಿಸಬೇಕೆಂದು ಕರೆ ನೀಡಿದರು. ಜರ್ಮನಿಯ ಕ್ಯೋಲ್ನ್ ವಿಶ್ವವಿದ್ಯಾಲಯದ ಹಾಗೂ ನ್ಯೂಯಾರ್ಕ್ ವಿಶ್ವವಿದ್ಯಾಲಯದ ಇಬ್ಬರು ವಿಜ್ಞಾನಿಗಳೂ ವಿಶ್ವದ ಎಲ್ಲಾ ವಿಜ್ಞಾನಿಗಳಿಗೆ ಇ-ಮೈಲ್ ಕಳಿಸಿ ಡಾ. ಜಯರಾಮನ್‌ರನ್ನು ಬೆಂಬಲಿಸಬೇಕು, ಏಕೆಂದರೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದೆಂದರೆ ಮೂಲಭೂತ ಸ್ವಾತಂತ್ರ್ಯಗಳ ಉಲ್ಲಂಘನೆ ಎಂದರು.

ಡಾ. ಚಿದಂಬರಂ ರವರ ಆದೇಶದ ಮೇರೆಗೆ ಆಗಸ್ಟ್ 21 ರಂದು ಗಣಿತ ಶಾಸ್ತ್ರಗಳ ಸಂಸ್ಥೆಯ ನಿರ್ದೇಶಕರು ನೀಡಿದ ನೋಟೀಸು 'ಸರಕಾರದ/ಸಂಸ್ಥೆಯ ಯಾವುದೇ ಪ್ರಸಕ್ತ ಧೋರಣೆ ಹಾಗೂ ನೀತಿಯ ಪ್ರತಿಕೂಲ ಟೀಕೆ ಮಾಡುವ ಯಾವುದೇ ಸಾರ್ವಜನಿಕ ಹೇಳಿಕೆ ಅಥವಾ ಅಭಿಪ್ರಾಯ ವ್ಯಕ್ತಪಡಿಸಬಾರದು" ಎಂದು ಎಚ್ಚರಿಸಿತು.

ಇದಕ್ಕೆ ಉತ್ತರವಾಗಿ ಡಾ. ಜಯರಾಮನ್ ತಾನು ಬರೆದ ಲೇಖನ ತನ್ನ ವೈಯಕ್ತಿಕ ಅಭಿಪ್ರಾಯ, ಅದನ್ನು ತಾನು ಕೆಲಸ ಮಾಡುವ ಸಂಸ್ಥೆಯ ಅಭಿಪ್ರಾಯ ಎಂದು ಪರಿಗಣಿಸುವಂತಿಲ್ಲ, ಅದನ್ನು 'ರಾಜಕೀಯ ಸ್ವಭಾವದ ಸಂದೇಶ' ಎಂದೂ ಕಾಣುವಂತಿಲ್ಲ ಎಂದು ಬರೆದರು. ಸಾಂವಿಧಾನಿಕ ಹಾಗೂ ವೈಜ್ಞಾನಿಕ ನೀತಿ-ನಿಯಮಾವಳಿ ಪ್ರಕಾರ ತಾನು ಬರೆದ ಲೇಖನ ಸಮರ್ಥನೀಯ ಎಂದು ಅವರು ಬರೆದರು. ಸಂವಿಧಾನದ 19ನೇ ಕಲ್ಲಮು ಎಲ್ಲಾ ಸಾಮಾನ್ಯ ನಾಗರೀಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿದೆ. 'ವಿಜ್ಞಾನಿಗಳ ನಡುವೆ ನಾವು ಮತ್ತು ಸಮಾಜಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ನಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಅಭಿವ್ಯಕ್ತಗೊಳಿಸುವ ಹಕ್ಕನ್ನು ಸದಾ ಮಾನ್ಯ ಮಾಡಿದ್ದೇವೆ. ಪರಮಾಣು ಶಸ್ತ್ರಾಸ್ತ್ರಗಳ ಸಂದರ್ಭದಲ್ಲಿ ಇದು ಇನ್ನಷ್ಟು ಮುಖ್ಯ' ಎಂದು ಬರೆದ ಡಾ. ಜಯರಾಮನ್‌ರ ಉತ್ತರದಿಂದ ಅಣುಶಕ್ತಿ ಇಲಾಖೆಗೆ ತೃಪ್ತಿಯಾಗಲಿಲ್ಲವಂತೆ.

ಆದರೂ ವಿಜ್ಞಾನಿ ಸಮುದಾಯದಲ್ಲಿ ವ್ಯಕ್ತಗೊಂಡ ಪ್ರತಿಭಟನೆಗಳಿಂದ ಅದು ಹಿಂದೆ ಸರಿಯಬೇಕಾಯಿತು. ತನ್ನ ಮುಖ ಮುಚ್ಚಿಕೊಳ್ಳಲು ಗಣಿತಶಾಸ್ತ್ರಗಳ ಸಂಸ್ಥೆಯ ಪರವಾಗಿ ನೀಡಿದ ಪತ್ರದಲ್ಲಿ "ಇಂತಹ ಕೃತ್ಯಗಳು ನಿಮ್ಮಿಂದ ಪುನರಾವರ್ತನೆಗೊಂಡರೆ ಅಗತ್ಯ ಶಿಕ್ಷಾ ಕ್ರಮಗಳನ್ನು ಕೈಗೊಳ್ಳಬೇಕಾಗಿ ಬರಬಹುದು" ಎಂದು ಅದು ಕೊನೆಗೂ ಸುಮ್ಮನಾಗಬೇಕಾಯಿತು.

ಇದು ವಿಜ್ಞಾನ, ಪ್ರಜಾಪ್ರಭುತ್ವ ಹಾಗೂ ಸಾರ್ವಜನಿಕ ಅಭಿಪ್ರಾಯಕ್ಕೆ ಒಂದು ಮಹತ್ವದ ವಿಜಯ ಎಂದು ವಿಜ್ಞಾನಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಮುಷ್ಕರ ನಿರತ ವೈದ್ಯರ ಮೇಲೆ ಎಸ್ಮಾ ಬಳಕೆಗೆ ಸಿಪಿಐ(ಎಂ) ವಿರೋಧ

ಮುಷ್ಕರ ನಿರತ ವೈದ್ಯರ ವಿರುದ್ಧ ಅಗತ್ಯ ಸೇವಾ ನಿಯಮ ಕಾಯ್ದೆ (ಎಸ್ಮಾ) ಯನ್ನು ಹೇರಿರುವ ರಾಜ್ಯ ಸರಕಾರದ ಕ್ರಮವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ.

1975 ರಿಂದ 1977 ರ ಸಂದರ್ಭದಲ್ಲಿ ಅಂತರಿಕ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿ ಜನ್ಮತಾಳಿದ ಜನತಾದಳ (ಅಂದಿನ ಜನತಾ ಪಕ್ಷ) ಸರಕಾರವು ತೀವ್ರವಾಗಿ ವಿರೋಧಿಸಿದ ಕ್ರೂರ ಎಸ್ಮಾ ಕಾಯಿದೆಯನ್ನು ಇಂದು ಜಾರಿಗೆ ತರುತ್ತಿರುವುದು ವಿಪರ್ಯಾಸ, ಯಾವುದೇ ರಾಜಕೀಯ ವಿವೇಚನೆ ಇಲ್ಲದೆ ಮಾಡಿದ ಕೆಲಸ ಇದಾಗಿದೆ ಎಂದು ಅದು ಹೇಳಿದೆ.

ಸಾರಿಗೆ, ಆಸ್ಪತ್ರೆ, ಮತ್ತಿತರ ಅಗತ್ಯ ಸೇವಾ ನೌಕರರ ಮೇಲೆ ಹೇರಿರುವ ಎಸ್ಮಾ ಕಾಯ್ದೆಯನ್ನು ಕೂಡಲೇ ಹಿಂತೆದುಕೊಳ್ಳಬೇಕೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸರಕಾರವನ್ನು ಆಗ್ರಹಪಡಿಸಿದೆ. ಅದೇ ಸಂದರ್ಭದಲ್ಲಿ ವೈದ್ಯರ ನ್ಯಾಯಯುತ ಬೇಡಿಕೆಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಬೇಕೆಂದು ಅದು ಒತ್ತಾಯಿಸಿದೆ.

ಕರ್ನಾಟಕದಲ್ಲಿ ಕಳೆದವಾರ

ಡಿಸೆಂಬರ್ 4

- ಗ್ರಾಮೀಣರ ಕೃಪಾಂಕ ರದ್ದು ಆಜ್ಞೆಗೆ ಹೈಕೋರ್ಟ್‌ನಿಂದ ತಡೆ ಆಜ್ಞೆ.
- ದೌರ್ಜನ್ಯದ ವಿರುದ್ಧ ಮಂಗಳೂರಿನಲ್ಲಿ ಕ್ರೈಸ್ತರ ಬೃಹತ್ ಪ್ರತಿಭಟನೆ.
- ಮೈಸೂರು-ಮುಂಬಯಿ ನಡುವೆ ರೈಲು ಸಂಚಾರ ಆರಂಭ.

ಡಿಸೆಂಬರ್-5

- ಹೊರರಾಜ್ಯಕ್ಕೆ ಸಕ್ಕರೆ ಸಾಗಿಸಲು ರಾಜ್ಯಸರ್ಕಾರ ಸಮ್ಮತಿ.
- ಪರೀಕ್ಷೆಯಲ್ಲಿ ಕಾಪಿಗೆ ಉತ್ತೇಜನ ಕ್ಕಾಗಿ 106 ಶಿಕ್ಷಣ ಸಂಸ್ಥೆಗಳ ಬಂದ್ ಎಂದರು ಸಚಿವ ಗೋವಿಂದೇ ಗೌಡರು
- 1998 -99ನೇ ಸಾಲಿನ ಕರ್ನಾಟಕ ಸಂಗೀತ ನೃತ್ಯ ಅಕಾಡಮಿ ಪ್ರಶಸ್ತಿ ಪ್ರಕಟ.

ಡಿಸೆಂಬರ್-6

- ಬಾಬ್ರಿ ಮಸೀದಿವರ್ಷಿಕ ಸಂದರ್ಭ ಗಳಲ್ಲಿ ಪ್ರಕರಣದ ಹುಬ್ಬಳ್ಳಿಯಲ್ಲಿ ಗಲಭೆ, ಬಸ್ಸಿಗೆ ಕಲ್ಲು, ಆಟೋಗೆ ಬೆಂಕಿ. ಬೀದರ್‌ನಲ್ಲಿ ನಿಷೇಧಾಜ್ಞೆ. ರಾಜ್ಯದ್ಯಾಂತ ಕರಾಳ ದಿನಾ ಆಚರಣೆ.
- ರಾಜ್ಯಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮ.
- ಕನ್ನಡ ಪತ್ರಿಕೆಗಳಿಗೆ ಜಾಹಿರಾತು ಮತ್ತು ಪ್ರಕಟಣೆಗಳು ಕಡ್ಡಾಯವಾಗಿ ಕನ್ನಡದಲ್ಲಿರಬೇಕು ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ

ಡಿಸೆಂಬರ್-7

- ಕೃಷ್ಣಾಕಣಿವೆ ಯೋಜನೆಗಳ ಸಂಪನ್ಮೂಲ ಸಂಗ್ರಹಕ್ಕೆ ನೀರಾವರಿ ನಿಗಮ ಅಸ್ತಿತ್ವಕ್ಕೆ
- ದೇ. ಜವರೇಗೌಡರಿಗೆ 1998-99ನೇ ಸಾಲಿನ ಪಂಪ ಪ್ರಶಸ್ತಿ
- ಬೆಲ್ಲದ ಬೆಲೆ ಕುಸಿತ ಆತಂಕದಲ್ಲಿ ರೈತ.

ಡಿಸೆಂಬರ್-8

- ಏರೋ ಇಂಡಿಯ-98 ಬೃಹತ್ ವೈಮಾನಿಕ ಪ್ರದರ್ಶನ ಉದ್ಘಾಟನೆ.
- ಬಿ.ಎಸ್.ಪಿ. ಉಪಾಧ್ಯಕ್ಷರ ಮೇಲೆ ಹಲ್ಲೆ; ಸಚಿವ ಗುತ್ತೇದಾರ ವಜಾಕ್ಕೆ ಆಗ್ರಹ, ಬಸ್‌ಗೆ ಕಲ್ಲು, ಬೆಂಕಿ
- ಹೊರ ರಾಜ್ಯಗಳ ಲಾಟರಿ ಟಿಕೆಟ್ ಮಾರಾಟ ನಿರ್ಬಂಧಕ್ಕೆ ಹೈಕೋರ್ಟ್ ತಡೆ.

ಡಿಸೆಂಬರ್-9

- ಸಹಕಾರಿ ಸಂಘಗಳು ನಾಮಕರಣ ಸದಸ್ಯರಿಗೆ ಮತದಾನದ ಹಕ್ಕು ಸುಗ್ರಿವಾಜ್ಞೆಗೆ ರಾಜ್ಯದ ನಿರ್ಧಾರ.
- ಅಧಿಕಾರಿಗಳ ವರ್ಗ: ಹಾಪ್‌ಕಾಮ್ಸ್ ನೌಕರರ ದಿಢೀರ್ ಮುಷ್ಕರ.

ಡಿಸೆಂಬರ್ 10

- ಕಟ್ಟಡ ವಿವಾದ- ಔರಾದ್‌ನಲ್ಲಿ ಗುಂಪು ಘರ್ಷಣೆ ಲಾಠಿಪ್ರಹಾರ, ಗಾಳಿಯಲ್ಲಿ ಗುಂಡು
- ಅನುದಾನ ಕಡಿತ, ಸಿಬ್ಬಂದಿ ಕೊರತೆಯಿಂದಾಗಿ ಮುಚ್ಚುವ ಸ್ಥಿತಿಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ.

ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯ ಕಾ॥ ಯು.ಜನಾರ್ಧನ ನಾಯಕ್ ನಿಧನ

50ರ ದಶಕದಲ್ಲಿ ಕಾರ್ಮಿಕ ಚಳುವಳಿಯಲ್ಲಿ ಧುಮುಕಿ ದ.ಕ. ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿದವರಲ್ಲಿ ಒಬ್ಬರಾದ ಕಾ॥ ಯು ಜನಾರ್ಧನ ನಾಯಕ್ 9-12-98 ರಂದು ರಾತ್ರಿ ಹೃದಯಾಘಾತ ದಿಂದ ನಿಧನರಾದರು. ಅವರಿಗೆ 70 ವರ್ಷ ಪ್ರಾಯವಾಗಿತ್ತು.

ಬಡ ರೈತ ಕುಟುಂಬದಲ್ಲಿ ಜನಿಸಿದ ಕಾಮ್ರೇಡ್ ನಾಯಕ್ 1950 ರಲ್ಲಿ ಹಂಚು ಕಾರ್ಮಿಕರ ಮುಷ್ಕರದಲ್ಲಿ ಭಾಗವಹಿಸಿ ಕಾರ್ಮಿಕ ಚಳುವಳಯತ್ತು ಆಕರ್ಷಿತ ರಾದುದು ಮಾತ್ರವಲ್ಲದೆ 1952 ರಲ್ಲಿ ಬೀಡಿ ಕಾರ್ಮಿಕರ ಚಳುವಳಿಗೆ ನೇತೃತ್ವ ನೀಡಿದರು. 1958 ರಲ್ಲಿ ಈ ಚಳುವಳಿ ತೀವ್ರಗೊಂಡಾಗ ಉಡುಪಿಯಿಂದ ರಾಜಧಾನಿ ಬೆಂಗಳೂರಿಗೆ ಕಾಲು ನಡಿಗೆ ಜಾಥಾದ ಮುಖಂಡತ್ವ ವಹಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾಗಿ ಭೂಸುಧಾರಣೆ ಜ್ಯಾರಿ ಯಾಗುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರ ಹೋರಾಟ ನಡೆದಾಗ ಬಡ ರೈತ ಕುಟುಂಬಗಳಿಗೆ ಭೂಮಿ ಕೊಡಿಸುವಲ್ಲಿ ಕಾಮ್ರೇಡ್ ನಾಯಕ್ ಅವರ ಪಾತ್ರ ಮಹತ್ತರವಾದದ್ದು. ಉಳ್ಳಾಲ ಪಂಚಾಯತ್ ಸದಸ್ಯರಾಗಿ, ಮಂಗಳೂರು ತಾಲ್ಲೂಕು ಬೋರ್ಡ್ ಸದಸ್ಯರಾಗಿ ಜನಪರ ಕೆಲಸಗಳನ್ನು ನಡೆಸಿದರು.

1978 ರಿಂದ 1981ರ ವರೆಗೆ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದ ಕಾ॥ ಯು ಜನಾರ್ಧನ ನಾಯಕ್ ಕೊನೆಯುಸಿರು ವವರೆಗೆ ದ.ಕ. ಜಿಲ್ಲಾ ಸಮಿತಿ ಸದಸ್ಯರಾಗಿ ಪಕ್ಷಕ್ಕಾಗಿ ದುಡಿದರು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿದ್ದರು.

ಕಾಮ್ರೇಡ್ ನಾಯಕ್ ತನ್ನ ಪತ್ನಿ ಹಾಗೂ ಪುತ್ರಿಯನ್ನು ಹಾಗೂ ಅಪಾರ ಅಭಿಮಾನಿಗಳನ್ನು ಆಗಲಿರುತ್ತಾರೆ.

ರಾಜ್ಯ ಸಮಿತಿ ಶ್ರದ್ಧಾಂಜಲಿ

ಕಾಮ್ರೇಡ್ ಯು. ಜನಾರ್ಧನ್ ನಾಯಕ್ ಅವರ ನಿಧನಕ್ಕೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅತೀವ ದುಃಖ ವ್ಯಕ್ತಪಡಿಸಿದೆ. ಭೂಸುಧಾರಣೆಯನ್ನು ಜಾರಿ ಮಾಡುವ ಸಂದರ್ಭದಲ್ಲಿ ದ.ಕ.ಜಿಲ್ಲೆಯಲ್ಲಿ ಗೇಣಿದಾರರ ಪರವಾಗಿ ಹೋರಾಟ ನಡೆಸಿ ಬಡರೈತರಿಗಾಗಿ ದುಡಿದು ಪಕ್ಷವನ್ನು ಕಟ್ಟಿ ಬೆಳೆಸಲು ಅಪಾರವಾಗಿ ಶ್ರಮಿಸಿದ ಕಾಮ್ರೇಡ್ ಜನಾರ್ಧನ್ ನಾಯಕ್ ಅವರ ನಿಧನದಿಂದ ಮಂಗಳೂರು ತಾಲೂಕಿನಲ್ಲಿ ಪಕ್ಷಕ್ಕೆ ಹಾಗೂ ಜಿಲ್ಲೆಯ ರೈತ ಚಳುವಳಿಗೆ ನಷ್ಟವಾಗಿದೆ. ಅವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರೂ ಆಗಿದ್ದರು. ಕಾಮ್ರೇಡ್ ನಾಯಕ್ ಅವರ ತ್ಯಾಗವನ್ನು ಅವರ ಗುರಿಯನ್ನು ಮುಟ್ಟಲು ನಾವೆಲ್ಲ ಶ್ರಮಿಸಬೇಕಾಗಿದೆ. ಎಂದಿರುವ ರಾಜ್ಯ ಕಾರ್ಯದರ್ಶಿ ಮಂಡಳಿ ಈ ಸಂದರ್ಭದಲ್ಲಿ ಪಕ್ಷದ ಜಿಲ್ಲಾ ಸಮಿತಿಗೂ ರೈತ ಸಂಘಟನೆಗೂ, ಎಲ್ಲಕ್ಕೂ ಹೆಚ್ಚಾಗಿ ಕಾಮ್ರೇಡ್ ಯು. ಜನಾರ್ಧನ್ ನಾಯಕ್ ಅವರ ಕುಟುಂಬದವರಿಗೆ ತನ್ನ ಸಂತಾಪವನ್ನು ಸೂಚಿಸಿದೆ.

ಬೀದಿಗಿಳಿದ ಬಿಪಿಎಲ್ ಕಾರ್ಮಿಕರು

ರಾಷ್ಟ್ರದ ಪ್ರತಿಷ್ಠಿತ ಬಿಪಿಎಲ್ ಕಂಪನಿಯ ಕಾರ್ಮಿಕರು ಕಳೆದ ಮೂವತ್ತು ವರ್ಷಗಳ ಕಿರುಕುಳ ಮತ್ತು ಶೋಷಣೆಯಿಂದ ಬೆಸತ್ತು ಕಳೆದ 25 ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ.

ಬಿಪಿಎಲ್ ಆಡಳಿತ ಮಂಡಳಿಯು ಕಾರ್ಮಿಕರು ತಮ್ಮ ಕಷ್ಟಗಳನ್ನು ತೋಡಿಕೊಳ್ಳಲು ಸಂಘ ರಚಿಸಿಕೊಂಡದ್ದೆ ಮಹಾ ಅಪರಾಧವೆಂದು 600 ಮಹಿಳಾ ಕಾರ್ಮಿಕರನ್ನು ಅಮಾನತು ಗೊಳಿಸಿ ವರ್ಗಗೊಳಿಸಿದೆ. ಇದನ್ನು ಪ್ರತಿಭಟಿಸಿ ಕಾರ್ಮಿಕರು ಕಾರ್ಖಾನೆ ಮುಂದೆ ಧರಣಿ ನಡೆಸುತ್ತಿರುವಾಗ ಪೊಲೀಸರು ಮಾಲಿಕ ಪರ ವಕಲತು ವಹಿಸಿ ಕಾರ್ಖಾನೆ ಮುಂದೆ 144 ಸೆಕ್ಷನ್ ಜಾರಿಗೊಳಿಸಿ ತನ್ನ ನೀಚತನ ಪ್ರದರ್ಶಿಸಿದೆ.

ಬಿಪಿಎಲ್ ಕಂಪನಿಯಲ್ಲಿ 8 ಸಾವಿರ ಕಾರ್ಮಿಕರಲ್ಲಿ ಶೇ. 90 ರಷ್ಟು ಮಹಿಳಾ ಕಾರ್ಮಿಕರಿದ್ದು ಅವರ ಸಮಸ್ಯೆಗಳನ್ನು ಬಗೆಹರಿಸಬೇಕಾದ ಕಾರ್ಮಿಕ ಇಲಾಖೆ ತಟಸ್ಥ ನೀತಿ ಅನುಸರಿಸಿ ಮಹಿಳಾ ಕಾರ್ಮಿಕರ ಪಾಲಿಗೆ ಮುಳ್ಳಾಗಿದೆ. ಸರ್ಕಾರಿ ಅಧಿಕಾರಿಗಳು ಕಂಪನಿಗೆ ಗುಲಾಮತನ ಪ್ರದರ್ಶಿಸಿ ಸರ್ಕಾರವನ್ನು ತಪ್ಪು ಹಾದಿಗೆಳೆದಿದೆ ಎಂದು ಕಾರ್ಮಿಕ ಸಂಘ ತಿಳಿಸಿದೆ. ಇದನ್ನು ಪ್ರತಿಭಟಿಸಿ ಕಳೆದ 25 ದಿನಗಳಿಂದ ಕಾರ್ಮಿಕರು ಕೆಲಸ ಬಹಿಷ್ಕರಿಸಿ ಸಿಐಟಿಯು ನೇತೃತ್ವದಲ್ಲಿ ಮುಷ್ಕರ ನಡೆಸುತ್ತಿದ್ದು ಕಂಪನಿಯ ಆಡಳಿತಕ್ಕೆ ತಕ್ಕ ಉತ್ತರ ನೀಡಿದ್ದಾರೆ.

(ಈ ಬಗ್ಗೆ ಪೂರ್ಣವರದಿ ಮುಂದಿನ ಸಂಚಿಕೆಯಲ್ಲಿ)

ನಾರಾಯಣ ಪುರ ಬಲದಂಡೆ ರೈತ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ದೇವದುರ್ಗ ತಾಲೂಕಾ ಸಮಿತಿಯ ಆಶ್ರಯದಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯಿಂದ ವಂಚಿತಗೊಂಡ ಹಳ್ಳಿಗಳ ರೈತ ಪ್ರತಿನಿಧಿಗಳ ಬೃಹತ್ ಸಮಾವೇಶ ಕಾ॥ ವೈ.ರಾಮನ್ ಅಧ್ಯಕ್ಷರು ತಾಲೂಕಾ ಸಮಿತಿ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ತಾಲೂಕಾ ಕಾರ್ಯದರ್ಶಿ ಬಸವನಗೌಡ ದೇಸಾಯಿ ಸ್ವಾಗತಿಸಿದರು, ನಂತರ ಸಮಾವೇಶ ಸಂಘಟಕರಾದ ಡಾ॥ ಚಿಂಚೋಳಿಕರ್ ಡಾ॥ ಹನುಮಂತರಾಯ ನಾಡಗೌಡ ಚಂದ್ರ ಶೇಖರಪಾಟೀಲ ಕ್ಯಾದಿಗ್ಗೇರಿ ಯವರು ನೀರಾವರಿ ಯೋಜನೆಗಾಗಿ ಸರಕಾರಕ್ಕೆ ಒತ್ತಾಯಿಸಿ ಮಾತನಾಡಿದರು.

ಮುಖ್ಯ ಭಾಷಣಕಾರರಾಗಿ ಬಂದ ಕಾಂ॥ ಚಂದ್ರ ಶೇಖರ ಬಾಳೆ ನೀರಾವರಿ ಯೋಜನೆಗಳಿಗಾಗಿ ಪ್ರಾಂತ ರೈತ ಸಂಘದ ಹೋರಾಟದ ಚರಿತ್ರೆಯನ್ನು ವಿವರಿಸಿ ಮಾತನಾಡಿದರು.

1982 ರಿಂದ 1992 ರ ವರೆಗೆ ಪ್ರಾಂತ ರೈತ ಸಂಘ ನಾರಾಯಣ ಪುರ ಬಲದಂಡೆ ಕಾಲುವೆಗಾಗಿ ನಿರಂತರ ಹೋರಾಟ ನಡೆಸಿ ದೇವದುರ್ಗ ತಾಲೂಕಾದ ಜೊತೆ ಲಿಂಗಸಗೂರ ಹಾಗೂ ರಾಯಚೂರು ತಾಲೂಕಿಗೂ ಈ ಯೋಜನೆಯಿಂದ ನಿರಾವರಿಗೆ ಒತ್ತಾಯಿಸಲಾಯಿತು.

ನಂತರ ರೈತರು ದೊಡ್ಡ ಸಂಖ್ಯೆಯಲ್ಲಿ ಬೀದಿಗಿಳಿದರು. ಎಲ್ಲಾ ವಿಭಾಗದ ರಾಜಕಾರಣಿಗಳು ಹೋರಾಟಕ್ಕೆ ಮುಂದೆ ಬಂದರು ಆಗ ಎಲ್ಲರನ್ನು ಒಳಗೊಂಡು ಬೃಹತ್ ಸ್ವಾಭಿಮಾನ ಸಮಾವೇಶ ನಡೆಸಲಾಯಿತು. ಅಂದಿನ ಸಭೆಗೆ ಹೆಚ್‌ಡಿ ದೇವೆಗೌಡ ಅತಿಥಿಗಳಾಗಿ ಬಂದಿದ್ದು ಹೋರಾಟಕ್ಕೆ ಸ್ಫೂರ್ತಿ ನೀಡಿದರೆಂದು ನೆನಪಿಸಿದರು.

ಅಂದು ರಾಜ್ಯ ಹಾಗೂ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದು ಸ್ವಾಭಿಮಾನ ಸಮಾವೇಶಕ್ಕೆ ವಿರೋಧ ಮಾಡಿ ರೈತರಿಗೆ ದ್ರೋಹ ಬಗೆಯಿತು. ಆದರೆ ಸಮಾವೇಶ ಕಾಂ॥ ಚಂದ್ರ ಶೇಖರ ಬಾಳೆಯವರ ನೇತೃತ್ವದಲ್ಲಿ ಒಂದು ಹೋರಾಟ ಸಮಿತಿ ಯನ್ನು ರಚಿಸಿ ನಿರಂತರ ಹೋರಾಟಗಳನ್ನು ಮಾಡಿದ್ದರ ಫಲ ಬಲದಂಡೆ ಕಾಲುವೆ ಜಾರಿಗೆ ಬಂದಿತು ಎಂದು ವಿವರಿಸಿದರು

ಅಂದು ದೇವದುರ್ಗ ತಾಲೂಕಾದ ಅರಕೇರಾ ಗ್ರಾಮದವರೇ ಆದ ವೆಂಕಟೇಶ್ ನಾಯಕರು ಕಾಂಗ್ರೆಸ್ ಲೋಕಸಭಾ ಸದಸ್ಯರಾಗಿ ಹೋರಾಟಕ್ಕೆ ವಿರೋಧಿಸಿದರು. ಮುಂದೆ ಮುಖ್ಯ ಕಾಲುವೆ ಬರುವಾಗ ಸ್ವಂತ ಅವರ ಸ್ವ ಗ್ರಾಮ ಹಾಗೂ ಸುತ್ತ ಮುತ್ತಲಿನ 30 ಕ್ಕೂ ಹೆಚ್ಚಿನ ಹಳ್ಳಿಗಳು ಅದರಿಂದ ವಂಚಿತರಾಗುವಾಗ ಕಾಲುವೆ ಮಾರ್ಗ ಬದಲಿಸಲು ಪ್ರಯತ್ನಿಸಲಿಲ್ಲ ಆದ್ದರಿಂದಲೇ ಈ ಹಳ್ಳಿಗಳು ಇಂದು ನೀರಾವರಿಯಿಂದ ವಂಚಿತಗೊಂಡಿವೆಯೆಂದು ವಿವರಿಸಿದರು.

ಈ ಸಮಾವೇಶಕ್ಕೂ ಅವರು ಬಾರದೆ ಜವಾಬ್ದಾರಿಯಿಂದ ತಪ್ಪಿಸಿಕೊಂಡಿದ್ದಾರೆ, ರೈತರ ಹೋರಾಟದಿಂದ ಮಾತ್ರ ಯೋಜನೆ ಜಾರಿಯಾಗಲು ಸಾಧ್ಯವೆಂದು ಹೋರಾಟಕ್ಕೆ ಕರೆ ಕೊಟ್ಟರು. ಕೊನೆಯಲ್ಲಿ 100 ಜನ ರೈತ ಪ್ರಮುಖರನ್ನೊಳಗೊಂಡ ಹೋರಾಟ ಸಮಿತಿಯನ್ನು ರಚಿಸಲಾಯಿತು. ಹೋರಾಟ ಸಮಿತಿಯ ಪರವಾಗಿ ನೀರಾವರಿ ಸಚಿವರಿಗೆ ಲೋಕಸಭಾ ಸದಸ್ಯ ರಿಗೆ ಶಾಸಕರಿಗೆ ವಿಧಾನ ಪರಿಷತ್ ಸದಸ್ಯ ರಿಗೆ ಒಂದು ತಿಂಗಳ ಗಡುವಿನೊಂದಿಗೆ ಮನವಿಯನ್ನು ಕಳಿಸಲಾಗಿದ್ದು, ಆ ನಂತರ ದೀರ್ಘಕಾಲಿಕ ಹೋರಾಟಕ್ಕೆ ಕರೆಕೊಡಲಾ ಯಿತು. ಕಾಂ॥ ಭೀಮನ್ನನವರ ವಂದನೆಗಳೊಂದಿಗೆ ಸಮಾವೇಶ ಮುಕ್ತಾಯ ಗೊಂಡಿತು.

ಕೋಡಿ ಕಾಲುವೆ ದುರಸ್ಥಿಗೆ ರೈತ ಸಂಘದ ಒತ್ತಾಯ

ಇತ್ತೀಚೆಗೆ ಬೆಂಗಳೂರು ದಕ್ಷಿಣ ತಾಲೂಕು ಉತ್ತರ ಹಳ್ಳಿಗೆ ಸೇರಿದ ಶಾರದ ನಗರ ಶಿವಶಕ್ತಿ ನಗರ ಭೀರೇಶ್ವರ ನಗರಗಳಿಗೆ ಕೆರೆಯ ಕೋಡಿ ಒಡೆದು ನೀರು ನುಗ್ಗಿ ಮನೆಗಳು, ರಸ್ತೆಗಳು ಹಾಳಾಗಿದ್ದು ಸರ್ಕಾರ ಕೂಡಲೇ ಪರಿಹಾರ ಕೈಗೊಳ್ಳುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಮಿತಿ ಒತ್ತಾಯಿಸಿದೆ.

ಕೆರೆಗೆ ಹೊಸದಾಗಿ ಕೋಡಿ ನಿರ್ಮಾಣ. ರಾಜಕಾಲುವೆ ದುರಸ್ಥಿ, ರಸ್ತೆ ಮಧ್ಯೆ ಪೈಪ್ ಅಳವಡಿಸಿ ಚರಂಡಿ ನಿರ್ಮಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮುಖಾಂತರ ರೈತ ಸಂಘ ಒತ್ತಾಯಿಸಿದೆ.

ಅಂಬಲಗಾ ರೈತ ಸಮ್ಮೇಳನ

ಗುಲ್ಬರ್ಗ ಅಳಂದ ತಾಲೂಕಿನ ಕೇರಿ ಅಂಬಲಗಾದ ಕರ್ನಾಟಕ ಪ್ರಾಂತ ರೈತ ಸಂಘದ 2ನೇ ಘಟಕ ಸಮ್ಮೇಳನ ನವೆಂಬರ್ 28 ರಂದು ನಡೆಯಿತು.

ಮುಖ್ಯ ಅತಿಥಿಗಳಾಗಿದ್ದ ಮಾರುತಿ ಮಾನ್ಪಡೆ ಮಾತನಾಡಿ ರೈತರಿಗೆ ಕಳಪೆ ಬೀಜ ಗೊಬ್ಬರ ವಿತರಿಸಿ ರೈತರನ್ನು ದಿವಾಳಿ ಗೊಳಿಸುವತ್ತ ರಾಜ್ಯ ಕೇಂದ್ರ ಸರ್ಕಾರಗಳು ಹೊರಟಿವೆ ಎಂದರು ಡಿ.11 ರಂದು ನಡೆಯುವ ಮುಷ್ಕರಕ್ಕೆ ರೈತರು ಬೆಂಬಲಿಸಬೇಕೆಂದು ಕರೆ ನೀಡಿದರು.

ಸಮ್ಮೇಳನದಲ್ಲಿ ಮಾತನಾಡಿದ ಶಿವ ಶರಣಪ್ಪಾ ಬುದ್ಧಿವಂತ ರೈತ ಕೂಲಿಕಾರರು ಒಟ್ಟಾಗಿ ನಮ್ಮ ಸಂಕಷ್ಟಗಳ ವಿರುದ್ಧ ಹೋರಾಡಬೇಕೆಂದರು. ಸಮ್ಮೇಳನವು ಅತಿವೃಷ್ಟಿ ಹಾನಿಗೆ ಪರಿಹಾರ ವಸತಿಹೀನರಿಗೆ ವಸತಿ ಸೌಲಭ್ಯ ಎಲ್ಲಾ ಬಡವರಿಗೆ ಹಸಿರು ಪಡಿತರ ಚೀಟಿ ಹಾಗೂ ಗ್ರಾಮಕ್ಕೆ ಆರೋಗ್ಯ ಉಪ ಕೇಂದ್ರ ಪಶುಸಂಗೋಪನಾ ಆಸ್ಪತ್ರೆ ಮತ್ತು ಸಿರೋಣಾ ದಿಂದ ಅಷ್ಟಗಾ ರಸ್ತೆ ನಿರ್ಮಾಣ ಕೈಗೊಳ್ಳುವಂತೆ ಒತ್ತಾಯಿಸುವ ನಿರ್ಣಯ ಕೈಗೊಂಡಿತು.

ನೂತನ ಸಮಿತಿ:

ಅಧ್ಯಕ್ಷರು ಶಿವಶರಣಪ್ಪಾ ಬುದ್ಧಿವಂತ ಉಪಾಧ್ಯಕ್ಷರು ಅರ್ಜುನ ಶೃಂಗೇರಿ ಕಾರ್ಯದರ್ಶಿ ಮಾರುತಿ.ಬಿ. ಜ್ಯೋತಿ ಜಂಟಿ ಕಾರ್ಯದರ್ಶಿ ಶಿವಾನಂದ ಬುದ್ಧಿವಂತ, ಸಂಘಟನಾ ಕಾರ್ಯದರ್ಶಿ ಹನುಮಂತ.ಕೆ. ಜ್ಯೋತಿ ಹಾಗೂ ಖಜಾಂಚಿ ಮಾಣಿಕರಾದ ಬಿರೇದಾರ.

ವಿದ್ಯುತ್ ಪಂಪ್ ಸೆಟ್ಟುಗಳಿಗೆ ಮತ್ತೆ ಠೇವಣಿ ಸಂಗ್ರಹ ರೈತ ಸಂಘದ ತೀವ್ರ ವಿರೋಧ

ಕುಂದಾಪುರ: ಕರ್ನಾಟಕ ವಿದ್ಯುತ್ ಚ್ಛಕ್ತಿ ಮಂಡಳಿಯ ಕುಂದಾಪುರ ವಿಭಾಗದ ಇಂಜಿನೀಯರ್ ಹಿಂದೆ ವಿದ್ಯುತ್ ಅಳವಡಿಸಿದ ಪಂಪ್ ಸೆಟ್ಟುಗಳಿಗೆ ಠೇವಣಿ ಸಂಗ್ರಹ ಮಾಡಿದ್ದು, ಹೆಚ್ಚುವರಿಯಾಗಿ ಮತ್ತೆ ಠೇವಣಿ ಕಟ್ಟಲು ರೈತರಿಗೆ ನೋಟಿಸ್ ನೀಡಿರುವುದು ಭಾರಿ ಸುಲಿಗೆ ಕ್ರಮವಾಗಿದೆ ಎಂದಿರುವ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಸಮಿತಿ ಈ ನೀತಿಯನ್ನು ಕೈ ಬಿಡುವಂತೆ ಕರ್ನಾಟಕ ವಿದ್ಯುತ್ ಮಂಡಳಿಗೆ ಆಗ್ರಹಿಸಿದೆ.

ಕೋಟೆಕಾರು ಸರ್ಕಲ್ 12ನೇ ರೈತ ಸಮ್ಮೇಳನ

ಮಂಗಳೂರು ತಾಲೂಕು ಕೋಟೆಕಾರು ಸರ್ಕಲ್‌ನ ಕರ್ನಾಟಕ ಪ್ರಾಂತ ರೈತ ಸಂಘದ 12 ನೇ ಸಮ್ಮೇಳನವು ನವೆಂಬರ್ 15 ರಂದು ಕುತ್ತಾರ ಪದವಿನಲ್ಲಿ ಸಂಘದ ಅಧ್ಯಕ್ಷ ಪಿ. ಪರಮೇಶ್ವರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ದ.ಕನ್ನಡ ಜಿಲ್ಲಾ ಕೃತ ಸಂಘದ ಮುಂದಾಳು ಕೆ. ಆರ್.ಶ್ರೀಯಾನ್ ಸಮ್ಮೇಳನ ಉದ್ಘಾಟಿಸಿ ಮಾತನಾಡಿ ರೈತರು ತಮ್ಮ ಬೆಳೆಗೆ ನ್ಯಾಯಯುತ ಬೆಲೆ ಕೇಳಿದರೆ ಗುಂಡಿಕ್ಕಿ ಕೊಲ್ಲುವಂತಹ ಮಟ್ಟಕ್ಕೆ ಸರ್ಕಾರಗಳು ಇಳಿದಿರುವುದನ್ನು ಖಂಡಿಸಿದರು.


ಜಿಲ್ಲಾ ಅಧ್ಯಕ್ಷರಾದ ಜನಾರ್ಧನ, ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ರೈತರು ಹೋರಾಟದ ಮೂಲಕ ನ್ಯಾಯ ಬೆಲೆ ಪಡೆಯಲು ಸಾಧ್ಯವೆಂದರು.

ಡಿ.ವೈ.ಎಫ್.ಐ.ನ ಬಾಬು ಪಿಲಾರು, ಸಿಪಿಐ(ಎಂ) ಸಾಲ್ಯಾನ್, ಎಸ್.ಎಫ್.ಐ.ನ ಭಾಗೀರಥಿ, ಆಟೋ ಚಾಲಕ ಸಂಘದ ಜಯಂತ್ ನಾಯಕ್, ಬೀದಿ ವ್ಯಾಪಾರ ಸಂಘದ ಕೆ. ಮಂಜಪ್ಪ, ಜೆ.ಎಂ.ಎಸ್.ನ ವಾಣಿ ಉಚ್ಚಿಲ್ ಗ್ರಾಮ ಪಂಚಾಯತ್ ನೌಕರರ ಹಿಲ್ಡಾ ಡಿಸೋಜ ಶುಭಕೋರಿದರು.

ಸಮ್ಮೇಳನವು ಕೆಳಗಿನ ಠರಾವುಗಳನ್ನು ಅಂಗೀಕರಿಸಿತು. ಎಲ್ಲಾ ಗ್ರಾಮಗಳ ತೋಡುಗಳ ಹೂಗೆ ತೆಗೆದು ಸಾಗುವಳಿಗೆ ಅನುಕೂಲಿಸುವುದು ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಪ್ರತಿಗ್ರಾಮಗಳಿಗೂ ಗ್ರಾಮ ಸೇವಕರ ನೇಮಕ ಎಲ್ಲಾ ಹಳ್ಳಿಗೂ ಕುಡಿಯುವ ನೀರಿನ ವ್ಯವಸ್ಥೆ ಜಾರಿಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿದೆ.

ಹೊಸ ಪದಾಧಿಕಾರಿಗಳು:

ಅಧ್ಯಕ್ಷರು- ಪಿ. ಪರಮೇಶ್ವರ ಶೆಟ್ಟಿ, ಉಪಾಧ್ಯಕ್ಷರುಗಳು ಬಾಬುಶೆಟ್ಟಿ, ದುಗ್ಗಪ್ಪ ಪಾವೂರು, ಸಂಕಪ್ಪ ಕರ್ಕೇರ, ಉಗ್ಗಪ್ಪ ಶೆಟ್ಟಿ, ಕಾರ್ಯದರ್ಶಿ ಕಟ್ಟೆ ಮಾರ ಶ್ರೀನಿವಾಸ ಆಳ್ವ. ಸಹಕಾರ್ಯದರ್ಶಿಗಳು ಸಂಜೀವ ಪಿಲಾರು ಜಗನ್ನಾಥ ಕುತ್ತಾರು ಜನರ್ಧನ ಅಮೀನ್, ಹರ್ಷವರ್ಧನ ಉಳ್ಳಾಲ ಖಜಾಂಚಿ ಲೋಕಯ್ಯ ಪನೀರ್.



ಏಜೆನ್ಸಿದಾರರಲ್ಲಿ ಮತ್ತೊಮ್ಮೆ ಮನವಿ

'ಐಕ್ಯರಂಗ' ಅತ್ಯುತ್ತಮ ಹಾಗೂ ಅತ್ಯುಪಯುಕ್ತ ರೀತಿಯಲ್ಲಿ ಪ್ರಕಟವಾಗುವಲ್ಲಿ ನಮ್ಮ ಮಾನ್ಯ ಏಜೆನ್ಸಿದಾರರ ಸಹಕಾರದ ಮಹತ್ವವನ್ನು ನಾವು ಮತ್ತೆ - ಮತ್ತೆ ನೆನಪಿಸುತ್ತಾ ಬಂದಿದ್ದೇವೆ. ಅಭೂತಪೂರ್ವ ಬೆಲೆಯೇರಿಕೆಯ ಈ ದಿನಗಳಲ್ಲಿ ಇದು ಇನ್ನಷ್ಟು ಮುಖ್ಯವಾಗಿದೆ. ಆದರೆ ದುರದೃಷ್ಟವಶಾತ್ ಕೆಲವು ಏಜೆನ್ಸಿದಾರರು ಪರಿಸ್ಥಿತಿಯ ಗಂಭೀರತೆಯನ್ನು ಇನ್ನೂ ಅರಿತುಕೊಂಡಂತಿಲ್ಲ. ಇಂತಹ ಏಜೆನ್ಸಿದಾರರು ಇನ್ನು ಒಂದು ತಿಂಗಳೊಳಗೆ ತಮ್ಮ ಬಾಕಿಯನ್ನು ಚುಕ್ತಾ ಮಾಡದಿದ್ದರೆ ಅವರಿಗೆ ಜನವರಿ 1999 ರಿಂದ ಪತ್ರಿಕೆಯನ್ನು ನಿಲ್ಲಿಸದೆ ನಿರ್ವಾಹವಿಲ್ಲವಾಗಿದೆ. ಸಂಬಂಧಪಟ್ಟ ಏಜೆನ್ಸಿದಾರರಿಗೆ ಈ ಬಗ್ಗೆ ಪ್ರತ್ಯೇಕವಾಗಿ ಪತ್ರಗಳನ್ನು ಈಗಾಗಲೇ ಕಳಿಸಲಾಗಿದೆ. ಇತರರು ತಮ್ಮ ಬಾಕಿಯನ್ನು ಫೆಬ್ರವರಿ ಅಂತ್ಯದೊಳಗೆ ಕನಿಷ್ಟ ಮೂರು ತಿಂಗಳ ಮಟ್ಟಕ್ಕೆ ಇಳಿಸಬೇಕು ಎಂದೂ ಕೇಳಿಕೊಳ್ಳುತ್ತೇವೆ. ದುಡಿಯುವ ಜನರ ಈ ಪತ್ರಿಕೆಯ ಪ್ರಕಟಣೆಯಲ್ಲಿ ಸಂಪೂರ್ಣ ಸಹಕಾರ ನೀಡಬೇಕೆಂದು ಮತ್ತೊಮ್ಮೆ ಏಜೆನ್ಸಿದಾರರಲ್ಲಿ ವಿನಂತಿಸಿಕೊಳ್ಳುತ್ತೇವೆ.

- ಐಕ್ಯರಂಗ

ಸಂಸತ್ತಿನ ಮುಂದೆ ಬಹಳ ಕಾಲದಿಂದ ಇರುವ ಹಲವು ಮಸೂದೆಗಳಿವೆ - ಮಹಿಳಾ ಮೀಸಲಾತಿ, ಕೃಷಿ ಕಾರ್ಮಿಕರ ಸಮಗ್ರ ಮಸೂದೆ, ಲೋಕಪಾಲ್, ಚುನಾವಣಾ ಸುಧಾರಣೆಗಳು ಇತ್ಯಾದಿ. ಆದರೆ ಈ ಬಗ್ಗೆ ಯಾವುದೇ ಲಕ್ಷ್ಯ ಕೊಡದೆ ಬಿಜೆಪಿ ನೇತೃತ್ವದ ಸರಕಾರ ಎರಡು ಮಸೂದೆಗಳ ಬಗ್ಗೆ ಭಾರೀ ತರಾತುರಿ ತೋರಿಸುತ್ತಿದೆ. ಅವೆಂದರೆ ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ ಮತ್ತು ಪೇಟೆಂಟ್ ತಿದ್ದುಪಡಿ ಮಸೂದೆ. ಇವೆರಡೂ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಮಾರಕವಾದ ಭಾರತದ ದುಡಿಯುವ ಜನಸಮೂಹಗಳ ಖಂಡತುಂಡವಾಗಿ ವಿರೋಧಿಸುವ ಮಸೂದೆಗಳು - ಡಿಸೆಂಬರ್ ೧೧ ರ ಮುಷ್ಕರದ ಪ್ರಮುಖ ಬೇಡಿಕೆಗಳಲ್ಲಿ ಎರಡು ಎಂಬುದು ಗಮನಾರ್ಹ. ಅಷ್ಟೇ ಅಲ್ಲ ಈ ಎರಡೂ ಹಿಂದೆ ಸ್ವತಃ ಬಿಜೆಪಿಯೇ ವಿರೋಧ ಪಕ್ಷ ವಾಗಿದ್ದಾಗ ವಿರೋಧಿಸಿದ ಮಸೂದೆಗಳು!

ರಾಷ್ಟ್ರೀಯ ಹಿತಾಸಕ್ತಿಗೆ ಕೊಡಲಿಯೇಟು ಹಾಕಹೊರಟಿರುವ ಬಿಜೆಪಿ ಸರಕಾರದ ಎರಡು ಮಸೂದೆಗಳು

ಪೇಟೆಂಟ್ ತಿದ್ದುಪಡಿ ಮಸೂದೆ

ಸಾಮ್ರಾಜ್ಯಶಾಹಿಗಳ ಬಾಲಬಡುಕರಾಗಲು ತರಾತುರಿ?

ಡಿಸೆಂಬರ್ ಮೂರನೇ ವಾರದಲ್ಲಿ ಕೈಗಾರಿಕಾ ಮಂತ್ರಾಲಯು ಒಂದು ಮಸೂದೆಯನ್ನು ಮಂಡಿಸಲಿದೆ. ಇದು 1995-96 ರಲ್ಲಿ ರಾಜ್ಯಸಭೆ ಪಾಸು ಮಾಡಲು ನಿರಾಕರಿಸಿದ ಮಸೂದೆ. ಇನ್ನೊಂದು ಮಸೂದೆ-ಜೈವಿಕ ವೈವಿಧ್ಯತೆ ಕುರಿತ ಮಸೂದೆ -ಯನ್ನು ಪರಿಸರ ಮಂತ್ರಾಲಯ ಮಂಡಿಸಲಿದೆ. ಸ್ವಲ್ಪ ತಡವಾಗಿ ಇನ್ನೊಂದು ಮಸೂದೆಯೂ ಬರಬಹುದು - ಇದು 'ಸಸ್ಯ ಅಭಿವೃದ್ಧಿಗಾರರ ಹಕ್ಕು' ಕುರಿತಾದದ್ದು. ಇದನ್ನು ಕೃಷಿಮಂತ್ರಾಲಯ ಮಂಡಿಸುತ್ತದೆ. ಇವು ಮೂರೂ ಪೇಟೆಂಟ್ ಸಂಬಂಧಿತ ಮಸೂದೆಗಳು.

ಇವುಗಳಲ್ಲಿ EMR ಮತ್ತು ಮೇಲ್‌ಬಾಕ್ಸ್(ಮೀಸಲು ಮಾರುಕಟ್ಟೆ ಹಕ್ಕು ಮತ್ತು ಅಂಚೆಪೆಟ್ಟಿಗೆ)ಎಂದು ಕರೆಯಲಾಗುವ ಮೊದಲನೆಯ ಮಸೂದೆಗೆ ಬಿಜೆಪಿ ಸರಕಾರ ಆದ್ಯತೆ ನೀಡುತ್ತಿದೆ. ಏಕೆಂದರೆ 'ವಿಶ್ವವ್ಯಾಪಾರ ಸಂಘಟನೆ'(WTO) ಯ ವಿವಾದ ಇತ್ಯರ್ಥ ಮಂಡಳಿ ಭಾರತ ಏಪ್ರಿಲ್ 19, 1999 ರೊಳಗೆ ಈ ಮಸೂದೆಯನ್ನು ಪಾಸು ಮಾಡಬೇಕೆಂದು ಹೇಳಿದೆ, ಆದ್ದರಿಂದಲೇ ಈ ತರಾತುರಿ ಎನ್ನುತ್ತಿದೆ ಈ ಬಿಜೆಪಿ ಸರಕಾರ.

ಆದರೆ ನಿಜವಾಗಿ ಡಬ್ಲ್ಯು.ಟಿ.ಓ.ನ. ಈ ಒತ್ತಡವೇನೇ ಇದ್ದರೂ ಸರಕಾರ ಇಷ್ಟೊಂದು ತರಾತುರಿ ತೋರುವ ಅವಶ್ಯಕತೆಯಿಲ್ಲ. ಏಕೆಂದರೆ ಸಂಸತ್ತಿನ ಪ್ರಸಕ್ತ ಅಧಿವೇಶನ ಡಿಸೆಂಬರ್ 23 ಕ್ಕೆ ಮುಗಿಯುತ್ತದೆ. ಮುಂದಿನ ಅಧಿವೇಶನ ಫೆಬ್ರವರಿ ಮೂರನೇ ವಾರದಲ್ಲೇ ಸೇರಲಿದೆ. ಮಧ್ಯದ ಈ ಅವಧಿಯಲ್ಲಿ ಈ ಮಸೂದೆ ಎತ್ತಿರುವ ಕ್ಲಿಷ್ಟ ಪ್ರಶ್ನೆಗಳನ್ನು ವಿವರವಾಗಿ ಪರಿಶೀಲಿಸಲು ಅವಕಾಶವಿದೆ. ಅದಕ್ಕಾಗಿ ಈ ಮಸೂದೆಯನ್ನು ಸಂಸತ್ತಿನ ಸ್ಥಾಯೀ ಸಮಿತಿಗೆ ಅಥವಾ ಸೆಲೆಕ್ಟ್ ಕಮಿಟಿಗೆ ಕಳಿಸಬಹುದಿತ್ತು. ಆದರೆ ಬಿಜೆಪಿ ಸರಕಾರ ಇಂತಹ ಯಾವುದೇ ಪರೀಕ್ಷೆಗೆ ಈ ಮಸೂದೆಯನ್ನು ಒಡ್ಡಲು ಸಿದ್ಧವಿಲ್ಲ. ಸ್ವತಃ ಬಿಜೆಪಿ ಮುಖಂಡರೇ ನಾಲ್ಕು ವರ್ಷಗಳ ಹಿಂದೆ ಇದೇ ಮಸೂದೆಯ ಬಗ್ಗೆ ಏನೆಲ್ಲಾ ಹೇಳಿದ್ದರು ಎಂಬುದನ್ನು ನೆನಪಿಸಿಕೊಂಡರೆ(ಬಾಕ್ಸ್ ನೋಡಿ) ಈ ತರಾತುರಿ ಯಾರಿಗಾದರೂ ಆಶ್ಚರ್ಯವುಂಟು ಮಾಡದಿರದು.

ಎಲ್ಲಿ ಹೋಯಿತು ದೇಶ ಪ್ರೇಮದ ಬಡಾಯಿ?

ಇಷ್ಟೇ ಅಲ್ಲ, ಏಪ್ರಿಲ್ 19, 1999 ರ ಗಡುವನ್ನು ಭಾರತ ಮಾನ್ಯ ಮಾಡದಿದ್ದರೆ ಏನಾಗುತ್ತದೆ? ಪ್ರಳಯವೇನೂ ಆಗುವುದಿಲ್ಲ ಎನ್ನುತ್ತಾರೆ ಸಿಪಿಐ(ಎಂ) ರಾಜ್ಯಸಭಾ ಸದಸ್ಯರೂ, ಆರ್ಥಿಕ ತಜ್ಞರೂ ಆದ ಡಾ. ವಿಪ್ಲವ್ ದಾಸ್‌ಗುಪ್ತಾ. ಡಬ್ಲ್ಯು.ಟಿ.ಓ. ಸದಸ್ಯತ್ವಕ್ಕೆ ಇವು ಶರತ್ತುಗಳೇನೋ ಹೌದು. ಆದರೆ ಭಾರತ ಈಗಾಗಲೇ ಸದಸ್ಯತ್ವ ಪಡೆದಿದ್ದು ಈ ಸದಸ್ಯತ್ವದಿಂದ ಉಚ್ಛಾಟನೆ ಅಷ್ಟೇನೂ ಸುಲಭವಲ್ಲ. ನಿಜ, ಅಮೆರಿಕಾ ಮತ್ತಿತರ ದೇಶಗಳು ಆರ್ಥಿಕ ನಿರ್ಬಂಧಗಳನ್ನು ಹಾಕಬಹುದು. ಆದರೆ ಪೋಖ್ರಾನ್ ಸ್ಫೋಟ ಮಾಡಿ ನಾವು ಎದೆಸೆಟೆಸಿ ನಿಂತಿದ್ದೇವೆ ಎಂದು ಬಡಾಯಿ ಕೊಚ್ಚುವ ಸರಕಾರ ಈ ಬಗ್ಗೆ ಏಕೆ ಹೆದರಬೇಕು? ಈ ನಿರ್ಬಂಧಗಳು ನಮಗೆ ಮಾತ್ರವಲ್ಲ, ಆ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೂ ತಟ್ಟುತ್ತವೆ, ಏಕೆಂದರೆ ಅವು ಭಾರತದ ಅಗಾಧ ಮಾರುಕಟ್ಟೆಯನ್ನು ನಿರ್ಲಕ್ಷಿಸುವಂತಿಲ್ಲ ಎಂದು ಇದೇ ಸರಕಾರದ ವಕ್ತಾರರು ಹೇಳುತ್ತಾ ತಿರುಗುತ್ತಿರಲಿಲ್ಲವೇ? ಅದು ಇಲ್ಲಿಯೂ ಅನ್ವಯವಾಗುವುದಿಲ್ಲವೇ? ಅಮೆರಿಕಾ ಸೂಪರ್ 301 ಇತ್ಯಾದಿಗಳನ್ನು ಬಳಸುವ ಬೆದರಿಕೆಯನ್ನು ಒಡ್ಡುತ್ತಲೇ ಇದೆ. ಆದರೆ ಅವೆಲ್ಲಾ ಕೇವಲ ಬೆದರಿಕೆಗಳಾಗಿಯೇ ಉಳಿದಿಲ್ಲವೇ? ಎಲ್ಲಿ ಓಡಿ ಹೋಯಿತು ಈ ಬಿಜೆಪಿ ಮಂದಿಯ ರಾಷ್ಟ್ರಪ್ರೇಮ, ಬಡಾಯಿಗಳು? - ಇದು ಪ್ರಜಾಪ್ರಭುತ್ವ ವಾದಿಗಳು ಕೇಳುವ ಪ್ರಶ್ನೆ.

ಬೇರೆ ದಾರಿ ಇದೆ

ಡಬ್ಲ್ಯು.ಟಿ.ಓ. ಮತ್ತು ಅಮೆರಿಕಾದ ಒತ್ತಡಗಳಿಗೆ ತಲೆಬಾಗದೆ ಮೊಣಕಾಲೂರುವುದನ್ನು ಬಿಟ್ಟು ಈ ಮಧ್ಯದ ಸಮಯಾವಕಾಶವನ್ನು ಬಳಸಿ ನಾವು ಮೂರನೇ ಜಗತ್ತಿನ ದೇಶಗಳನ್ನು ಅಣಿನೆರೆಸಿ ಮುಂದೆ 1999-2000 ರಲ್ಲಿ ಈ ಟ್ರಿಪ್ಸ್(ವ್ಯಾಪಾರೀ ಸಂಬಂಧೀ ಬೌದ್ಧಿಕ ಆಸ್ತಿ ಹಕ್ಕುಗಳು) ಒಪ್ಪಂದದ ಮರು ವಿಮರ್ಶೆಯಾಗುವಾಗ ಮೂರನೇ ಜಗತ್ತಿನ ದೇಶಗಳಿಗೆ ಅನುಕೂಲವಾಗುವಂತೆ ಬದಲಾವಣೆಗಳನ್ನು ತರಲು ಒತ್ತಾಯ ಹೇರಲು ಸಾಧ್ಯವಿದೆ. ಜಿ-15, ಜಿ-77, ಏಸಿಯನ್ ಆಂಡಿಯನ್ ಫ್ಯಾಕ್ಟ್‌ನಂತಹ ವೇದಿಕೆಗಳಲ್ಲಿ, ಚೀಣಾ, ಬ್ರೆಝಿಲ್, ರಶ್ಯಾದಂತಹ ದೇಶಗಳೊಡನೆ ಮಾತ್ರವಲ್ಲ ಇಟಲಿ, ಬೆಲ್ಜಿಯಂ, ಡೆನ್ಮಾರ್ಕ್ ಮತ್ತು ಹಾಲೆಂಡ್‌ನಂತಹ ಯುರೋಪಿಯನ್ ದೇಶಗಳೊಂದಿಗೂ ಚರ್ಚಿಸಿ ಒಂದು ಹೊಸ ಅಂತರ್ರಾಷ್ಟ್ರೀಯ ವಾತಾವರಣ ಮೂಡಿಸಿ 1994 ರ ಗ್ಯಾಟ್ ಒಪ್ಪಂದ ಬಡ ದೇಶಗಳಿಗೆ ಮಾಡಿರುವ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಬಹುದು ಎನ್ನುತ್ತಾರೆ ಡಾ. ದಾಸ್‌ಗುಪ್ತಾ. ಆದರೆ 'ಸ್ವದೇಶಿ' ಬಗ್ಗೆ ಟೊಳ್ಳು ಮಾತುಗಳಿದ್ದಾಗ್ಲೂ ಸಾಮ್ರಾಜ್ಯಶಾಹಿಗಳ ಬಾಲಹಿಡಿಯುವುದಷ್ಟೇ ಈ ಬಿಜೆಪಿ ಸರಕಾರಕ್ಕೆ ಬೇಕಿರುವಂತಿದೆ.

ಪೇಟೆಂಟ್ ಎಂದರೇನೆಂಬುದು ನಮ್ಮ ಓದುಗರಿಗೆ ಈಗಾಗಲೇ ತಿಳಿದಿದೆ. ಯಾವುದೇ ಹೊಸ ಹಾಗೂ ಪ್ರಯೋಜನ ಕಾರಿ ಯಂತ್ರ, ಔಷಧಿ ಇತ್ಯಾದಿಗಳನ್ನು ಕಂಡುಹಿಡಿದವರಿಗೆ ಆ ಅನ್ವೇಷಣೆಗಳ ಮೇಲೆ ಒಂದು ನಿರ್ದಿಷ್ಟ ಅವಧಿಯವರೆಗೆ ಗುತ್ತೇದಾರಿ ಹಕ್ಕು ನೀಡುವುದೇ ಪೇಟೆಂಟ್ ಹಕ್ಕು. ಅದನ್ನು ಬಳಸುವವರು ಪೇಟೆಂಟ್ ಧಾರಕರ ಶರತ್ತುಗಳನ್ನು ಪಾಲಿಸಬೇಕು. 1994 ರಲ್ಲಿ ಗ್ಯಾಟ್ ಒಪ್ಪಂದ ಆಗುವವರೆಗೆ ಪ್ರತಿಯೊಂದು ದೇಶ ಈ ಪೇಟೆಂಟ್‌ಗಳನ್ನು ಕುರಿತಂತೆ ತಮ್ಮದೇ ಕಾನೂನುಗಳನ್ನು ಹೊಂದಿದ್ದವು. ಆದರೆ ಮೇಲೆ ಹೇಳಿದ ಗ್ಯಾಟ್ ಒಪ್ಪಂದದ ಟ್ರಿಪ್ಸ್ ಭಾಗ ಇದನ್ನು ಬದಲಿಸಿ ಎಲ್ಲಾ ದೇಶಗಳೂ ಒಂದೇ ಮಾದರಿಯ ಪೇಟೆಂಟ್ ಕಾನೂನುಗಳನ್ನು ಅಂಗೀಕರಿಸಬೇಕು ಎಂದು ತಾಕೀತು ಮಾಡಿದರು. ಭಾರತದಂತಹ ದೇಶಗಳು 2005 ಇಸ್ವಿಯೊಳಗೆ ತಮ್ಮ ಕಾನೂನುಗಳನ್ನು ಬದಲಾವಣೆ ಮಾಡಬೇಕು ಎಂದು ಹೇಳಲಾಯಿತು. ಈ ಮೂಲಕ ಯಾವುದೇ ವಸ್ತುವೆನ್ನು ಯಾವುದೇ ದೇಶದಲ್ಲಿ ಪೇಟೆಂಟ್ ಮಾಡಿದ್ದರೂ ಅವುಗಳ ಮಾರಾಟದ ಹಕ್ಕು ಈ ಪೇಟೆಂಟ್ ಧಾರಕರಿಗೆ ಮಾತ್ರ. ಮತ್ತು 2005 ರ ಮೊದಲೇ ಪೇಟೆಂಟ್ ಅರ್ಜಿಗಳನ್ನು ಸ್ವೀಕರಿಸಲು ಮೇಲ್‌ಬಾಕ್ಸ್ (ಅಂಚೆಪೆಟ್ಟಿಗೆ) ತೆರೆಯಬೇಕು. 1970 ರ ಭಾರತ ಪೇಟೆಂಟ್ ಕಾನೂನು ಇದಕ್ಕೆ ಅವಕಾಶ ಮಾಡಿಕೊಡುವುದಿಲ್ಲವಾದ್ದರಿಂದ ಅದನ್ನು ತಿದ್ದುಪಡಿ ಮಾಡಲೆಂದೇ ಈ ಮಸೂದೆಯನ್ನು ಬಿಜೆಪಿ ಸರಕಾರ ತರುತ್ತಿದೆ.



ಏಪ್ರಿಲ್ 15, 1994 ರಂದು ಬೆಂಗಳೂರಿನಲ್ಲಿ ಪೋಲೀಸರ ಜನಫಿರಂಗಿಗಳನ್ನೂ ಎದುರಿಸಿ ಪ್ರತಿಭಟಿಸುತ್ತಿರುವ ಮತಪ್ರದರ್ಶನಕಾರರು.

ಈ ಮಸೂದೆಯ ಇತಿಹಾಸ .

ಡಿಸೆಂಬರ್ 1994 ರಲ್ಲಿ ಈ ಶರತ್ತುಗಳೆಲ್ಲಾ ಇರುವ ಗ್ಯಾಟ್ ಒಪ್ಪಂದದ ಚರ್ಚೆ ನಡೆಯುತ್ತಿತ್ತು. ಈ ವೇಳೆಗೆ ಭಾರತೀಯ ಸಂಸತ್ತಿನ ಅಧಿವೇಶನ ನಡೆಯುತ್ತಿತ್ತು. ಆದರೂ ಈ ಶಾಸನದ ಪ್ರಸ್ತಾಪವನ್ನೇ ಮಾಡದೆ ಆಗಿನ ಕಾಂಗ್ರೆಸ್ ಸರಕಾರ ಅಧಿವೇಶನ ಮುಗಿದ ಕೂಡಲೇ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಮೇಲೆ ಹೇಳಿದ ಡಬ್ಲ್ಯು.ಟಿ.ಓ.ದ ಎರಡೂ ಅಂಶಗಳನ್ನು ಅದರಲ್ಲಿ ಸೇರಿಸಿ ಈ ರೀತಿ ಶರತ್ತು ಪೂರೈಸಿ ಭಾರತ ಡಬ್ಲ್ಯು.ಟಿ.ಓ. ಸದಸ್ಯತ್ವ ಪಡೆಯಿತು. ಆದರೆ ಯಾವುದೇ ಸುಗ್ರೀವಾಜ್ಞೆ ಮುಂದಿನ ಅಧಿವೇಶನ ಸೇರಿದ ಆರು ವಾರದೊಳಗೆ ಸಂಸತ್ತು ಅಂಗೀಕಾರ ನೀಡದಿದ್ದರೆ ಅಸಿಂಧು ವಾಗುತ್ತದೆ. ಲೋಕಸಭೆಯಲ್ಲಿ ಅಲ್ಪಮತವಿದ್ದ ನರಸಿಂಹರಾವ್ ಸರಕಾರ ಹೇಗೋ ಅಲ್ಲಿ ಅಂಗೀಕಾರ ಪಡೆಯಿತು. ಆದರೆ ರಾಜ್ಯಸಭೆಯಲ್ಲಿ ಎಡಪಕ್ಷಗಳ ವಿರೋಧಕ್ಕೆ ಬಿಜೆಪಿ ಮತ್ತು ಜನತಾದಳವೂ ದನಿಗೂಡಿಸಿದ್ದರಿಂದ ಅದು ಬಿದ್ದುಹೋಯಿತು.

ನಂತರ ಕಳ್ಳ ವಿಧಾನಗಳಿಂದ ಅಂಗೀಕಾರ ಪಡೆಯಲು ಕಾಂಗ್ರೆಸ್ ಸರಕಾರ ಹೇಗೆ ಹಲವು ತಂತ್ರಗಳನ್ನು ಬಳಸಿ ವಿಫಲವಾಯಿತು ಎಂಬುದನ್ನು ನೋಡಿ.

- ಸದನದ ಕಲಾಪ ಪಟ್ಟಿಯಲ್ಲಿ ಈ ಮಸೂದೆಯನ್ನು ನಮೂದಿಸಿದ್ದರೂ ಅದನ್ನು ಚರ್ಚೆಗೆ ತರಲಿಲ್ಲ.
- ಮಾರ್ಚ್ 22, 1995 ರಂದು ಅದನ್ನು ಹಿಂದಕ್ಕೆ ತಗೊಳ್ಳಲಾಯಿತು.
- ಆದರೆ ಅದೇ ದಿನ ಮಧ್ಯಂತರ ವಿರಾಮದ ನಂತರ ಇದನ್ನು ಮತ್ತೆ ಮಂಡಿಸಲಾಯಿತು. ಆಗ ವಿರೋಧ ಪಕ್ಷಗಳ ಸಂಖ್ಯೆ ಸದನದಲ್ಲಿ ಸಾಕಷ್ಟು ಇರಲಿಲ್ಲ. ಕಾಂಗ್ರೆಸ್ ಸದಸ್ಯರಿಗೆ ಅಂದು ಪ್ರಧಾನಿಗಳಿಂದ ಒಂದು ಔತಣಕೂಟ ಏರ್ಪಡಿಸಿ ಅವರೆಲ್ಲಾ ಇರುವಂತೆ ನೋಡಿಕೊಳ್ಳಲಾಯಿತು. ಆದರೆ ಈ ತಂತ್ರ ಫಲಿಸಲಿಲ್ಲ.
- ಮರುದಿನ ಉಪಸ್ಪೀಕರ್ ನಿವಾಸದಲ್ಲಿ ಎಲ್ಲಾ ಪಕ್ಷಗಳ ಮುಖಂಡರು ಸಭೆ ಕರೆದು 1. ಈ ಸುಗ್ರೀವಾಜ್ಞೆಯನ್ನು ಅನುಮೋದಿಸದಿದ್ದರೆ ಭಾರತವನ್ನು ಡಬ್ಲ್ಯು.ಟಿ.ಓ.ದಿಂದ ಉಚ್ಛಾಟನೆ ಮಾಡಬಹುದು. 2. ಇದೊಂದು ಅಂತರ್ರಾಷ್ಟ್ರೀಯ ವಚನಬದ್ಧತೆ, ಇದನ್ನು ಮಾನ್ಯ ಮಾಡಲೇಬೇಕು ಎಂದು ಸರಕಾರದ ಮಂತ್ರಿಗಳು ಗೋಗರೆದರು. ಆದರೆ ಈ ಬಗ್ಗೆ ಸಂಸತ್ತನ್ನು ಮೊದಲೇ ಏಕೆ ವಿಶ್ವಾಸಕ್ಕೆ ತಗೊಳ್ಳಲಿಲ್ಲ ಎಂದು ಪ್ರಶ್ನಿಸಿದಾಗ ಸರಕಾರ ನಿರುತ್ತರವಾಯಿತು.
- ನಂತರ ಈ ಮಸೂದೆಯನ್ನು ಮುಂದುವರೆಸದಿರಲು ಪ್ರಧಾನಿಗಳ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ನಿರ್ಧಾರ
- ಆದರೆ ಮತ್ತೆ ಅದೇ ಅಪರಾಹ್ನ ಈ ಮಸೂದೆಯನ್ನು ಅಂಗೀಕರಿಸಲು ವಿಶೇಷ ಸಭೆಯೊಂದನ್ನು ನಡೆಸೋಣ ಎಂದು ಸಂಸದೀಯ ವ್ಯವಹಾರಗಳ ಮಂತ್ರಿಗಳ ಪ್ರಸ್ತಾಪ. ಅದಕ್ಕೆ ತೀವ್ರ ವಿರೋಧದಿಂದಾಗಿ ಕೊನೆಗೆ ಸೆಲೆಕ್ಟ್ ಕಮಿಟಿಗೆ ಅದನ್ನೊಪ್ಪಿಸಲು ನಿರ್ಧಾರ.
- ತನ್ನ ನೇರ-ಪರೋಕ್ಷ ಬೆಂಬಲಿಗರನ್ನೇ ತುಂಬಿಸಿದ್ದ ಸೆಲೆಕ್ಟ್ ಕಮಿಟಿಗೆ ಯಾವುದೋ ಒಂದು ಖಾಸಗಿ ಸದಸ್ಯರ ಮಸೂದೆಯ ಚರ್ಚೆಯ ನಡುವೆ ಸದಸ್ಯರ ದಾಖಲಾತಿ ಬಹಳ ಕಮ್ಮಿಯಿದ್ದಾಗ ಅನುಮತಿ ಪಡೆಯಲಾಯಿತು. ಇದು ಸರ್ವಸಮ್ಮತಿಯ ಕಮಿಟಿ ಎನ್ನಲಾಯಿತು.

ಪುಟ 5ಕ್ಕೆ

ಅಂದು-ಇಂದು: ಬಿಜೆಪಿಯ ಸೋಗಲಾಡಿತನ

"...... ನಮ್ಮ ಪೇಟೆಂಟ್ ಕಾನೂನುಗಳು ರಾಷ್ಟ್ರೀಯ ಹಿತಾಸಕ್ತಿ ಹಾಗೂ ಅಂತರ್ರಾಷ್ಟ್ರೀಯ ಮಾನದಂಡಗಳ ಆಧಾರದಲ್ಲಿ ಜಾಗರೂಕತೆಯಿಂದ ರೂಪಿಸಿದ ಕಾನೂನು. ಇದು ಸಂಸದೀಯ ಬುದ್ಧಿಮತ್ತೆಯ ಅಭಿವ್ಯಕ್ತಿ. ಅಮೆರಿಕನ್ ಹಿತಾಸಕ್ತಿಗಳನ್ನು ಸಂತುಷ್ಟಗೊಳಿಸಲು ಪೇಟೆಂಟ್ ಕಾನೂನುಗಳಲ್ಲಿ ಕೈಯಾಡಿಸುವುದು ನಮ್ಮ ಕೃಷಿ ಮತ್ತು ಕೈಗಾರಿಕೆಗಳಿಗೆ ಮಾರಕ. ಅಂದರೆ ನಮ್ಮ ಪೇಟೆಂಟ್ ಕಾನೂನುಗಳನ್ನು ಮುಟ್ಟಬೇಡಿ ಎಂಬುದು ನಮ್ಮ ನಿಲುವಾಗಬೇಕು.... ಈಗಿನ ಉದಾರೀಕರಣ ನೀತಿಗಳು ಬಹಳ ಆಕರ್ಷವೆನಿಸಬಹುದು. ಆದರೆ ಅವುಗಳ ಆಳವಾದ ಪ್ರಭಾವಗಳು ನಮ್ಮ ಸ್ವಾತಂತ್ರ್ಯದ ಇಡೀ ಇತಿಹಾಸಕ್ಕೆ ವಿರುದ್ಧವಾದವುಗಳು. ಇಂತಹ ಸನ್ನಿವೇಶದಲ್ಲಿ ನಮ್ಮ ಸಂಸತ್ತಿನಲ್ಲಿ ಇವೆಲ್ಲದರ ಬಗ್ಗೆ ವಿವೆಲ್ಲದರ ಬಗ್ಗೆ ವಿವರವಾದ ಚರ್ಚೆ ನಡೆಯಬೇಕು....."

ಇದು ಜನವರಿ 1992 ರಲ್ಲಿ 44 ಪ್ರತಿಷ್ಠಿತ ವ್ಯಕ್ತಿಗಳು ಆಗಿನ ರಾಷ್ಟ್ರಪತಿ ಹಾಗೂ ಪ್ರಧಾನಿಗಳಿಗೆ ಅರ್ಪಿಸಿದ ಮನವಿಯ ಒಂದು ಭಾಗ. ಈ 44 ಪ್ರತಿಷ್ಠಿತರಲ್ಲಿ ಬಿಜೆಪಿಯ ನಾಲ್ಕು ಮಂದಿಗಳ ಸಹಿಯೂ ಇತ್ತು. ಆಗ ಅಧ್ಯಕ್ಷರಾಗಿದ್ದ ಮುರುಳಿ ಮನೋಹರ ಜೋಶಿ, ಈಗಿನ ಪ್ರಧಾನಿ ವಾಜಪೇಯಿ, ಈಗಿನ ಗೃಹಮಂತ್ರಿ ಅಡ್ವಾಣಿ ಹಾಗೂ ಈಗಿನ ಹಣಕಾಸು ಮಂತ್ರಿ ಯಶವಂತ್ ಸಿನ್ಹಾ. ಇಷ್ಟೇ ಅಲ್ಲ ಈ ಮನವಿಯನಂತರ ಪೇಟೆಂಟ್ ಕುರಿತ ಒಂದು ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಜೋಷಿಯವರು ಒಂದು 'ಕ್ರಾಂತಿಕಾರಿ' ಭಾಷಣವನ್ನು ಮಾಡಿದರು. ಆದರೆ ಈಗ ಸಂಸತ್ತಿನಲ್ಲಿ ಚರ್ಚೆಯಿಲ್ಲದೆ ಅಮೆರಿಕನ್ ಹಿತಾಸಕ್ತಿಗಳನ್ನು ಕಾಪಾಡಲು ಮುಂದಾಗಿದ್ದಾರೆ!

ಪುಟ 4 ರಿಂದ

- ವಿರೋಧ ಪಕ್ಷಗಳಿಂದ ಸೆಲೆಕ್ಟ್ ಕಮಿಟಿಯ ಬಹಿಷ್ಕಾರ
- ಹವಾಲಾ ಹಗರಣ ಬೆಳಕಿಗೆ ಬಂದು ಚುನಾವಣೆ ನಡೆಯುವ ಸಾಧ್ಯತೆಯಿಂದಾಗಿ ಇನ್ನು ಯಾವುದೇ ತಂತ್ರ ಹೂಡಲು ಅವಕಾಶವಿರದೆ ಸುಗ್ರೀವಾಜ್ಞೆ ಅಸಿಂಧು.

ಇದು ಈ ಮಸೂದೆಯ ಇತಿಹಾಸ. ಈಗ ಅಮೆರಿಕಾ ಡಬ್ಲ್ಯು.ಟಿ.ಒ. ದ [illegible]ವಾದ ಇತ್ಯರ್ಥ ಮಂಡಳಿಯೆದುರು ಈ ಪ್ರಶ್ನೆಯನ್ನು ಎತ್ತಿರುವುದರಿಂದ ನಮ್ಮ ಪೇಟೆಂಟ್ ಕಾನೂನನ್ನು ತಿದ್ದುಪಡಿ ಮಾಡಲು ಸ್ವತಃ ಬಿಜೆಪಿಯೇ ಮುಂದಾಗಿದೆ - ತನ್ನ ಈ ಹಿಂದಿನ ದೊಡ್ಡ-ದೊಡ್ಡ ಮಾತುಗಳನ್ನೆಲ್ಲಾ ಮರೆತು.

ಪ್ರಜಾಪ್ರಭುತ್ವವಾದಿ ಶಕ್ತಿಗಳ ವಿರೋಧವೇಕೆ?

ಏಕೆಂದರೆ ಈ ಇ.ಎಂ.ಆರ್. ಮತ್ತು ಮೇಲ್‌ಬಾಕ್ಸ್ ಶರತ್ತುಗಳಿಗೆ ತಲೆಬಾಗಿದರೆ ಭಾರತದ ಆರ್ಥಿಕ ಸಂಪೂರ್ಣ ಬಹುರಾಷ್ಟ್ರೀಯ ಕಂಪನಿಗಳ ಪ್ರಾಬಲ್ಯಕ್ಕೆ ಒಳಗಾಗುತ್ತದೆ. ಈ ಬಹುರಾಷ್ಟ್ರೀಯ ಕಂಪನಿಗಳ ಸಂಪನ್ಮೂಲಗಳ ಪ್ರಮಾಣ ಪಾಕಿಸ್ತಾನದಂತಹ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕಿಂತಲೂ ಹೆಚ್ಚು ಕೆಲವಂತೂ ನಮ್ಮಂತಹ ಅತಿದೊಡ್ಡ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪನ್ನಕ್ಕೆ ಹತ್ತಿರ ಇವೆ. ಇಂತಹ ಅಗಾಧ ಸಂಪನ್ಮೂಲ ಹಾಗೂ ಹಣಬಲ ಹೊಂದಿರುವ ಈ ಕಂಪನಿಗಳೊಂದಿಗೆ ಸ್ಪರ್ಧೆಯೆಂಬುದು ಅರ್ಥಹೀನ. ಇದರಿಂದಾಗಿ ಸ್ವಾವಲಂಬನೆಯೆಂಬುದೂ ಅರ್ಥಹೀನವಾಗುತ್ತದೆ. ಉದಾಹರಣೆಗೆ ಇದುವರೆಗೆ ಇರುವ ನಮ್ಮ ಪೇಟೆಂಟ್ ಕಾನೂನುಗಳಿಂದಾಗಿ ನಮ್ಮ ಔಷಧಿ ಕಂಪನಿಗಳು ಯಾವುದೇ ಔಷಧಿ ತಯಾರಿಕೆಯ ಪ್ರಕ್ರಿಯೆ ಪೇಟೆಂಟ್ ಪಡೆದಿರುವದರಿಂದ ಅದನ್ನು ಖರೀದಿಸಿ ಸ್ಥಳೀಯ ಸಾಮಗ್ರಿಗಳನ್ನು ಬಳಸಿ ಅಗ್ಗದರದಲ್ಲಿ ಅದನ್ನು ಉತ್ಪಾದನೆ ಮಾಡುದ್ದವು. ಈ ತಿದ್ದುಪಡಿಯ ನಂತರ ಅದು ಸಾಧ್ಯವೇ ಇಲ್ಲ. ಪೇಟೆಂಟ್ ಧಾರಕರು ಮಾತ್ರವೇ ಉತ್ಪಾದಿಸಿದ ಅಂತಹ ಔಷಧಿಗಳನ್ನು ಮಾರಲು ವಿಶೇಷ ಹಕ್ಕು ಪಡೆದಿರುತ್ತಾರೆ. ಅವರು ಹೇಳಿದ ಬೆಲೆಗಳನ್ನೇ ತೆರಬೇಕಾಗುತ್ತದೆ. ಇದರಿಂದ ಜೀವವುಳಿಸುವ ಹಲವು ಔಷಧಿಗಳ ಬೆಲೆ ಗಗನಕ್ಕೇರುತ್ತವೆ. ಆಗಲೇ ಈ ಏರಿಕೆ ಆರಂಭವಾಗಿದೆ.

ಇನ್ನೊಂದು ವಿಷಯ-ಇದುವರೆಗೆ ಪೇಟೆಂಟ್‌ನ ಅವಧಿ ನಮ್ಮ ಕಾನೂನುಗಳ ಪ್ರಕಾರ 14 ವರ್ಷವಿತ್ತು. ತಿದ್ದುಪಡಿಯ ನಂತರ ಅದು ಇಪ್ಪತ್ತು ವರ್ಷಗಳಾಗುತ್ತವೆ. ಪ್ರತಿ 3-4 ವರ್ಷಕ್ಕೊಮ್ಮೆ ಹೊಸ ಹೊಸ ತಂತ್ರಜ್ಞಾನ ಬರುತ್ತಿರುವ ಈ ದಿನಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಈ ಗುತ್ತೇದಾರಿಕೆಯನ್ನು ಶಾಶ್ವತಗೊಳಿಸುವುದೆಂದೇ ಇದರ ಅರ್ಥವಲ್ಲವೇ?

ಇನ್ನು 'ಮೇಲ್ ಬಾಕ್ಸ್' ನ ವಿಚಾರವಂತೂ ನಮ್ಮ ಸಾರ್ವಭೌಮತೆಗೆ ಒಡ್ಡಿರುವ ಸವಾಲು. ಏಕೆಂದರೆ ಉತ್ಪಾದನಾ ಪೇಟೆಂಟ್ ಜಾರಿಗೆ ಬರಬೇಕಾದ್ದು 2005 ರಲ್ಲಿ. ಆದರೆ ಅದುವರೆಗೆ ಕಾಯಲೂ ಬಹುರಾಷ್ಟ್ರೀಯ ಕಂಪನಿಗಳು ಸಿದ್ದರಿಲ್ಲ. ಈಗಲೇ ಸಂಬಂಧಪಟ್ಟ ಕಾನೂನನ್ನು ಬದಲಿಸಿ ಎನ್ನುತ್ತಿವೆ. ಬಿಜೆಪಿ ಸರಕಾರ ಈ ಒತ್ತಡಕ್ಕೆ ಮಣಿದಿದೆ.

ವಿಮಾ ಹತೋಟಿ ಪ್ರಾಧಿಕಾರ ಮಸೂದೆ

ಬಿಜೆಪಿ 'ಸ್ವದೇಶಿ' ಯ ಮೋಸ ಬಯಲು

ವಿಮಾ ನಿಯಂತ್ರಣ ಪ್ರಾಧಿಕಾರ ಮಸೂದೆ ಅಥವಾ ಐ.ಆರ್.ಎ. ಮಸೂದ ಕಳೆದ ಕೆಲವು ದಿನಗಳಲ್ಲಿ ಪ್ರತೀದಿನ ಪ್ರಮುಖ ಸುದ್ದಿಯಾಗಿ ಬಿಟ್ಟಿದೆ- ಮುಖ್ಯವಾಗಿ ಸಂಘಪರಿವಾರ ಈ ಬಗ್ಗೆ ಹರಡಿಸಿರುವ ಗೊಂದಲದಿಂದಾಗಿ. ಏಕೆಂದರೆ ಕೇವಲ ಒಂದು ವರ್ಷದ ಹಿಂದೆಯಷ್ಟೆ ಈ ಹೆಸರಿನ ಮಸೂದೆಯನ್ನು ಇದೇ ಬಿಜೆಪಿ ವಿರೋಧಿಸಿತ್ತು - ನಿಜ, 'ಸ್ವದೇಶಿ' ಯ ಹೆಸರಿನಲ್ಲಿ. ಈ ಮಸೂದೆಯ ಬಗ್ಗೆ ದೇಶದ ಹಣಕಾಸು ಮಂತ್ರಿಗಳು ಸಂಸತ್ತಿಗೆ, ಬಹುಶಃ ತನ್ನ ಪಕ್ಷಕ್ಕೂ ತಿಳಿಸುವ ಮೊದಲೇ ವಿದೇಶಿ ಹೂಡಿಕೆದಾರರಿಗೆ ಭರವಸೆ ನೀಡಿದ್ದಂತೆ ಕಾಣುತ್ತದೆ.

ಕೇಂದ್ರ ಸಂಪುಟ ಈ ಮಸೂದೆಗೆ ಒಪ್ಪಿಗೆ ನೀಡಿದೆಯೆಂದು ಸುದ್ದಿ ಬಂದ ಮರುದಿನವೇ ಒಬ್ಬ ಕೇಂದ್ರ ಮಂತ್ರಿ ಇದನ್ನು ಕಟುವಾಗಿ ಟೀಕಿಸಿದರು. ಮತ್ತೊಬ್ಬ ಪ್ರಮುಖ ಕೇಂದ್ರಮಂತ್ರಿಗಳು ಈ ಸಭೆಯಲ್ಲಿ ತಾನು ಹಾಜರಿರಲಿಲ್ಲ ಎಂದರು. ಆದರೂ ಇದು 'ಅವಿರೋಧ' ನಿರ್ಣಯ ಎಂದು ಹೇಳಲಾಯಿತು.

ಈ ಹಿಂದೆ ದೇಶವನ್ನು ಬಹುರಾಷ್ಟ್ರೀಯ ಕಂಪನಿಗಳ ಸೂರೆಗೆ ತೆರೆದಿಡುತ್ತಿದ್ದಾಗ ಕೇವಲ 'ಸ್ವದೇಶಿ' ಮಂತ್ರ ಜಪಿಸುತ್ತಾ ಕೂತಿದ್ದ ಸಂಘಪರಿವಾರದ 'ಸ್ವದೇಶಿ ಜಾಗರಣ ಮಂಚ್' ಕೂಡಾ ಕೇಂದ್ರ ಸಂಪುಟದ ಈ ನಿರ್ಧಾರಕ್ಕೆ ವಿರೋಧ ವ್ಯಕ್ತಪಡಿಸಿತು. ಸಂಘಪರಿವಾರ ಕಟ್ಟಿಕೊಂಡ ಕಾರ್ಮಿಕ ಸಂಘಟನೆ ಬಿ.ಎಂ.ಎಸ್. ಕೂಡಾ ವಿರೋಧಿಸಿತು. ಈ ಬಿ.ಎಂ.ಎಸ್. ಅಂತೂ ಇನ್ನೂ ಮುಂದೆ ಹೋಗಿ ಸಾರ್ವಜನಿಕ ವಲಯದ ಖಾಸಗೀಕರಣವನ್ನು, ಜಾಗತೀಕರಣವನ್ನು ವಿರೋಧಿಸಿತು. ಡಿಸೆಂಬರ್ 3 ರಂದು ಇವೆರಡೂ ಸೇರಿ ಸಂಸತ್ತಿನೆದುರು ಧರಣಿಯನ್ನು ನಡೆಸಿದವು. ಆದರೆ ಸ್ವಲ್ಪಕಾಲ ಧರಣಿಯ ನಂತರ ಹಣಕಾಸು ಮಂತ್ರಿಗಳ 'ಆಶ್ವಾಸನೆ'ಯ ಮೇರೆಗೆ ತಮ್ಮ ಧರಣಿಯನ್ನು, ಬಹುಶಃ ಅದರ ಜೊತೆಗೆ ತಮ್ಮ 'ಪ್ರತಿಭಟನೆ'ಯ ನಾಟಕವನ್ನೂ ಹಿಂತೆಗೆದುಕೊಂಡವು.

ಈಗ ಸ್ವತಃ ಬಿಜೆಪಿ ಪಕ್ಷದ ಬಾರಿ. ಇದು ಬಿಜೆಪಿಯ ಚುನಾವಣಾ ಪ್ರಣಾಳಿಕೆಗೆ ವಿರುದ್ಧವಾದದು, ಮೈತ್ರಿಕೂಟದ ರಾಷ್ಟ್ರೀಯ ಅಜೆಂಡಾಕ್ಕೂ ವಿರುದ್ಧವಾದದ್ದು ಎಂದು ಕೆ.ಆರ್. ಮಲ್ಕಾನಿಯಂತಹ ಹಿರಿಯ ಬಿಜೆಪಿ ಮುಖಂಡರು ಟೀಕಿಸಿದರು. ಸಂಸದೀಯ ವ್ಯವಹಾರಗಳ ಮಂತ್ರಿ ಖುರಾನ ಈ ಮಸೂದೆಗೆ ಆದ್ಯತೆಯೇನಿಲ್ಲ ಎಂದರೆ, ಅದೇ ದಿನ ಮಧ್ಯಾಹ್ನ ಹಣಕಾಸು ಮಂತ್ರಿಗಳು ಆದ್ಯತೆ ಕೊಡುತ್ತೇವೆ ಎಂದು ಉದ್ಯಮಿಗಳ ಸಭೆಯಲ್ಲಿ ಭರವಸೆ ನೀಡಿದರು. ನಂತರ ಖುರಾನಾ ಕೂಡ ಅದನ್ನೇ ಹೇಳಿದರು. ಸ್ವತಃ ಬಿಜೆಪಿ ಅಧ್ಯಕ್ಷರೇ ಈ ಬಗ್ಗೆ ಸರಕಾರ ಪಕ್ಷದೊಡನೆ ಚರ್ಚಿಸಿಲ್ಲ ಎಂದರು. ಸರಿ, ಈಗ ಬಿಜೆಪಿಯ ಸಭೆಯಲ್ಲಿ ಹಣಕಾಸು ಮಂತ್ರಿಗಳು, ಪ್ರಧಾನ ಮಂತ್ರಿಗಳು ಮತ್ತು ಗೃಹಮಂತ್ರಿಗಳೂ ಸರಕಾರದ ನಿಲುವನ್ನು 'ವಿವರಿಸಿದರು'. ಉಮಾಭಾರತಿ, ಮಲ್ಕಾನಿ ಇತ್ಯಾದಿ ಎಲ್ಲರೂ ಈ ವಿವರಣೆಯನ್ನು ಒಪ್ಪಿದರಂತೆ!

ಗೊಂದಲಕ್ಕೆ ಕಾರಣ

ಏಕೆ ಈ ಗೊಂದಲ? ಅಥವಾ ಪ್ರತಿಭಟನೆಯ ನಾಟಕ? ಎಲ್ಲಾ ಆಂತರಿಕ ವಿರೋಧಗಳನ್ನು ತಣ್ಣಗಾಗಿಸಿದ ಆ ಅಮೋಘ 'ವಿವರಣೆ'ಯೇನು?

ಒಂದು ವರ್ಷದ ಹಿಂದೆ ಚಿದಂಬರಂ ತಂದಿದ್ದ ವಿಮಾ ಹತೋಟಿ ಪ್ರಾಧಿಕಾರ ಮಸೂದೆಯಲ್ಲಿ ವಿಮಾ ಉದ್ದಿಮೆಯಲ್ಲಿ ವಿದೇಶೀಯರಿಗೆ ಎಷ್ಟರವರೆಗೆ ಪಾಲುಕೊಡಬಹುದೆಂಬ ಅಂಶವಿರಲಿಲ್ಲ, ಆದರೆ 49% ರ ವರೆಗೂ ಕೊಡಬೇಕೆಂಬ ಆಶಯ ಆಳುವ ಮಂದಿಗಿತ್ತು. ಈ ಕಾರಣಕ್ಕಾಗಿಯೇ ಬಿಜೆಪಿಯವರು ಕೇವಲ ಭಾರತೀಯ ಖಾಸಗಿಯವರಿಗೆ ಮಾತ್ರ ವಿಮಾ ಉದ್ದಿಮೆಯಲ್ಲಿ ಅವಕಾಶವಿರಬೇಕು ಎಂದು ಹೇಳಿ ಅದನ್ನು ವಿರೋಧಿಸುವಲ್ಲಿ ಎಡಪಕ್ಷಗಳ ಜತೆಗೂಡಿದ್ದವು. ಆದರೆ ಈಗ ಅದೇ ಬಿಜೆಪಿಯ ಹಣಕಾಸು ಮಂತ್ರಿಗಳು ತಂದಿರುವ ಮಸೂದೆ ಇನ್ನೂ ಹೆಚ್ಚು ಸಮಗ್ರವಾಗಿದ್ದು ಎಲ್.ಐ.ಸಿ. ಮತ್ತು ಜಿ.ಐ.ಸಿ. ಕಾನೂನುಗಳನ್ನು ತಿದ್ದುಪಡಿ ಮಾಡಿದೆ; ವಿಮಾ ಉದ್ದಿಮೆಯಲ್ಲಿ ವಿದೇಶಿಯರಿಗೆ 26% ಹಾಗೂ ಅನಿವಾಸಿ ಭಾರತೀಯರು 60% ರವರೆಗೆ ಪಾಲಿರುವ ವಿದೇಶಿ ಕಂಪನಿಗಳಿಗೆ ಇನ್ನೂ 14% ರವರೆಗೆ ಪಾಲುದಾರಿಕೆ ಹೊಂದಲು ಅವಕಾಶ ನೀಡಿದೆ. ಅಷ್ಟೇ ಅಲ್ಲ, ಯಾವುದೇ ಒಬ್ಬ 'ಪ್ರಾಯೋಜಕ'(ಅವರು 'ಸ್ವದೇಶಿ' ಯಾದರೂ) 26% ಕ್ಕಿಂತ ಹೆಚ್ಚು ಪಾಲು ಹೊಂದುವಂತಿಲ್ಲ. ಅಂದರೆ ವಿದೇಶಿ ಹೂಡಿಕೆದಾರರಿಗೆ ಹಿಂಬಾಗಿಲನ್ನು ತೆರೆದುಕೊಡಲಾಗಿದೆ. ಸಹಜವಾಗಿ 'ಸ್ವದೇಶಿ' ಮಂತ್ರವನ್ನು ಗಂಭೀರವಾಗಿ ತಗೊಂಡವರು ವಿರೋಧ ವ್ಯಕ್ತಪಡಿಸಬೇಕಾಯಿತು. ಅಷ್ಟೇ ಸಹಜವಾಗಿ ಈ ವಿರೋಧ ತಣ್ಣಗಾಗಿದೆ.

ಆಹಾ! ಎಂತಹ ವಿವರಣೆಗಳು!

ಬಿಜೆಪಿ ಮುಖಂಡರು ನೀಡಿದ 'ವಿವರಣೆ' ಯಾದರೂ ಏನು? ಆರ್ಥಿಕ ನೀತಿಯಲ್ಲಿ ಸೈದ್ಧಾಂತಿಕ ಬದ್ಧತೆಗೆ ಸ್ಥಾನವಿಲ್ಲ, ಇಸಂಗಳು ಅಡ್ಡಿಯಾಗ ಬಾರದು, ಒಂದು ಕಾರ್ಯಸಾಧ್ಯ ಆರ್ಥಿಕ ನೀತಿಯಿರಬೇಕು! ಅಂದರೆ ವಿರೋಧ ಪಕ್ಷವಾಗಿ ಒಂದು ನೀತಿಯಿರಬೇಕು, ಆಳುವ ಪಕ್ಷವಾದ ಮೇಲೆ ಬೇರೆಯೇ ನೀತಿಯಿರಬೇಕು! ಕಾಂಗ್ರೆಸ್ ಹಾಗೆಯೇ ಮಾಡಿದೆ, ನಾವೂ ಹಾಗೆಯೇ ಮಾಡಬೇಕು! - ಇದೇ ಬಿಜೆಪಿ ಮುಖಂಡರು, ಮುಖ್ಯವಾಗಿ ಅಡ್ವಾಣಿಯವರು ನೀಡಿದ ವಿವರಣೆಯ ಸಾರಾಂಶ.

ಹಣಕಾಸು ಮಂತ್ರಿಗಳು ಈ 'ಕಾರ್ಯಸಾಧ್ಯ' ನೀತಿಯ ಪ್ರಯೋಜನಗಳನ್ನು ವಿವರಿಸಿದರಂತೆ. ನಿಜ, ಅವರ ವಿವರಣೆಯಲ್ಲಿ ಹೊಸದೇನಿರಲಿಲ್ಲ. ಹಿಂದೆ ಕಾಂಗ್ರೆಸ್ಸಿನ ಮನಮೋಹನ್‌ಸಿಂಗ್, ಸಂಯುಕ್ತ ರಂಗದ ಹಣಕಾಸು ಮಂತ್ರಿ ಚಿದಂಬರಂ ನೀಡಿದ ಬಿಜೆಪಿಯ 'ಸ್ವದೇಶಿ' ವಾಲಾಗಳು ಈ ಹಿಂದೆ ತಿರಸ್ಕರಿಸಿದ ವಿವರಣೆಗಳೇ ಅವು. ಏನೆಂದರೆ ವಿಮಾ ಉದ್ದಿಮೆಯನ್ನು ವಿದೇಶೀಯರಿಗೆ ತೆರೆದರೆ ಮೂಲಭೂತ ರಚನೆಗಳ ವಲಯಕ್ಕೆ 2500 ಕೋಟಿ ಡಾಲರುಗಳು ಅಂದರೆ 1 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣಹೂಡಿಕೆ ಬರುತ್ತದೆ. ಇನ್ನೊಂದು, ಭಾರತದ ಜನಸಂಖ್ಯೆಯಲ್ಲಿ 10% ಕೂಡಾ ವಿಮಾ ಸೌಲಭ್ಯ ಹೊಂದಿಲ್ಲ. ದೇಶೀ-ವಿದೇಶೀ ಖಾಸಗಿಯವರು ಬಂದರೆ ಇದು ವಿಸ್ತಾರಗೊಳ್ಳುತ್ತದೆ, ಪಾಲಿಸಿದಾರರಿಗೆ ಲಾಭವಾಗುತ್ತದೆ ಇತ್ಯಾದಿ.

ಈ ವಿವರಣೆಗಳಲ್ಲಿ ಸತ್ಯದ ಅಂಶ ಬಹಳ ಕಮ್ಮಿ ಇಲ್ಲವೇ ಇಲ್ಲ ಎನ್ನಬಹುದು. ವಿಮಾ ಉದ್ದಿಮೆಯನ್ನು ತೆರೆದರೆ ಮಾತ್ರವೇ 1 ಲಕ್ಷ ಕೋಟಿ ರೂಪಾಯಿಗಳು ಹೇಗೆ ಬರುತ್ತವೆ, ಬಂದರೂ ಅದು ನಮ್ಮ ಆರ್ಥಿಕವನ್ನು ಅಭಿವೃದ್ಧಿಪಡಿಸುವ ಬದಲು ದಕ್ಷಿಣ-ಪೂರ್ವ ಏಶ್ಯಾದ 'ಹುಲಿ'ಗಳನ್ನು ಇಲಿಗಳಾಗಿಸಿದ ಹೂಡಿಕೆಯಾಗುವುದಿಲ್ಲ ಎಂದು ಬಿಜೆಪಿ ಮುಖಂಡರು ಭರವಸೆ ನೀಡಬಲ್ಲರೇ? ಇನ್ನು 40% ಕ್ಕಿಂತಲೂ ಹೆಚ್ಚು ಮಂದಿ ಬಡತನದ ರೇಖೆಯ ಕೆಳಗಿರುವ ದೇಶದಲ್ಲಿ ಅಮೆರಿಕಾ, ದಕ್ಷಿಣ ಕೊರಿಯದ ಮಟ್ಟದಲ್ಲಿ ಜನ ವಿಮಾ ಸೌಲಭ್ಯ ಹೊಂದಿಲ್ಲ ಎಂದು ದೂರುವುದು ಮೂರ್ಖತನದ ಮಾತಷ್ಟೇ ಅಲ್ಲ, ಎರಡು ಹೊತ್ತು ಕೂಳಿಗೂ ಪರದಾಡುವ ಕೋಟ್ಯಾಂತರ ಭಾರತೀಯರು ವಿಮೆಯ ಸೌಲಭ್ಯದ ಬಗ್ಗೆ ಯೋಚಿಸುವಂತೆ ಮಾಡಲು ವಿದೇಶಿ ಕಂಪನಿಗಳಿಗೆ ಅವಕಾಶ ಕೊಡಬೇಕು ನಮ್ಮ ದೇಶದ ಆಳುವ ವರ್ಗಗಳ ವಾದ ಮಹಾ ವಂಚಕತನದ ದ್ಯೋತಕ.

ವಿರೋಧ ಏಕೆ?

ಭಾರತದ ವಿಮಾ ಉದ್ದಿಮೆಯನ್ನು ಪ್ರವೇಶಿಸಲು ವಿದೇಶಿ ಕಂಪನಿಗಳು, ಕಳೆದ ಹತ್ತು ವರ್ಷಗಳಿಂದ ಸತತ ಪ್ರಯತ್ನ ನಡೆಸುತ್ತಿವೆ. ವಿಮೆಯೆಂಬುದು ಕೋಟ್ಯಾಂತರ ಜನಸಾಮಾನ್ಯರ ಉಳಿತಾಯವನ್ನು ಸಂಗ್ರಹಿಸಿ ಅವರಿಗೆ ಜೀವನದ ಭದ್ರತೆಯ ಭರವಸೆ ನೀಡುವ ಒಂದು ದೀರ್ಘ ಕಾಲದ ಚಟುವಟಿಕೆ. ಇದನ್ನು ಖಾಸಗೀ ಕಂಪನಿಗಳು ಲಾಭಕೋರತನದ ಸಾಧನವಾಗಿಸಿ ಲಕ್ಷಾಂತರ ಪಾಲಿಸಿದಾರರ ಹಣವನ್ನು ದುರುಪಯೋಗಪಡಿಸಿ ಕೊಳ್ಳುತಿದ್ದಾರೆ ಎಂಬ ಕಾರಣಕ್ಕೇ, ಜನಗಳ ಈ ಉಳಿತಾಯ ದೇಶದ ಆರ್ಥಿಕ ಅಭಿವೃದ್ಧಿಗೆ ದೊರೆಯ ಬೇಕು ಎಂಬ ಕಾರಣಕ್ಕೇ, 42 ವರ್ಷಗಳ ಹಿಂದೆ ಜೀವ ವಿಮಾ ನಂತರ ರಾಷ್ಟ್ರೀಕರಿಸ ಲಾಯಿತು. ವಿದೇಶೀ ಬಹುರಾಷ್ಟ್ರೀಯ ವಿಮಾ ಕಂಪನಿಗಳ ದಾಖಲೆಯೂ ಭಿನ್ನವಾಗೇನಿಲ್ಲ. ಈಗ ಮತ್ತೆ ಅದನ್ನು ಅದೇ ಖಾಸಗೀಯವರಿಗೆ, ವಿದೇಶಿಯರಿಗೆ ತೆರೆಯುವ ಅಗತ್ಯವಿಲ್ಲ, ವಿಮಾ ಉದ್ದಿಮೆಯ ವಿಶಿಷ್ಟ ಸ್ವರೂಪವನ್ನು ನೋಡಿದಾಗ ಅದು ಭಾರತದಂತಹ ದೇಶಗಳಲ್ಲಿ ಕೇವಲ ಸಾರ್ವಜನಿಕ ಸೊತ್ತಾಗಿರಬೇಕು ಎಂಬುದು ವಿಮೆಯ ಖಾಸಗೀಕರಣವನ್ನು ವಿರೋಧಿಸುತ್ತಿರು ವವರ ಮೂಲಭೂತ ವಾದ.

ವಿಮಾ ಉದ್ದಿಮೆಯ ಖಾಸಗೀಕರಣ ಇಷ್ಟೊಂದು ದೊಡ್ಡ ಚರ್ಚೆಯ ವಿಷಯವಾಗಲು ವಿಮಾ ಉದ್ದಿಮೆಯ ನೌಕರರ ಅವಿರತ ಹೋರಾಟವೂ ಒಂದು ಕಾರಣ ಎಂಬುದನ್ನು ಗಮನಿಸಬೇಕು. 1991 ರಲ್ಲಿ ಉದಾರೀಕರಣದ ಪ್ರಕ್ರಿಯೆ ಆರಂಭವಾಗುವ ಮೊದಲೇ ಅಮೆರಿಕಾ ತನ್ನ ಸೂಪರ್ 301 ಕಾನೂನಿನ ಬೆದರಿಕೆ ಒಡ್ಡಿದಂದಿನಿಂದಲೇ ವಿಮಾ ನೌಕರರು ಸಾರ್ವಜನಿಕ ಅಭಿಪ್ರಾಯವನ್ನು ಕ್ರೋಢೀಕರಿಸುವ ನಿರಂತರ ಪ್ರಯತ್ನ ನಡೆಸಿದ್ದಾರೆ. ಎಡಪಕ್ಷಗಳು ಅವರ ಈ ಪ್ರಯತ್ನಕ್ಕೆ ಸದಾ ಬೆಂಬಲ ನೀಡಿಕೊಂಡು ಬಂದಿವೆ.

ವಿಮಾ ನೌಕರರು ಸರಕಾರೀ ಪ್ರಚಾರ ಬಿಂಬಿಸ ಬಯಸುವಂತೆ ಕೇವಲ ತಮ್ಮ ಸಂಕುಚಿತ ಸ್ವಾರ್ಥದ ರಕ್ಷಣೆಗಾಗಿ ಈ ಹೋರಾಟ ನಡೆಸಿಕೊಂಡು ಬಂದಿದ್ದಾರೆಯೇ? ಇಲ್ಲ ಎನ್ನುತ್ತಾರೆ ಅಖಿಲ ಭಾರತ ವಿಮಾ ನೌಕರರ ಸಂಘದ ಮುಖಂಡರು. ಪಾಲಿಸಿದಾರರ ಹಣದ ಸುರಕ್ಷಿತತೆ, ಈ ಅಪಾರ ಸಂಪನ್ಮೂಲ ದೇಶದ ಆರ್ಥಿಕ ಅಭಿವೃದ್ಧಿಗೆ ಸಿಗಬೇಕು ಮತ್ತು ಎರಡು ಉದ್ದೇಶಗಳ ಈಡೇರಿಕೆಯಲ್ಲಿ ರಾಷ್ಟ್ರೀಕೃತ ವಿಮಾ ಸಂಸ್ಥೆಗಳಾದ ಎಲ್.ಐ.ಸಿ., ಜಿ.ಐ.ಸಿ. ಗಳು ಯಶಸ್ವಿಯಾಗಿವೆ, ಆದ್ದರಿಂದ ಈ ಉದ್ದಿಮೆಯ ಖಾಸಗೀಕರಣದ ಅಗತ್ಯವೇ ಇಲ್ಲ, ಅಷ್ಟೇ ಅಲ್ಲ, ವಾಸ್ತವವಾಗಿ ವಿಮೆಯಂತಹ ಉದ್ದಿಮೆಯ ಖಾಸಗೀ ಕರಣದ ನಿಜವಾದ ಅರ್ಥವೆಂದರೆ ಸರಕಾರ ಜನಗಳ ಅವಶ್ಯಕತೆಗಳಾದ ಆರೋಗ್ಯ, ನಿವೃತ್ತಿ ಸೌಲಭ್ಯಗಳು ಇತ್ಯಾದಿಗಳನ್ನು ಒದಗಿಸುವ ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದೆ ಎಂಬುದು. ಇದು ಆರ್ಥಿಕ ಉದಾರೀಕರಣದ ಪ್ರಮುಖ ಲಕ್ಷಣ ತಾನೆ. ಇದೇ ಕಾರಣಕ್ಕೆ ವಿಮಾ ನೌಕರರು ಮಾತ್ರವಲ್ಲ, ದೇಶದ ಪ್ರಗತಿಪರ ಜನ ವಿಭಾಗಗಳೆಲ್ಲಾ ಈ ಮಸೂದೆಯನ್ನು ವಿರೋಧಿಸುತ್ತಿವೆ. ಆದ್ದರಿಂದಲೇ ಇದು ಡಿಸೆಂಬರ್ 11ರ ಸಾರ್ವತ್ರಿಕ ಮುಷ್ಕರದ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿತ್ತು.

'ರಾಷ್ಟ್ರೀಕೃತ ವಿಮಾ ಉದ್ದಿಮೆಯನ್ನು ರಕ್ಷಿಸಿ' ಎಂದು ಘೋಷಣೆ ಕೂಗುತ್ತಾ ಡಿಸೆಂಬರ್ 8 ರಂದು ಬೆಂಗಳೂರಿನಲ್ಲಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಒಂದು ಸಾವಿರಕ್ಕೂ ಹೆಚ್ಚು ವಿಮಾ ನೌಕರರ ಭಾಗವಹಿಸಿದ್ದರು.



ಏಕೆ ಈ ಬಿಜೆಪಿ ತಿಪ್ಪರಲಾಗ?

ಕಳೆದ ಕೆಲವು ವರ್ಷಗಳಿಂದ ರಾಜ್ಯ ಸಭೆಯಲ್ಲಿರುವ ಬಲಾಬಲ ಹೇಗಿದೆಯೆಂದರೆ ಕಾಂಗ್ರೆಸ್, ಬಿಜೆಪಿ ಮತ್ತು ಅದರ ಮಿತ್ರರು ಹಾಗೂ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು ಈ ಮೂರು ಗುಂಪುಗಳಲ್ಲಿ ಯಾವುದಾದರೂ ಎರಡು ಜತೆಗೂಡಿದರೆ ಮೂರನೇಯವರನ್ನು ಸುಲಭವಾಗಿ ಸೋಲಿಸಬಹುದು. 1995 ರಲ್ಲಿ ಪೇಟೆಂಟ್ ಮಸೂದೆ ಮತ್ತು 1997 ರಲ್ಲಿ ವಿಮಾ ಪ್ರಾಧಿಕಾರ ಮಸೂದೆಯಲ್ಲಿ ಎಡಪಕ್ಷಗಳ ವಿರೋಧದ ಜೊತೆ ಬಿಜೆಪಿಯೂ ಕೈಜೋಡಿಸಿದ್ದರಿಂದ ಈ ಎರಡೂ ದೇಶ-ವಿರೋಧಿ ಮಸೂದೆಗಳು ಬಿದ್ದುಹೋದವು. ಇದೊಂದು ವಿಚಿತ್ರವೇ - ಏಕೆಂದರೆ ಆರ್ಥಿಕ ನೀತಿಗಳಲ್ಲಿ ಬಿಜೆಪಿಗೂ, ಕಾಂಗ್ರೆಸ್ಸಿಗೂ ಯಾವುದೇ ಭಿನ್ನತೆಯಿಲ್ಲ. ಆದರೂ ತನ್ನ ವಿಶಿಷ್ಟತೆಯನ್ನು ತೋರಿಸಿಕೊಳ್ಳಲು ಅದು 'ಸ್ವದೇಶಿ' ಇತ್ಯಾದಿ ತಂತ್ರಗಳನ್ನು ಹೂಡುತ್ತಿತ್ತು.

ಈಗ ಅಧಿಕಾರಕ್ಕೆ ಬಂದ ಮೇಲೆ ಅದಕ್ಕೆ ಇವೆಲ್ಲಾ ಅಗತ್ಯವಿಲ್ಲ. ಬದಲಿಗೆ, ಪಾಶ್ಚಿಮಾತ್ಯ ದೇಶಗಳೊಂದಿಗೆ ನಿಕಟ ಸಂಬಂಧಗಳು ಬೇಕಾಗಿದೆ. ಆದ್ದರಿಂದಲೇ ಈ ತಿಪ್ಪರಲಾಗ ಎನ್ನುತ್ತಾರೆ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ಬಿಪ್ಲವ್ ದಾಸ್‌ಗುಪ್ತಾ.

ಬಿಜೆಪಿಯ 'ಸ್ವದೇಶಿ' ಎಂಬುದು ಒಂದು ಅತಿದೊಡ್ಡ ವಂಚನೆ ಎಂದು ಎಡಪಕ್ಷಗಳು ಆರಂಭದಿಂದಲೇ ಒತ್ತಿ-ಒತ್ತಿ ಹೇಳುತ್ತಾ ಬಂದಿವೆ. ಅದೀಗ ಎಲ್ಲರ ಅರಿವಿಗೂ ಬರುತ್ತಿದೆ.

ಇಲ್ಲಿ ಇನ್ನೊಂದು ಸಂಗತಿಯನ್ನು ಗಮನಿಸಬೇಕು. ಕಳೆದ ವಾರ ಬೆಂಗಳೂರಿನಲ್ಲಿ ಮಾತನಾಡುತ್ತಾ ಕೇಂದ್ರ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸರವರು 'ನೀನು ತಲೆಎತ್ತಿ ನಿಲ್ಲಬಾರದು ಎಂಬುದು ಭಾರತದ ಬಗ್ಗೆ ಅಮೆರಿಕಾ ನೀತಿ. ಆದರೆ ನಾವು ಪೋಖ್ರಾನ್ ಸ್ಫೋಟ ನಡೆಸಿ ತಲೆಯೆತ್ತಿ ನಿಂತಿದ್ದೇವೆ' ಎಂದರಂತೆ. ಆದರೆ ನಿಜ ಸಂಗತಿಯೆಂದರೆ ಈ ಪೋಖ್ರಾನ್ ಸ್ಫೋಟದಿಂದಾಗಿಯೇ ಆರ್ಥಿಕ ರಂಗದಲ್ಲಿ ಫರ್ನಾಂಡೀಸರ ಈ ಸರಕಾರ ಅದೇ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕಾಲು ಹಿಡಿಯುತ್ತಿದೆ. ಪೇಟೆಂಟ್ ಮಸೂದೆ ಹಾಗೂ ವಿಮಾ ಪ್ರಾಧಿಕಾರ ಮಸೂದೆಗಳನ್ನು ಪಾಸು ಮಾಡಿಕೊಳ್ಳುವಲ್ಲಿ ಅದು ತೋರುತ್ತಿರುವ ರಾಷ್ಟ್ರ-ವಿರೋಧಿ ತರಾತುರಿ ಇದನ್ನು ಅತ್ಯಂತ ಸ್ಪಷ್ಟಗೊಳಿಸಿದೆ.

ಪೋಖ್ರಾನ್ ಸ್ಫೋಟದ ನಂತರ ಅಮೆರಿಕಾದ ಸರಕಾರ ಹಾಕಿದ ನಿರ್ಬಂಧಗಳು ಆ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ ತೊಂದರೆಯುಂಟುಮಾಡಿವೆ ಎಂದ ನಮ್ಮ ಮಂತ್ರಿಗಳು, ವಾಸ್ತವವಾಗಿ ಆ ನಿರ್ಬಂಧಗಳನ್ನು ಸಡಿಲಿಸುವಂತೆ ಈ ಕಂಪನಿಗಳ ಮೂಲಕ ತಮ್ಮ ಸರಕಾರದ ಮೇಲೆ ಒತ್ತಡ ಹಾಕಿದರು, ಅದಕ್ಕೆ ಪ್ರತಿಯಾಗಿ ಬಹುರಾಷ್ಟ್ರೀಯ ಕಂಪನಿಗಳ ಒತ್ತಡಗಳಿಗೆ ತಲೆಬಾಗುವ ತರಾತುರಿಯನ್ನು ಈಗ ತೋರಿಸುತ್ತಿದ್ದಾರೆ. ಈ ಎರಡು ಮಸೂದೆಗಳು ಈ ಒತ್ತಡಕ್ಕೆ ಸರಕಾರ ಮಣಿಯುತ್ತಿರುವುದರ ಲಕ್ಷಣಗಳು.

ಈ ಎರಡೂ ಮಸೂದೆಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕೈಜೋಡಿಸುವ ಸಾಧ್ಯತೆಗಳಿವೆ. ಜನ-ವಿರೋಧಿ ಆರ್ಥಿಕ ನೀತಿಗಳ ಪ್ರಶ್ನೆ ಬಂದಾಗ ಈ ಎರಡು ಪ್ರಮುಖ ಪಕ್ಷಗಳಲ್ಲಿ ಬಹಳಷ್ಟು ಸಾಮ್ಯತೆ ಇದೆ ಎಂಬುದಕ್ಕೆ ಇದು ಇನ್ನೊಂದು ಸಾಕ್ಷಿ. ಎಷ್ಟೆಂದರೂ ಎರಡೂ ಗುತ್ತೇದಾರಿ ಬಂಡವಾಳಶಾಹಿ-ಭೂಮಾಲಕರ ಪಕ್ಷಗಳು ತಾನೆ?

ಕೃಪಾಂಕ ರದ್ದತಿ ವಿದ್ಯಾರ್ಥಿಗಳಿಂದ ಭಾರೀ ಪ್ರತಿಭಟನೆ

ರಾಜ್ಯ ಹೈಕೋರ್ಟ್ ಆದೇಶದಂತೆ ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ನೀಡುತ್ತಿದ್ದ ಶೇ. 10 ಕೃಪಾಂಕ ಪದ್ಧತಿಯನ್ನು ರದ್ದುಗೊಳಿಸಿರುವುದನ್ನು ರಾಜ್ಯದ ವಿದ್ಯಾರ್ಥಿವೃಂದ ಹಾಗೂ ಯುವಜನತೆಯು ರಾಜ್ಯದೆಲ್ಲೆಡೆ ಭಾರೀ ಪ್ರತಿಭಟನೆ ನಡೆಸಿ ಮುಂದುವರಿಸುವಂತೆ ಒತ್ತಾಯಿಸಿ ನಡೆಸುತ್ತಿರುವ ಹೋರಾಟಗಳ ಹಲವು ವರದಿಗಳು

ಮಂಗಳೂರು: ಭಾರತ ವಿದ್ಯಾರ್ಥಿ ಫೇಡರೇಷನ್ ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಮತ್ತೆ ಕೃಪಾಂಕ ಪದ್ಧತಿಯನ್ನು ಮುಂದುವರೆಸುವಂತೆ ರಾಜ್ಯ ಸರ್ಕಾರವು ಸುಗ್ರೀವಾಜ್ಞೆ ಹೊರಡಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗಳನ್ನುದ್ದೇಶಿಸಿ ಸುನೀಲ್ ಕುಮಾರ್ ಬಜಾಲ್, ಅಕ್ಮಲ್ ಪಟೇಲ್, ಭಾಸ್ಕರ ಶೆಟ್ಟಿ ಮಾತನಾಡಿದರು.

ಮೆರವಣಿಗೆಯಲ್ಲಿ ಹರಿಪ್ರಸಾದ್, ಸುನಿಲ್ ಕುಮಾರ್, ವಿನಾಯಕ.ಕೆ. ಸ್ಟಿವನ್‌ವಾಸ್ ವಹೀದ ಖಾನ್, ವಿನಯ ನೇತ್ರ, ಸಂದೇಶ ಕುಮಾರ್ ಹೆಗ್ಡೆ, ಪ್ರಮಿಳಾ.ಕೆ. ಆಶಾ.ಡಿ. ಮತ್ತು ದೀಪಕ್ ಬಜಾಲ್ ನೇತೃತ್ವ ವಹಿಸಿದ್ದರು.

ಹೂವಿನಹಡಗಲಿ: ಕೃಪಾಂಕ ಮುಂದುವರಿಸುವಂತೆ ಒತ್ತಾಯಿಸಿ 500 ಕ್ಕೂ ಹೆಚ್ಚು ಎಸ್.ಎಫ್.ಐ. ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು ತಹಸಿಲ್ದಾರರಿಗೆ ಮನವಿ ಸಲ್ಲಿಸಿದರು.

ಮೆರವಣಿಗೆಯಲ್ಲಿ ಎಸ್.ಎಫ್.ಐ.ನ ಎ. ನರೇಂದ್ರ, ಪತ್ರೇಶ್, ಹಾಲೇಶ್, ವಿ. ಮೂರ್ತಿ ಸೌಮ್ಯರಾಣಿ, ವಿಜಯ ಲಕ್ಷ್ಮಿ ಮುಂಚೂಣಿಯಲ್ಲಿದ್ದರು.

ರಾಮದುರ್ಗ: ಕೃಪಾಂಕ ಮುಂದುವರಿಯುವಂತೆ ಕೇಂದ್ರ ಸರ್ಕಾರವನ್ನು ಸುಗ್ರಿವಾಜ್ಞೆ ಹೊರಡಿಸುವಂತೆ ರಾಜ್ಯ ಸರ್ಕಾರ ಒತ್ತಾಯಿಸಬೇಕೆಂದು ಪಿ.ಯು.ಸಿ. ಮಂಡಳಿಯು ಥಿಯರಿ ಪರೀಕ್ಷೆ ಆಧಾರದಲ್ಲಿ ಪ್ರಾಯೋಗ ಪರೀಕ್ಷೆ ಅಂಕ ನೀಡುವ ಕುರಿತು ಹೊರಡಿಸಿರುವ ಸುತ್ತೋಲೆ ವಾಪಸ್ಸು ಪಡೆಯುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೇಡರೇಷನ್ ಕರೆಯ ಮೇರೆಗೆ ತಾಲೂಕು ಸಮಿತಿ ನೇತೃತ್ವದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಾಲಾ ಕಾಲೇಜ್ ಬಹಿಷ್ಕರಿಸಿ ಮೆರವಣಿಗೆ ಮೂಲಕ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಎಸ್.ಎಫ್.ಐ. ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ಗ್ರಾಮೀಣ ಅಭ್ಯರ್ಥಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಲು ಸುಗ್ರೀವಾಜ್ಞೆ ಮೂಲಕ ಕೃಪಾಂಕ ನೀತಿ ಜಾರಿಗೊಳಿಸುವಂತೆ ಆಗ್ರಹಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಕಾರ್ಮಿಕ ಮುಖಂಡ ವಿ.ಪಿ ಕುಲಕರ್ಣಿ ಕೇಂದ್ರ ಸರ್ಕಾರದ ಶಿಕ್ಷಣ ವ್ಯಾಪಾರಿಕರಣ ಹಾಗೂ ಕೋಮುವಾದೀಕರಣ ವಿರುದ್ಧದ ಡಿ. 11 ರ ಮುಷ್ಕರದಲ್ಲಿ ಭಾಗವಹಿಸುವಂತೆ ಕರೆ ನೀಡಿದರು.

ಮೆರವಣಿಗೆ ನೇತೃತ್ವವನ್ನು ತಾಲೂಕು ಅಧ್ಯಕ್ಷ ಎಸ್.ಕೆ. ಪಾಟೀಲ, ಕಾರ್ಯದರ್ಶಿ ಎಲ್.ಎಚ್. ಕೊರವರ, ಹರನಟ್ಟಿ ಕೊಳ್ಳಿ, ಅಲಗುಂಡಿ ದೊಡ್ಡಮನಿ ಜಾಧವ ಮುಂತಾದವರು ವಹಿಸಿದ್ದರು.

ಗುಲ್ಬರ್ಗ: ನವೆಂಬರ್ 26 ರಂದು ಭಾರತ ವಿದ್ಯಾರ್ಥಿ ಫೇಡರೇಶನ್ ನೇತೃತ್ವದಲ್ಲಿ ನಗರದ ಶಾಲಾ ಕಾಲೇಜುಗಳ ಬಹಿಷ್ಕರಿಸಿದ ಸಾವಿರಾರು ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದರು.

ಇದೇ ಸಂದರ್ಭದಲ್ಲಿ ತಾಲೂಕು ಮುಖಂಡರಾದ ಚಂದ್ರಕಾಂತ ಬಾಮಿರಾವ ಡಿ.ವೈ.ಎಫ್.ಐ.ನ ಶ್ರೀಮಂತ ಬಿ. ಹೊಳ್ಕರ ಮಾತನಾಡಿ ಕೂಡಲೇ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಬೇಕೆಂದರು. ಬೆಂಗಳೂರು ವಿ.ವಿ.ಯ ಸೆನೆಟ್ ಸದಸ್ಯೆ ಲಕ್ಷ್ಮಿ ಮಾತನಾಡಿ ಕೇಂದ್ರ ಸರ್ಕಾರದ ಶಿಕ್ಷಣ ನೀತಿ ವಿರುದ್ಧ ಡಿ.11 ರ ಮುಷ್ಕರದಲ್ಲಿ ವಿದ್ಯಾರ್ಥಿ ಸಮುದಾಯ ಭಾಗವಹಿಸುವಂತೆ ಕರೆ ನೀಡಿದರು. ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಅಪ್ಪಯ್ಯ ಹಿರೇಮಠ ಮಾತನಾಡಿ ವಿಜ್ಞಾನ ವಿಭಾಗದ ಪ್ರಾಯೋಗಿಕ ಅಂಕಗಳ ಹೊಸ ನಿಯಮ ವಾಪಸ್ಸು ಪಡೆಯುವಂತೆ ಆಗ್ರಹಿಸಿದರು. ಜಿಲ್ಲಾಧ್ಯಕ್ಷ ಜೈಲಾಲ ತೋಟದ ಮನೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಮೆರವಣಿಗೆಯಲ್ಲಿ ಸುನಿಲ್ ಕುಮಾರ್ ಅಂಬಲಗಾ, ಕೃಷ್ಣಾ ಸುರಪುರ, ಸಿದ್ಧರಾಮ ಬೀರಾದಾರ ಮುಂತಾದವರು ನೇತೃತ್ವ ವಹಿಸಿದ್ದರು.

ಚಿತ್ತಾಪೂರ: ತಾಲೂಕಿನ ಹೆಬ್ಬಾಳ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳು ಎಸ್.ಎಫ್. ಐ. ನೇತೃತ್ವದಲ್ಲಿ ತರಗತಿಗಳನ್ನು ಬಹಿಷ್ಕರಿಸಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ ಪಂಚಾಯತ್ ಅಧ್ಯಕ್ಷರ ಮೂಲಕ ಮನವಿ ಸಲ್ಲಿಸಿದರು. ಮಲ್ಲಮ್ಮ ಹೆಬ್ಬಾಳ, ಎಂ. ರಾಶಿ ನಾಥ ಬಂಡಿ, ತಾಳಿಪಟೇಲ ನೇತೃತ್ವ ವಹಿಸಿದ್ದರು.

ಹಾನಗಲ್: ನವೆಂಬರ್ 21 ರಂದು ನಡೆದ ತಾಲೂಕು ಮಟ್ಟದ ಕಾರ್ಯಕರ್ತರ ಸಭೆಯು ಕೃಪಾಂಕ ಪದ್ದತಿಯನ್ನು ಮುಂದುವರಿಸುವಂತೆ ಸರ್ಕಾರವನ್ನು ಒತ್ತಾಯಿಸಿದೆ. ಎಸ್.ಎಫ್.ಐ. ಮುಖಂಡ ರಾದ ವಿಜಯ ಕುಮಾರ್ ಮಾತನಾಡಿ ಡಿ. 11 ರ ಮುಷ್ಕರವನ್ನು ಯಶಸ್ವಿಯಾಗ ಬೇಕಾದರೆ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದರು. ಸಭೆಯಲ್ಲಿ ಮಾರುತಿ ಬಂಡಿವಡ್ಡರ, ಹಾದಿಮನಿ, ಶಾಂತ ಹೀರೇಮಠ ಪಾಂಡುರಂಗ ನಾಗೋಬೆ ಮುಂತಾದವರು ಭಾಗವಹಿಸಿದ್ದರು.

ಪಿಯುಸಿ ನೂತನ ಪ್ರಾಯೋಗಿಕ ನೀತಿಯ ವಿರುದ್ಧ ವಿದ್ಯಾರ್ಥಿಗಳ ಪ್ರತಿಭಟನೆ

ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್, ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾ, ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಶನ್‌ನ ಬೆಂಗಳೂರು ಜಿಲ್ಲಾ ಸಮಿತಿಗಳ ಆಶ್ರಯ ದಲ್ಲಿ ಡಿಸೆಂಬರ್ 2 ರಂದು ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಯಿತು. ಪಿ.ಯು ವಿಜ್ಞಾನ ವಿದ್ಯಾರ್ಥಿಗಳ ಪ್ರಯೋಗಿಕ ಅಂಕಗಳನ್ನು ಥಿಯರಿಗೆ ಅನುಸಾರವಾಗಿ ಕೆಳಗಿಸಬೇಕೆಂಬ ಪಿಯುಸಿ ಮಂಡಳಿಯ ತರ್ಕ ಹೀನ ನೀತಿಯ ವಿರುದ್ಧ ಸುಮಾರು 30 ಕ್ಕೂ ಹೆಚ್ಚು ಕಾಲೇಜುಗಳಿಂದ ಬಂದ ನೂರಾರು ವಿದ್ಯಾರ್ಥಿಗಳು ಈ ಪ್ರತಿಭಟನಾ ಪ್ರದರ್ಶನ ದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ. ಪ್ರಕಾಶ್‌ರವರು "ಒಬ್ಬ ವಿದ್ಯಾರ್ಥಿ ಥಿಯರಿಯಲ್ಲಿ ಗಳಿಸುವ ಅಂಕಗಳಿಗೆ ಅನುಪಾತಕ್ಕೆ ತಕ್ಕಂತೆ ಪ್ರಾಕ್ಟಿಕಲ್ ಅಂಕವನ್ನು ಕೆಳಗಿಳಿಸು ವುದು ಅಸಂಬದ್ಧ, ಅವೈಜ್ಞಾನಿಕ. ವಿದ್ಯಾರ್ಥಿ ಯೊಬ್ಬ ಭಾಷೆಯ ತೊಂದರೆ, ಸಮಯದ ಮಿತಿ ಇನ್ನಿತರ ಹಲವಾರು ಕಾರಣಗಳಿಂದಾಗಿ ಥಿಯರಿಯಲ್ಲಿ ಕಡಿಮೆ ಅಂಕಗಳಿಸಿದರೂ ಪ್ರಾಯೋಗಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಲು ಸಾಧ್ಯವಿದೆ. ಅಲ್ಲದೆ ವಿಜ್ಞಾನದಲ್ಲಿ ತುಂಬಾ ಮಹತ್ವ ವಿರುವ ಪ್ರಾಯೋಗಿಕ ವಿಷಯುಗಳನ್ನು ಪಿಯುಸಿ ಮಂಡಳಿಯ ಅಧಿಕಾರಿಗಳು ನಿರ್ಲಕ್ಷಿಸುವ ಸಾಧ್ಯತೆ ಸಹ ಇದೆ ಎಂದರು.

ಎ.ಐ.ಡಿ.ಎಸ್.ಓ.ನ. ರಾಜ್ಯ ಅಧ್ಯಕ್ಷರಾದ ಕೆ. ಉಮಾ ರವರು ಮಾತನಾಡುತ್ತಾ "ಈ ನೀತಿಯ ವಿರುದ್ಧ ನಡೆಯುತ್ತಿರುವ ಈ ಪ್ರತಿಭಟನೆ ಮೊದಲಲ್ಲ, ಬದಲಿಗೆ,ರಾಜ್ಯದಾದ್ಯಂತ ಸಹಸ್ರಾರು ವಿದ್ಯಾರ್ಥಿಗಳು ರಾಜ್ಯ ದೆಲ್ಲೆಡೆ ರಸ್ತೆಗಿಳಿದಿದ್ದಾರೆ. ಸರ್ಕಾರ ಈ ನೀತಿ ಯನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ರಾಜ್ಯದ ಎಲ್ಲೆಡೆ ರಾಸ್ತಾರೋಕೋ, ಕಾಲೇಜ್ ಬಂದ್ ಇತ್ಯಾದಿ ಉಗ್ರ ಹೋರಾಟಕ್ಕೆ ವಿದ್ಯಾರ್ಥಿಗಳು ಸಿದ್ಧರಾಗಬೇಕೆಂದು ಕರೆ ನೀಡಿದರು. ಎ.ಐ.ಎಸ್.ಎಫ್.ನ ರಾಜ್ಯ ಕಾರ್ಯ ದರ್ಶಿ ಸಮಿತಿಯ ಸದಸ್ಯ ಲಕ್ಷ್ಮಣ್ ರವರು ರಾಜ್ಯ ದೆಲ್ಲೆಡೆ ಇಂತಹ ಪ್ರತಿಭಟನೆ ಗಳು ಮುಂದು ವರಿಯುತ್ತಿದೆ ಎಂದರು. ಹಲ ವಾರು ಕಾಲೇಜುಗಳ ವಿದ್ಯಾರ್ಥಿ ಪ್ರತಿನಿಧಿಗಳು ಸಭೆಯನ್ನುದ್ದೇಶಿಸಿ ಮಾತ ನಾಡಿದರು. ಎ.ಐ.ಡಿ.ಎಸ್.ಓ.ನ ಕೆ.ಉಮಾ, ಎಸ್.ಎಫ್.ಐ.ನ ಉಮೇಶ್, ಎ.ಐ. ಎಸ್.ಎಫ್.ನ ಲಕ್ಷಣ್ ರವರ ನೇತೃತ್ವ ದಲ್ಲಿ ಹಲವಾರು ಕಾಲೇಜುಗಳ ವಿದ್ಯಾರ್ಥಿಗಳ ಪ್ರತಿನಿಧಿಗಳು ನಿಯೋಗ ಸಂಜಯ್ ಕೌಲ್ ರವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.



ಶ್ರೀರಾಮ ಪುರ ಯುವಜನ ಸಮ್ಮೇಳನ

ಬೆಂಗಳೂರಿನ ಡಿ.ವೈ.ಎಫ್.ಐ. ಸಂಘಟನೆಯ ಪ್ರಮುಖ ಪ್ರದೇಶವಾದ ಶ್ರೀರಾಮ ಪುರದ ಯುವ ಜನ ಸಮ್ಮೇಳನವು ನವೆಂಬರ್ 30 ರಂದು ನಡೆಯಿತು. ಉದ್ಘಾಟನೆಯನ್ನು ಶ್ರೀಧರ್ ಮೂರ್ತಿ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಬೆಂಗಳೂರು ಜಿಲ್ಲಾ ಸಾಕ್ಷರತ ಸಮಿತಿ ಕಾರ್ಯದರ್ಶಿ ಎನ್. ಚಲುವರಾಜ್, ಚಂದ್ರ ಶ್ರೀನಿವಾಸ್ ಪಾಲ್ಗೊಂಡು ಮಾತನಾಡಿದರು.

ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಉಪಸ್ಥಿತರಿದ್ದು ದೇಶದ ಯುವಜನ ಸಮಸ್ಯೆ ಮತ್ತು ಅವರ ಪಾತ್ರ ಕುರಿತು ಮಾತನಾಡಿ ಸ್ಫೂರ್ತಿನೀಡಿದರು. ಸಾಂಸತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡವರಿಗೆ ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಣ್ ಕುಮಾರ್ ಬಹುಮಾನ ವಿತರಿಸಿದರು.

ನೂತನ ಸಮಿತಿ:

ಅಧ್ಯಕ್ಷರು- ಎಸ್. ಗೋಪಾಲ.

ಉಪಾಧ್ಯಕ್ಷರುಗಳು:- ಎನ್. ಸುರೇಶ್, ಪಿ. ಶ್ರೀನಿವಾಸ, ರವಿ ಕುಮಾರ್, ಕೆ.ಎಸ್. ಕುಮಾರ್, ಲಕ್ಷ್ಮಿ.ಕೆ, ಎಂ.ಎಸ್. ಭಾಗ್ಯ

ಕಾರ್ಯದರ್ಶಿ:- ಎನ್. ಮುನಿರಾಜ್

ಸಹಕಾರ್ಯದರ್ಶಿಗಳು:- ಧನರಾಜ್, ಚಂದ್ರಯ್ಯ, ರಾಜು, ಆನಂದಕುಮಾರ್, ನಾರಾಯಣ

ಖಜಾಂಚಿ: ಜಿ.ರವಿ. ಜೊತೆ 11 ಸದಸ್ಯರ ಸಮಿತಿ ಆಯ್ಕೆ ಗೊಂಡಿತು.

ಡಿವೈಎಫ್ಐ ಆಶ್ರಯದಲ್ಲಿ ಉಚಿತ ಆರೋಗ್ಯ ಶಿಬಿರ

ಕೆಜಿಎಫ್ ಪ್ರದೇಶದ ಬಡ ಮತ್ತು ಮಧ್ಯಮ ವರ್ಗದ ಜನರ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಕೆ.ಜಿ.ಎಫ್.ನ ಡಿ.ವೈ.ಎಫ್.ಐ. ಹಾಗೂ ಇಂಡಿಯನ್ ಮೇಡಿಕಲ್ ಅಸೊಸಿಯೇಶನ್ ಘಟಕದ ಆಶ್ರಯದಲ್ಲಿ ನವೆಂಬರ್ 22 ರಂದು ಆಂಡರ್‌ಸನ್ ಪೇಟೆಯ ಲಕ್ಷ್ಮಿ ಟಾಕೀಸ್ ಆವರಣದಲ್ಲಿ ಉಚಿತ ಆರೋಗ್ಯ ಶಿಬಿರ ನಡೆಯಿತು.

ಶಿಬಿರದ ಉದ್ಘಾಟನೆಯನ್ನು ಸಿಪಿಐ(ಎಂ) ಮಾಜಿ ಶಾಸಕರಾದ ಟಿ.ಎನ್ ಮಣಿ ದೀಪ ಬೆಳಗಿಸುವ ಮೂಲಕ ನೇರವೇರಿಸಿದರು. ಮುಖ್ಯ ಅತಿಥಿಗಳಾಗಿದ್ದ ಡಿ.ವೈ.ಎಸ್.ಪಿ. ಕುಶಾಲಪ್ಪನವರು ಮಾತನಾಡಿ ಇಂತಹ ಸಾಮಾಜಿಕ ಕಾರ್ಯಕ್ರಮಗಳು ಹಳ್ಳಿ ಹಳ್ಳಿಗೂ ವಿಸ್ತರಿಸಿ ಹೆಚ್ಚು ಹೆಚ್ಚು ಬಡ ಜನರಿಗೆ ತಲುಪುವಂತಾಗ ಬೇಕು. ಡಿ.ವೈ.ಎಫ್.ನ ಈ ಕಾರ್ಯಕ್ರಮ ಎಲ್ಲಾ ಯುವ ಸಂಘಟನೆಗಳಿಗೆ ಮಾದರಿಯಾಗಿದೆ ಎಂದರು. ಎಸ್.ಕೃಷ್ಣನ್ ಹಾಗೂ ನೂರಿ ಶಹಜಾದ್ ಅತಿಥಿಗಳಾಗಿದ್ದರು.

ಎ.ಆರ್ ಬಾಲು ರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆ. ರವೀಂದ್ರ ಸ್ವಾಗತಿಸಿ ವಿಜಯ ಕುಮಾರ್ ವಂದನೆ ಸಲ್ಲಿಸಿದರು.

ಸಾವಿರಕ್ಕೂ ಅಧಿಕ ಬಡ ಮತ್ತು ಮಧ್ಯಮ ವರ್ಗದ ಜನರು ಪ್ರಯೋಜನ ಪಡೆದ ಈ ಶಿಬಿರದಲ್ಲಿ ನಾಲ್ಕು ಮಹಿಳಾ ವೈದ್ಯರು ಸೇರಿದಂತೆ 14 ತಜ್ಞ ವೈದ್ಯರು ಬಿಜಿಎಂಎಲ್ ಆಸ್ಪತ್ರೆಯ 20 ಹೆಚ್ಚು ಟೆಕ್ನಿಷಿಯನ್ಸ್‌ಗಳು ನರ್ಸಿಂಗ್ ಕಾಲೇಜಿನಿಂದ ವಿದ್ಯಾರ್ಥಿಗಳು ಪಾಲ್ಗೊಂಡು ಶಿಬಿರ ಯಶಸ್ವಿಗೊಳಿಸಿದರು ಸ್ಥಳೀಯ ವೈದ್ಯರ ಜೊತೆ ಪ್ರಶಸ್ತಿ ವಿಜೇತ ಹೃದಯ ರೋಗ ತಜ್ಞ ಡಾ|| ರಾಜೇಂದ್ರ ಕುಮಾರ್ ಭಾಗವಹಿಸಿದ್ದು ವಿಶೇಷವಾಗಿತ್ತು.

ಸತ್ಕಾರ ಕೂಟದಲ್ಲಿ ಭಾಗವಹಿಸಿ ಮಾತನಾಡಿದ ಡಾ|| ರಾಜೇಂದ್ರಕುಮಾರ್ ಇದುವರೆಗೆ ಐ.ಎಂ.ಎ ಯಿಂದ ನಡೆದ ಶಿಬಿರ ಇಷ್ಟೊಂದು ಯಶಸ್ವಿಯಾಗಿರಲಿಲ್ಲ ಇದು ಕೆ.ಜಿ.ಎಫ್. ಇತಿಹಾಸದಲ್ಲಿ ಒಂದು ಮೈಲುಗಲ್ಲು ಎಂದರು.

ಡಿ.ವೈ.ಎಫ್.ಐ. ಘಟಕ ರಚನೆ

ಗುಲ್ಬರ್ಗ: ಚಿತ್ತಾಪೂರ ತಾಲೂಕಿನ ರಾಜಾಪೂರ ಗ್ರಾಮದ ಯುವ ಜನತೆ ನವೆಂಬರ್ 23 ರಂದು ಒಂದೆಡೆ ಸೇರಿ ತಮ್ಮ ಹಳ್ಳಿಯ ಸಮಸ್ಯೆಗಳ ಪರಿಹಾರಕ್ಕಾಗಿ ಡಿ.ವೈ.ಎಫ್.ಐ. ಸಂಘಟನೆಯ ಘಟಕ ರಚಿಸಿ ಕೊಂಡರು. ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯದರ್ಶಿ ಶ್ರೀಮಂತ. ಬಿ ಹೊಳ್ಕರ, ಖಜಾಂಚಿ ಬಾಬರೆಖಾನ್ ಉಪಸ್ಥಿತರಿದ್ದು ಮಾರ್ಗದರ್ಶನದ ಜೊತೆ ಸಂವಿಧಾನ ಮತ್ತು ಕಾರ್ಯಕ್ರಮ ಪರಿಚಯಿಸಿದರು.

ಅಧ್ಯಕ್ಷರು ನಾರಾಯಣ ರೆಡ್ಡಿ ಎನ್. ಪೂತಲ್, ಉಪಾಧ್ಯಕ್ಷರು, ಸಿದ್ದಣ್ಣ. ಎಸ್. ಪಿಸ್ತೂಪೂರ ಕಾರ್ಯದರ್ಶಿ ಕುಪೇಂದ್ರ ಎಸ್. ಕಾಳಗಿ ಸಂಘಟನಾ ಕಾರ್ಯದರ್ಶಿ ಬಸವರಾಜ ಆರ್ ಕುಡಳ್ಳಿ ಹಾಗೂ ಖಜಾಂಚಿ, ಬಸವ ರಾಜ. ಸಿ. ಕಂಬಾರ ನೂತನ ಘಟಕ ಪದಾಧಿಕಾರಿಗಳು.

ಮಾವಿನಕುರ್ವೆ ಡಿ.ವೈ.ಎಫ್.ಐ. ಘಟಕ ಉದ್ಘಾಟನೆ:

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಡಿ.ವೈ.ಎಫ್ಐ ಮಾವಿನಕುರ್ವೆ ಗ್ರಾಮ ಘಟಕವನ್ನು ರಾಜ್ಯಸಮಿತಿ ಅಧ್ಯಕ್ಷರಾದ ಶಾಂತರಾಮ ನಾಯಕ ನವೆಂಬರ್ 28 ರಂದು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಮಾತನಾಡಿದ ಅವರು ಯುವಜನ ಚಳುವಳಿಯ ಅವಶ್ಯಕತೆ ಬಗ್ಗೆ ತಿಳಿಸುತ್ತ ನಿರುದ್ಯೋಗ ಸಮಸ್ಯೆ ವಿರುದ್ಧ ದೊಡ್ಡ ಆಂದೋಳನ ನಡೆಸುವ ಅವಶ್ಯಕತೆ ಇದೆಯೆಂದರು. ಬೆಲೆ ಏರಿಕೆ, ತಪ್ಪು ಆರ್ಥಿಕ ನೀತಿ ಕೋಮುವಾದ ವಿರುದ್ಧ ಡಿಸೆಂಬರ್ 11 ರಂದು ನಡೆಯುವ ಅಖಿಲ ಭಾರತ ಸಾರ್ವಜನಿಕ ಮುಷ್ಕರಕ್ಕೆ ಡಿ.ವೈ.ಎಫ್.ಐ ಬೆಂಬಲಿಸಿದ್ದು ಯಶಸ್ವಿಗೆ ಕರೆ ನೀಡಿದರು.

ಅಥಿತಿಗಳಾಗಿ ಭಾಗವಹಿಸಿ ಮಾತನಾಡಿದ ಮಾವಿನಕುರ್ವೆ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ತಿಲಕ ಗೌಡವರು ಯುವಜನರು ಸಂಘಟಿತವಾಗಿ ತಮ್ಮ ಸಮಸ್ಯೆ ನಿವಾರಣೆಗಾಗಿ ಹೋರಾಡಬೇಕೆಂದರು.

ನೂತನ ಸಮಿತಿ:

ಅಧ್ಯಕ್ಷರಾಗಿ ರಾಮ ನೀಲಕಂಠ ಗೌಡ, ಕಾರ್ಯದರ್ಶಿಯಾಗಿ ಉಲ್ಲಾಸ ಈರಪ್ಪ ನಾಯ್ಕ, ಉಪಾಧ್ಯಕ್ಷರಾಗಿ ಶಿವರಾಮ ಸುಬ್ರಾಯ ಗೌಡ, ಸಹಕಾರ್ಯದರ್ಶಿಯಾಗಿ ಹನುಮಂತ ಕರಿಯಾ ಗೌಡ, ಖಜಾಂಚಿಯಾಗಿ ಶಿವಾನಂದ ನಾಯ್ಕ ಸಮಿತಿ ಸದಸ್ಯರುಗಳಾಗಿ ತಿಮ್ಮಪ್ಪ ಚಂದ್ರ ಗೌಡ ವೆಂಕಟೇಶ ನಾರಾಯಣ ಗೌಡ, ಸುಬ್ರಾಯ ಹಂಪ ಗೌಡ, ಈಶ್ವರ ವೆಂಕಟ ನಾಯ್ಕ ಮತ್ತು ರಾಮ ಗೋವಿಂದ ಗೌಡ ಆಯ್ಕೆಗೊಂಡರು.

ವರ್ತೂರು ವಲಯ ಡಿ.ವೈ.ಎಫ್.ಐ. ಸಮ್ಮೇಳನ

ಬೆಂಗಳೂರು ಮಹಾನಗರದ ವರ್ತೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಸಣ್ಣ ಸಣ್ಣ ಘಟಕಗಳಾಗಿ ಸಂಘಟಿತವಾಗಿ ಯುವಜನ ಸಮಸ್ಯೆಗಳ ವಿರುದ್ಧ ಹೋರಾಡುವ ಮೂಲಕ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿತು.

ನವೆಂಬರ್ 15 ರಂದು ಎಲ್ಲಾ ಘಟಕಗಳು ಜೊತೆ ಗೂಡಿ ಉದಯ ನಗರದಲ್ಲಿ ವಲಯ ಪ್ರಥಮ ಸಮ್ಮೇಳನ ನಡೆಯಿತು. 300 ಪ್ರತಿನಿಧಿ ಹಾಗೂ ವೀಕ್ಷಕರು ಭಾಗವಹಿಸಿದ್ದರು. ಸಮ್ಮೇಳನವನ್ನು ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಹಾಗೂ ಸ್ಥಳೀಯ ಹಲವು ಮುಖಂಡರು ಭಾಗವಹಿಸಿದ್ದರು.

ಸಮ್ಮೇಳನವು ಸ್ಥಳಿಯವಾಗಿ ಸಮುದಾಯ ಭವನ ನಿರ್ಮಾಣ, ನಾಗರೀಕ ಸೌಲಭ್ಯ ಕಲ್ಪಿಸುವಂತೆ ಆಹಾರ ಮತ್ತು ಸರಬರಾಜು ಉತ್ತಮ ಪಡಿಸುವಂತೆ ಒತ್ತಾಯಿಸುವುದರ ಜೊತೆ ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಹೊಸ ಆರ್ಥಿಕ ನೀತಿ ಮುಂದುವರಿಕೆ ವಿರೋಧಿಸಿ ನಿರ್ಣಯ ಕೈಗೊಂಡಿತು.

ಪದಾಧಿಕಾರಿಗಳು:

ಅಧ್ಯಕ್ಷರು- ಸಿ. ರಾಮಚಂದ್ರ

ಉಪಾಧ್ಯಕ್ಷರು-ಜಯರಾಂ.ಪಿ, ರಮೇಶ್.ಸಿ, ವಿಜಯಕುಮಾರ್, ರವಿಚಂದ್ರನ್,

ಕಾರ್ಯದರ್ಶಿ- ರಾಮಚಂದ್ರರೆಡ್ಡಿ

ಸಹಕಾರ್ಯದರ್ಶಿಗಳು: ಸುರೇಶ್ ವೇಣುಗೋಪಾಲ್, ಮಂಜುನಾಥ ಹಾಗೂ ಖಜಾಂಚಿ- ಪ್ರಸನ್ನ.



ಲೋಕಸಂಚಾರ

ಶರತ್ ಚಂದ್ರ

ಕೆನಡಾದ ಕ್ವಿಬೆಕ್‌ನಲ್ಲಿ ಪ್ರತ್ಯೇಕತಾವಾದಿಗಳ ವಿಜಯ

ಕೆನಡಾದ ಫ್ರೆಂಚ್‌ಮಾತನಾಡುವ ಪ್ರಾಂತ್ಯ ಕ್ವಿಬೆಕ್‌ನಲ್ಲಿ ಆ ಪ್ರಾಂತ್ಯ ಪ್ರತ್ಯೇಕವಾಗಬೇಕು ಎನ್ನುವ ಪಾರ್ಟಿ ಕ್ವಿಬೆಕೊಸ್ ಪ್ರಾಂತೀಯ ಪಾರ್ಲಿಮೆಂಟಿನಲ್ಲಿ ಭಾರಿ ಬಹುಮತ ಪಡೆದಿದೆ. ಆದರೆ ಈ ವಿಜಯ ಪ್ರತ್ಯೇಕತಾವಾದಕ್ಕೆ ಜನ ಬೆಂಬಲ ಎಂದರ್ಥ ಅಲ್ಲ ಎಂಬುದು ವೀಕ್ಷಕರ ಅಭಿಪ್ರಾಯ.

ಈ ಪಕ್ಷ ಪ್ರಾಂತೀಯ ಪಾರ್ಲಿಮೆಂಟಿನಲ್ಲಿ 125 ಸೀಟುಗಳಲ್ಲಿ 75 ಸೀಟುಗಳನ್ನು ಪಡೆದರೂ ಶೇಕಡಾ 43 ಮತ ಮಾತ್ರ ಪಡೆದಿದೆ. ಲಿಬರಲ್ ಪಕ್ಷ ಶೇಕಡ 44 ಮತಗಳಿಸಿದೆ. ಪಾರ್ಟಿ ಕ್ವಿಬೆಕೊಸ್‌ಗೆ ಮತ ನೀಡಿದವರೆಲ್ಲಾ ಪ್ರತ್ಯೇಕವಾಗಲು ಪರವಾಗಿದ್ದಾರೆ ಎಂದಿಟ್ಟುಕೊಂಡರೂ ಪ್ರತ್ಯೇಕತಾವಾದಕ್ಕೆ ಜನ ಬೆಂಬಲ ಇಲ್ಲ ಎಂಬುದು ಕೆಲವು ವೀಕ್ಷಕರ ಅಭಿಪ್ರಾಯ ಕ್ವಿಬೆಕ್ ಪ್ರಾಂತ್ಯ ಪ್ರತ್ಯೇಕವಾಗಲು ಕೆನಡಾ ಸಂವಿಧಾನ ಮತ್ತು ಸುಪ್ರೀಂಕೋರ್ಟಿನ ಪ್ರಕಾರ ಜನ ಮತಸಂಗ್ರಹದಲ್ಲಿ ಆ ಬಗ್ಗೆ ಸ್ಪಷ್ಟ ಪ್ರಶ್ನೆ ಮುಂದಿಟ್ಟು ಕನಿಷ್ಟ ಶೇಕಡಾ 50 ಮತ ಅದರ ಪರವಾಗಿ ಸಿಗಬೇಕು. ಪಕ್ಷಗಳಿಗೆ ಚಲಾಯಿಸಲಾದ ಮತಗಳನ್ನು ಪ್ರತ್ಯೇಕತಾವಾದಿಗಳ ಪರ ವಿರೋಧ ಎಂದು ಹೇಳಲಾಗದಿದ್ದರೂ ಪಾರ್ಟಿ ಕ್ವಿಬೆಕೊಸ್ ಜನಮತ ಸಂಗ್ರಹಕ್ಕೆ ಒತ್ತಾಯಿಸಲಿಕ್ಕಿಲ್ಲ ಎಂಬುದು ಸಾಮಾನ್ಯ ಅಭಿಪ್ರಾಯ. ಸ್ಪಷ್ಟ ಬಹುಮತದ ಸಾಧ್ಯತೆ ಇಲ್ಲದೆ, ಜನ ಮತ ಸಂಗ್ರಹದ ಸುದ್ದಿಗೆ ಅವರು ಹೋಗಲಿಕ್ಕಿಲ್ಲ. ಅಲ್ಲದೆ ಪ್ರತ್ಯೇಕತೆ ಸನಿಹದಲ್ಲಿರುವ ಸನ್ನಿವೇಶದಲ್ಲಿ ಆರ್ಥಿಕ ಅಭದ್ರತೆ ನಿರುದ್ಯೋಗ ಸಮಸ್ಯೆ ಬಗ್ಗೆ ಜನರ ಆತಂಕ ಹೆಚ್ಚಾಗಿದೆ.

ಕ್ವಿಬೆಕ್‌ನ ಸ್ವಾಯತ್ತತೆ ಮನ್ನಿಸಿ, ವಿಶಿಷ್ಟ ಸ್ವಂತಿಕೆಗೆ ಮಾನ್ಯತೆ ನೀಡಿ ಎಂದು ಕೆನಡಾದ ಕೇಂದ್ರದ ರಾಜಕಾರಣಿಗಳಿಗೆ ಎಚ್ಚರಿಕೆ, ಪ್ರತ್ಯೇಕತೆ ಕ್ವಿಬೆಕ್‌ನ ಸಮಸ್ಯೆಗಳಿಗೆ ಪರಿಹಾರವಲ್ಲ ಎಂಬ ಎಚ್ಚರ ಇದು ಈ ಚುನಾವಣಾ ಫಲಿತಾಂಶದ ಮೂಲಕ ಜನ ಕೊಡುತ್ತಿರುವ ಸಂದೇಶ ಎಂದು ಕೆಲವು ವೀಕ್ಷಕರ ಅಭಿಪ್ರಾಯ.

ಕೆನಡಾದಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ಸಮಾವೇಶ

ಮಾನವೀಯ ಶಾಂತಿಯುತ, ಲಿಂಗ ಭೇದ ರಹಿತ ಜಗತ್ತಿಗಾಗಿ ಜಾಥಾಕ್ಕೆ ಕರೆ

ಕೆನಡಾದ ಮೊಂಟ್ರಿಯಲ್ ಪಟ್ಟಣದಲ್ಲಿ ಸೇರಿದ್ದ ಅಂತರ್ರಾಷ್ಟ್ರೀಯ ಮಹಿಳಾ ಸಮಾವೇಶ (ಅಕ್ಟೋಬರ್ 16 ರಿಂದ 18) ಕ್ರಿ.ಶ. 2000 ದ ಅಂತರ್ರಾಷ್ಟ್ರೀಯ ಮಹಿಳಾ ದಿನ (ಮಾರ್ಚ್8) ರಿಂದ ಆರಂಭಿಸಿ ಅದೇ ವರ್ಷದ ಅಕ್ಟೋಬರ್ 17 (ಬಡತನ ನಿರ್ಮೂಲನ ದಿನ) ವರೆಗೆ ಪ್ರಚಾರ ಪ್ರಕ್ಷೋಭೆ ಮತ್ತು ನ್ಯೂಯಾರ್ಕಿಗೆ ಜಾಥಾಕ್ಕೆ ಕರೆ ನೀಡಿದೆ. ಇದು 21ನೇ ಶತಮಾನದ ಹೊಸ್ತಿಲಲ್ಲಿ ಮಾನವೀಯ, ಶಾಂತಿಯುತ, ಲಿಂಗ ಭೇದ ರಹಿತ ಜಗತ್ತಿಗಾಗಿ ಮಹಿಳೆಯರ ಜಾಗತಿಕ ಜಾಥಾ'ದ ಕಾರ್ಯಕ್ರಮ. ಈ ಸಮಾವೇಶವನ್ನು ಕ್ವಿಬೆಕ್ ಮಹಿಳಾ ಫೆಡರೇಶನ್ ವ್ಯವಸ್ಥೆಗೊಳಿಸಿತ್ತು. 125 ಎಡಪಂಥೀಯರಿಂದ ಹಿಡಿದು ಮಹಿಳಾವಾದಿ ಗುಂಪುಗಳು ಹಾಗೂ 450 ಸದಸ್ಯರನ್ನು ಹೊಂದಿರುವ ಈ ಫೆಡರೇಶನ್ 1995 ರಲ್ಲಿ ಬಡತನದ ವಿರುದ್ಧ ಜಾಥಾ ಮಾಡಿದ ಅನುಭವದ ಹಿನ್ನೆಲೆಯು ಇಂತಹುದೇ ಜಾಗತಿಕ ಮಟ್ಟದ ಜಾಥಾಮಾಡುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. 70 ದೇಶಗಳಿಂದ 150 ಪ್ರತಿನಿಧಿಗಳು ಬಂದಿದ್ದರು. ಭಾರತೀಯ ಎ.ಐ.ಡಿ.ಡಬ್ಲ್ಯು.ಎ ನ ಯು.ವಾಸುಕಿ ಮಸೂದೆ ಮತ್ತು ಎನ್.ಎ.ಡಬ್ಲು.ಒ ನ ಸಸಿಸ್ಟೆಲ್ ಭಾಗವಹಿಸಿದ್ದರು.

ಸಮಾವೇಶ ಒಂದು ಕರಡು ಹಕ್ಕು ಪತ್ರವನ್ನು ಚರ್ಚಿಸಿ ಎಲ್ಲಾ ಪ್ರತಿನಿಧಿಗಳ ಟೀಕೆ ಟಿಪ್ಪಣಿಗಳು ಸೇರಿದ ಹಕ್ಕು ಪತ್ರವನ್ನು ಅಂಗೀಕರಿಸಿತು. ಉದ್ಯೋಗದ ಹಕ್ಕು, ಆಹಾರದ ಭದ್ರತೆ, ಧಾರ್ಮಿಕ ಮೂಲಭೂತವಾದದ ಅಪಾಯ, ಮೂರನೇ ಜಗತ್ತಿನ ಸಾಲ ಮನ್ನಾ, ಐ.ಎಂ.ಎಫ್. ಬ್ಯಾಂಕ್‌ಗಳ ಮೂಲಭೂತ ಬದಲಾವಣೆ ಕಾರ್ಯಕ್ರಮಗಳು ಬಂದಿದೆ, ಎಲ್ಲಾ ರೀತಿಯ ಲಿಂಗ ಭೇದದ ಕೊನೆ ಇತ್ಯಾದಿ ಬೇಡಿಕೆಗಳು ಹಕ್ಕು ಪತ್ರದಲ್ಲಿ ಸೇರಿದ್ದವು.

ಕ್ರಿ.ಶ. 2000 ವರ್ಷವಿಡೀ ಪ್ರಚಾರ ಪ್ರಕ್ಷೋಭೆ ನಂತರ ಅಕ್ಟೋಬರ್ 17 ರಂದು ಅಮೇರಿಕದಲ್ಲಿ ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆ ಪ್ರಧಾನ ಕಚೇರಿ ಎಂದು ಭಾರಿ ಜಾಗತಿಕ ಮಹಿಳಾ ಜಾಥಾ ಸೇರುವುದು ಕಾರ್ಯಕ್ರಮ. ಎ.ಐ.ಡಿ.ಡಬ್ಲ್ಯು.ಎ ಸೇರಿದಂತೆ ಹಲವು ಮಹಿಳಾ ಸಂಘಟನೆಗಳು ಈ ಜಾಥಾ ವಿಶ್ವಬ್ಯಾಂಕ್ ಐ.ಎಂ.ಎಫ್. ಮಹಿಮಾಟಿನ ಕಚೇರಿಯ ಮುಂದೆ ಸೇರಬೇಕು ಎಂದು ಭಿನ್ನಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಜಾಥಾದ ಜಾಗ ಸದ್ಯಕ್ಕೆ ಆಖೈರು ತೀರ್ಮಾನ ತೆಗೆದುಕೊಂಡಿಲ್ಲ. ಆದರೆ ಜಾಥಾ ಅಮೇರಿಕದಲ್ಲಿ ರ್‍ಯಾಲಿ ತೀರ್ಮಾನವನ್ನು ಸಮಾವೇಶ ತೆಗೆದುಕೊಂಡಿದೆ.

ಮಾನವ ಕೋಟಿಯ ಮುಂದೆ ಇರುವ ಸಮಸ್ಯೆಗಳ ಪರಿಹಾರಕ್ಕಾಗಿ ಜಾಗತಿಕ ಮಹಿಳಾ ಜಾಥಾ ಇದೇ ಮೊದಲ ವಿಶಿಷ್ಟ ಪ್ರಯತ್ನ.

ಇಂಡೋನೇಶ್ಯಾದಲ್ಲಿ ಚುನಾವಣಾ ಘೋಷಣೆ ಕ್ರಿಶ್ಚಿಯನ್ ವಿರೋಧಿ ದಂಗೆಗಳು

ಇಂಡೋನೇಶ್ಯಾದ ಅಧ್ಯಕ್ಷ ಹಬೀಬಿ ಜೂನ್ 1999 ರಲ್ಲಿ ಚುನಾವಣೆಗಳನ್ನು ನಡೆಸಲಾಗುವುದು, ಈ ಚುನಾಯಿತ ಪಾರ್ಲಿಮೆಂಟು ಅಧ್ಯಕ್ಷರ ಚುನಾವಣೆ ನಡೆಸುವುದು ಎಂದು ಘೋಷಿಸಿದ್ದರೂ ವಿದ್ಯಾರ್ಥಿಗಳ ಸರ್ಕಾರ-ವಿರೋಧಿ ಪ್ರತಿಭಟನೆ ಪ್ರತಿರೋಧ ನಿಂತಿಲ್ಲ. ಅಧ್ಯಕ್ಷ ಹಬೀಬಿ ಸೇನಾ ಮುಖ್ಯಸ್ಥ ಜನರಲ್ ವಿದಾಂತೊ ರಾಜೀನಾಮೆ ಕೊಡಬೇಕು, ಜನರಲ್ ಸುಹಾರ್ತೊರನ್ನು ತಕ್ಷಣ ಬಂಧಿಸಿ, ಆತನ ಅಪರಾಧಗಳ ಬಗ್ಗೆ ವಿಚಾರಣೆ ನಡೆಸಬೇಕು ಎಂಬ ಬೇಡಿಕೆಗಳಿಗೆ ಒತ್ತಾಯಿಸುತ್ತಿದ್ದಾರೆ.

ಚುನಾವಣೆಯ ಘೋಷಣೆಗೆ ಭಾರಿ ಉತ್ಸಾಹಕರ ಪ್ರತಿಕ್ರಿಯೆ ಇನ್ನೂ ಕಂಡುಬಂದಿಲ್ಲ. ವಿರೋಧ ಪಕ್ಷಗಳಿಗೆ ಇನ್ನು ಚುನಾವಣೆ ನಡೆಯುತ್ತದೆ ಎಂದು ಭರವಸೆ ಹೊಂದಿಲ್ಲ. ಚುನಾವಣೆಯಲ್ಲಿ ಯಾರು ಭಾಗವಹಿಸಬಹುದು, ರಾಜಕೀಯ ಪಕ್ಷಗಳ ನೊಂದಣಿಕೆಗೆ ನಿಯಮಗಳೇನು ಎಂಬೆಲ್ಲಾ ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಈ ನಡುವೆ ಕ್ರಿಶ್ಚಿಯನ್ನರ ಮೇಲೆ ರಾಜಧಾನಿಯಲ್ಲಿ ನಿಗೂಢ ರೀತಿಯಲ್ಲಿ ದಾಳಿಗಳು ಆರಂಭವಾಗಿವೆ. ಹನ್ನೆರಡಕ್ಕೂ ಹೆಚ್ಚು ಚರ್ಚುಗಳನ್ನು ಹಾಳುಗೆಡವಲಾಗಿದೆ ಇಲ್ಲವೆ ಸುಡಲಾಗಿದೆ. ಒಂದು ಕ್ಯಾಥೊಲಿಕ್ ಸ್ಕೂಲನ್ನು ಸುಡಲಾಗಿದೆ. ಆರು ಜನ ಈ ದಾಳಿಗಳಲ್ಲಿ ಸತ್ತಿದ್ದಾರೆ. ಕ್ರಿಶ್ಚಿಯನ್ ಅಲ್ಪಸಂಖ್ಯಾತರು ಸಣ್ಣ ಸಂಖ್ಯೆಯಲ್ಲಿದ್ದು ಈ ದಾಳಿಗಳಿಂದ ಎಲ್ಲರಿಗೂ ಆಶ್ಚರ್ಯವಾಗಿದೆ ಇಂಡೋನೇಶ್ಯಾದ ಆಳುವ ವಲಯಗಳು ಈ ದಾಳಿಗಳ ಹಿಂದೆ ಇದ್ದರೆ ಆಶ್ಚರ್ಯವಿಲ್ಲ ಎಂದು ಹೇಳಲಾಗುತ್ತಿದೆ. ಹಿಂದೆ ಚೀನಿ ಅಲ್ಪ ಸಂಖ್ಯಾತರ ಮೇಲೆ ದಾಳಿ ಅತ್ಯಾಚಾರಗಳ ಹಿಂದೆ ಸೈನ್ಯದ ವಿಭಾಗ ಇತ್ತು ಎಂಬುದು ಈಗ ಬಹಿರಂಗವಾಗಿದೆ. ಇಂಡೋನೇಶ್ಯಾದ ಸಾಮ್ರಾಜ್ಯ ಶಾಹಿಯ ಬಾಲಬಡುಕ ಬಂಡವಾಳಶಾಹಿಗಳ ವರ್ಗ ಹೇಗಾದರೂ ಮಾಡಿ ಪ್ರಜಾಪ್ರಭುತ್ವೀಕರಣವನ್ನು ಶಿಥಿಲಗೊಳಿಸಲು ಈ ಎಲ್ಲ ಹುನ್ನಾರ ನಡೆಸಿದೆ ಅಂತ ಕಾಣುತ್ತದೆ.

ಬ್ರಿಟಿಷ್ ಮೇಲ್ಮನೆ ರದ್ದತಿಗೆ ಸರ್ಕಾರದ ಸಲಹೆ

ಬ್ರಿಟಿಷ್ ಪಾರ್ಲಿಮೆಂಟಿನ ಮೇಲ್ಮನೆ ಹೌಸ್ ಆಫ್ ಲಾರ್ಡ್ಸ್ ನ್ನು ರದ್ದು ಮಾಡುವ ಮಸೂದೆಯನ್ನು ಟೋನಿ ಬ್ಲೇರ್‌ರ ಲೇಬರ್ ಸರ್ಕಾರ ಮಂಡಿಸುವುದಾಗಿ ರಾಣಿ ಜಂಟಿ ಸದನಕ್ಕೆ ಅಧಿವೇಶನ ಆರಂಭದ ಭಾಷಣದಲ್ಲಿ ಪ್ರಕಟಿಸಿದರು. ದೇಶವನ್ನು ಆಧುನಿಕರಿಸುವ ಲೇಬರ್ ಸರ್ಕಾರದ ಕಾರ್ಯಕ್ರಮದ ಅಂಗವಾಗಿ ಇದನ್ನು ಮಾಡಲಾಗುತ್ತಿದೆ. ಹಲವಾರು ಶತಮಾನಗಳ ಹಿಂದಿನ ಕಂದಾಚಾರಗಳು ಇನ್ನೂ ರೂಢಿಯಲ್ಲಿರುವ ಬ್ರಿಟನ್‌ನಲ್ಲಿ ಇದು ಭಾರೀ ದೊಡ್ಡ ಹೆಜ್ಜೆ ಎನ್ನಬಹುದು.

ಬ್ರಿಟಿಷ್ ಪಾರ್ಲಿಮೆಂಟಿನ ಮೇಲ್ಮನೆಯಲ್ಲಿ ಈಗ 759 ಸದಸ್ಯರಿದ್ದು ಇದು ವಂಶಾನುಗತವಾಗಿ ಬರುವ ಸದಸ್ಯತ್ವ. ಬ್ರಿಟಿಷ್ ರಾಣಿ 11ನೇ ಶತಮಾನದಿಂದ ಇಲ್ಲಿವರೆಗೆ ನೇಮಿಸಿದ ಪಾಳೆಯಗಾರರ ವಂಶಜರೇ ಇವರು. ಆದರೆ ಈ ವ್ಯವಸ್ಥೆ ಕೊನೆಗೊಳಿಸಿದ ಮೇಲೆ, ಮೇಲ್ಮನೆಯ ಸದಸ್ಯತ್ವಕ್ಕೆ ಯಾವ ರೀತಿ ಸದಸ್ಯರ ಆಯ್ಕೆ ನಡೆಯುತ್ತದೆ ಎಂದು ಸರ್ಕಾರ ಸ್ಪಷ್ಟಪಡಿಸದಿರುವುದು ಮಸೂದೆಯ ದುರ್ಬಲ ಅಂಶವಾಗಿದೆ. ಈಗಲೂ ಹೌಸ್ ಆಫ್‌ಲಾರ್ಡ್ಸ್‌ಗೆ ಕೆಳಮನೆ (ಹೌಸ್ ಆಫ್ ಕಾಮನ್ಸ್) ಮಂಜೂರು ಮಾಡಿದ ಕಾನೂನು ಹಿಂದುರಿಗಿಸಲು ವಿಳಂಬವಾಡಲು ಅಧಿಕಾರ ಇದೆಯೇ ವಿನಾ ನಿರಾಕರಿಸಲು ಅಧಿಕಾರವಿಲ್ಲ. ಆದರೆ ಮೇಲ್ಮನೆ ರದ್ದತಿ, ಬ್ರಿಟನ್‌ನ ಪಾಳೆಯಗಾರಿ ಚರಿತ್ರೆಯ ಒಂದು ಅಂಶವನ್ನು ಅಳಿಸಿದಂತೆ ಆಗುತ್ತದೆ.

ಅಂಗನವಾಡಿ ನೌಕರರ ರಾಯಚೂರು ಜಿಲ್ಲಾ ಅಧ್ಯಯನ ಶಿಬಿರ

ಅಂಗನವಾಡಿ ನೌಕರರ ಕೊಪ್ಪಳ ರಾಯಚೂರು ಜಿಲ್ಲೆಗಳ ಅಧ್ಯಯನ ಶಿಬಿರವು ಅಕ್ಟೋಬರ್ 3-4 ರಂದು ಸಿಂಧನೂರ ನಗರದಲ್ಲಿ ಎರಡು ದಿನಗಳ ಕಾಲ ನಡೆಯಿತು. ಈ ಶಿಬಿರದಲ್ಲಿ 100ಕ್ಕೂ ಮೆಲ್ಪಟ್ಟ ಕಾರ್ಯಕರ್ತೆಯರು ಸಹಾಯಕರು ಭಾಗವಹಿಸಿದ್ದರು. ಶಿಬಿರವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಚಂದ್ರಶೇಖರ ಬಾಳೆ ಉದ್ಘಾಟಿಸಿದರು, ಮುಖ್ಯ ಅತಿಥಿಗಳಾಗಿ ತುಂಗಭದ್ರ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ರಾಜ್ಯ ಮುಖಂಡರಾದ ನಾಗಭೂಷಣ, ಸಿಂಧನೂರು ತಾಲೂಕಾ ಪಂಚಾಯತ್ ಉಪಾಧ್ಯಕ್ಷೆ ಅನ್ನಪೂರ್ಣಮ್ಮ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪ, ಡಿ.ವೈ.ಎಫ್.ಐ ಜಿಲ್ಲಾ ಅಧ್ಯಕ್ಷ ಶರಬಣ್ಣ ನಾಗ್ಲಾಪುರ, ಸಿ.ಐ.ಟಿ.ಯು ಮುಖಂಡರಾದ ಶೇಕ್ಷ ಖಾದ್ರಿ, ಅಂಗನವಾಡಿ ನೌಕರರ ಜಿಲ್ಲಾ ಕಾರ್ಯದರ್ಶಿ ಮಂಟನ ಗೌಡ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಅಂಗನವಾಡಿ ನೌಕರರ ಜಿಲ್ಲಾ ಅಧ್ಯಕ್ಷೆ ಮರಿಯಮ್ಮ ಮಸ್ಕಿ ವಹಿಸಿದ್ದರು. ಡಿ.ವೈ.ಎಫ್.ಐ. ತಾಲೂಕಾ ಕಾರ್ಯದರ್ಶಿ ಹನುಮಂತಪ್ಪ ಗುಡಿ ವಕೀಲರು ಸ್ವಾಗತ ಕೋರಿದರೆ ಅಂಗನವಾಡಿ ನೌಕರರ ತಾಲೂಕು ಕಾರ್ಯದರ್ಶಿ ಸಿ. ಚಿದಾನಂದ ದೊರೆ ವಂದನಾರ್ಪಣೆ ಮಾಡಿದರು. ಕಾರ್ಯಕ್ರಮ ನಿರೂಪಣೆ ದೇವೇಂದ್ರಗೌಡ ಮಾಡಿದರು.

ಕಬ್ಬಿಗೆ 875 ರೂಗೆ ರೈತ ಸಮ್ಮೇಳನದ ಒತ್ತಾಯ

ಬೀದರ್:- ಕರ್ನಾಟಕ ಪ್ರಾಂತ ರೈತ ಸಂಘದ ಹುಮನಾಬಾದ ತಾಲೂಕು ಪ್ರಥಮ ಸಮ್ಮೇಳನವು ನವೆಂಬರ್ 9 ರಂದು ಭವಾನಿಮಂದಿರದಲ್ಲಿ ಯಶಸ್ವಿಯಾಗಿ ಜರುಗಿತು. ಉದ್ಘಾಟನೆಯನ್ನು ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ನೆರವೇರಿಸಿ ಮಾತನಾಡಿ ರೈತರ ಬೆಳೆಗೆ ಬೆಲೆ ಪಾತಾಳ ನೋಡಿದರೆ ಖರೀದಿಸುವಾಗ ಗಗನದತ್ತ ಹಾರುತ್ತಿದ್ದು. ರೈತ ತೀರಾ ಸಂಕಷ್ಟಕೊಳಗಾಗಿದ್ದಾನೆಂದರು ರೈತರ ಎಲ್ಲಾ ಬೆಳೆಗೂ ಬೆಂಬಲ ಬೆಲೆ ನಿಗದಿ ಪಡಿಸುವಂತೆ ಸರ್ಕಾರವನ್ನು ಆಗ್ರಹಿಸಿದರು.

ಮುಖ್ಯ ಅತಿಥಿಗಳಾಗಿ ಜೆ.ಎಂ.ಎಸ್.ನ ಕೆ.ನೀಲಾ ಅಂಗನವಾಡಿ ನೌಕರರ ಸಂಘದ ಸಂತೋಷಮ್ಮ ಗ್ರಾಮ ಪಂಚಾಯತ್ ನೌಕರರ ಸಂಘದ ಪ್ರಭುರಾವ ಸಂತೋಷಕರ ಸಂಗ್ರಾಮಭೋಸ್ಲೆ, ವರದೇಂದ್ರ ಸಮ್ಮೇಳನ ಉದ್ದೇಶಿಸಿ ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಮೆಹತಾಬ ಮನ್ನಾಖೆಳಿ ಮಾತನಾಡಿ ಕಬ್ಬಿಗೆ ಬೆಲೆ ನಿಗದಿ ಮಾಡುವಲ್ಲಿ ಸರ್ಕಾರ ರೈತರೊಂದಿಗೆ ಏಣಿ ಹಾವಿನಾಟ ನಡೆಸುತ್ತಿದೆಂದ ಅವರು ಕೂಡಲೇ ಪ್ರತಿ ಕ್ವಿಂಟಾಲ್‌ಗೆ 875 ರೂ ನಿಗದಿ ಪಡೆಸುವಂತೆ ಆಗ್ರಹಿಸಿದರು. ಸಮ್ಮೇಳನವು ಹಲವು ನಿರ್ಣಯ ಗಳನ್ನು ಕೈಗೊಂಡಿತು.

ನೂತನ ಸಮಿತಿ:

ಅಧ್ಯಕ್ಷರು: ಮಹಿತಾಬ ಮನ್ನಾಎಖೆಳಿ, ಉಪಾಧ್ಯಕ್ಷರು: ಕಾಳೆಪ್ಪಾ ಸೋಮಾ ಮೋಳಕೇರಾ, ಪಾರಮ್ಮ ಸೋಲಾಪೂರ್, ಹಣಮಂತರಾ ಮರಕುಂದೆ ಕಲ್ಲೂರ, ಕಾರ್ಯದರ್ಶಿ : ಅಸೋಕಡ್ಡಿ ಹುಳಮಟ್ಟೆ ಹುಣಚಗೇರಾ, ಜಂಟಿ ಕಾರ್ಯದರ್ಶಿಗಳು: ಶೆರಣಪ್ಪಾ ಹೆಗ್ಗಣಿ ಗಡವಂತಿ, ರಮೇಶ್ ಕುಂಬಾರ ಸೀತಾಳಗೇರಾ, ಲಕ್ಷಣ ಮೇತ್ರ ಚೆಂದಹಳ್ಳಿ ಅರ್ಜುನ ನಾಗಣ್ಣೋರ ಮೊಳಕೇರಾ. ಖಜಾಂಚಿ: ಚಂದ್ರಕಾಂತ ನಿಟ್ಟೂರ.

ಬಾಲಕಿ ಮೇಲೆ ದೌರ್ಜನ್ಯ ಸಮುದಾಯ, ಜೆ.ಎಂ.ಎಸ್. ಖಂಡನೆ

ಅತಿ ಬಡಕುಟುಂಬದ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಮನೆಗೆಲಸಕ್ಕೆ ನೇಮಿಸಿಕೊಂಡು ಶೋಷಿಸಿ ಅಮಾನವೀಯ ರೀತಿಯಲ್ಲಿ ಕ್ರೂರವಾಗಿ ಹಿಂಸಿಸಿರುವ ನರಗುಂದದ ದೀಪಕ ಹೆಗಡೆ ಹಾಗೂ ಪತ್ನಿ ಮಮತಾರ ಕೃತ್ಯವನ್ನು ಧಾರವಾಡ ಸಮುದಾಯ ಹಾಗೂ ಜನವಾದಿ ಮಹಿಳಾ ಸಂಘಟನೆಗಳು ಖಂಡಿಸಿವೆ.

ಮಧ್ಯಮ ವರ್ಗದ ಉದ್ಯೋಗಿಗಳು ಬಡವರನ್ನು ಈ ರೀತಿ ಶೋಷಿಸಿ ಹಲ್ಲೆ ನಡೆಸಿರುವುದಕ್ಕೆ ಅಘಾತ ವ್ಯಕ್ತ ಪಡಿಸಿರುವ ಸಂಘಟನೆಗಳು ಈ ಅಮಾನವೀಯ ಗುಣ ಮೇರೆದಿರುವ ದಂಪತಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿವೆ.

ಹೊಸ ದೃಢ ನಿರ್ಧಾರದ ಸಂಕೇತ

ಪುಟ 1 ರಿಂದ

ಸೇರಿಕೊಂಡವು. ಸ್ವತಃ ಇಂಟಕ್ ಕೂಡಾ ಈ ಕಾರ್ಯಾಚರಣೆಯನ್ನು ವಿರೋಧಿಸಿದರೂ ಡಿಸೆಂಬರ್ 11 ರಂದೇ ಪ್ರತಿಭಟನಾ ದಿನ ಆಚರಿಸಬೇಕಾಗಿ ಬಂತು. ಆಳುವ ಕೂಟದ ಮುಖಂಡತ್ವದಲ್ಲಿರುವ ಬಿ.ಎಂ.ಎಸ್. ಕೂಡಾ ರಾಷ್ಟ್ರೀಯ ವೇದಿಕೆ ಎತ್ತಿದ ಪ್ರಶ್ನೆಗಳ ಮೇಲೆಯೇ ಡಿಸೆಂಬರ್ 3 ರಂದು ಸಂಸತ್ತಿನ ಮುಂದೆ ಹಾಗೂ ದೇಶದ ಹಲವೆಡೆ ಧರಣಿ ನಡೆಸಿದ್ದು ಈ ರಾಷ್ಟ್ರೀಯ ವೇದಿಕೆಯ ನಾಲ್ಕು ತಿಂಗಳ ಕಾಲದ ಪ್ರಚಾರ-ಪ್ರಕ್ಷೋಭೆ ಜನಸಾಮಾನ್ಯರಲ್ಲಿ ಉಂಟುಮಾಡಿದ ಅಪಾರ ಜಾಗೃತಿಗೆ ಸಾಕ್ಷಿ.

ಎಡಪಕ್ಷಗಳಂತೂ ಆರಂಭದಿಂದಲೇ ರಾಷ್ಟ್ರೀಯ ವೇದಿಕೆಯ ಹೋರಾಟಕ್ಕೆ ಬೆಂಬಲ ಸೂಚಿಸಿದ್ದವು. ನಂತರ ಡಿ.ಎಂ.ಕೆ., ಟಿ.ಎಂ.ಸಿ., ಜನತಾದಳ, ಆರ್.ಜೆ.ಡಿ., ಸಮಾಜವಾದಿ ಪಕ್ಷ ಮಾತ್ರವೇ ಅಲ್ಲ ಆಳುವ ಕೂಟಕ್ಕೆ ಸೇರಿದ ಎಐಎಡಿಎಂಕೆ ಹಾಗೂ ಬಿಜೆಡಿ ಕೂಡಾ ಬೆಂಬಲ ವ್ಯಕ್ತಪಡಿಸಿದವು. ಸರಕಾರ ಕೂಡಾ ಕೊನೆಗಳಿಗೆಯಲ್ಲಿ ಕಾರ್ಮಿಕ ಮುಖಂಡರನ್ನು ಕರೆದು ಮಾತುಕತೆಗಳ ನಾಟಕವಾಡಬೇಕಾಗಿ ಬಂತು.

ಇಡೀ ಆರ್ಥಿಕದ ಮೇಲೆ ಕರಾಳ ಛಾಯೆ ಬೀರಿದ, ಜೀವನಾವಶ್ಯಕ ವಸ್ತುಗಳ ಬೆಲೆಗಳಲ್ಲಿ ಅಭೂತಪೂರ್ವ ಬೆಲೆಯೇರಿಕೆಗಳನ್ನು ತಂದು ಜನ ತತ್ತರಿಸುವಂತೆ ಮಾಡಿದ, ನಿರುದ್ಯೋಗವನ್ನು ತ್ವರಿತವಾಗಿ ಬೆಳೆಸಿದ, ವ್ಯಾಪಕ ಪ್ರಮಾಣದಲ್ಲಿ ಕಾರ್ಖಾನೆಗಳು ಮುಚ್ಚಿ ಲಕ್ಷಾಂತರ ಕಾರ್ಮಿಕರನ್ನು ಬೀದಿಗೆಸೆದ, ಕೃಷಿ ಉತ್ಪಾದನೆಯನ್ನು ಕುಂಠಿತಗೊಳಿಸಿ ಆಹಾರ ಸಮಸ್ಯೆಗಳನ್ನು ಉಲ್ಬಣಗೊಳಿಸಿದ ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ನೀತಿಗಳನ್ನು ಕೈಬಿಡಬೇಕೆಂಬುದು ಈ ಐತಿಹಾಸಿಕ ಪ್ರತಿಭಟನೆಯ ಪ್ರಮುಖ ಕೂಗು. ಏಕೆಂದರೆ ಈ ಕೋಟ್ಯಾಂತರ ಜನ ಸಾಮಾನ್ಯರ ತೊಳಲಾಟವನ್ನು ನೂರ್ಮಡಿ ಹೆಚ್ಚಿಸಿದ ಈ ಆರ್ಥಿಕ ನೀತಿಗಳಿಂದ ಲಾಭವಾಗಿರುವುದು ವಿದೇಶಿ ಕಂಪನಿಗಳಿಗೆ ಮತ್ತು ಅವರ ಭಾರತೀಯ ಪಾಲುದಾರರಿಗೆ ಮಾತ್ರ.

ಈ ಪ್ರಮುಖ ಬೇಡಿಕೆಯಲ್ಲದೆ 33% ಮಹಿಳಾ ಮೀಸಲಾತಿ ಶಾಸನ, ಕೃಷಿ ಕಾರ್ಮಿಕರಿಗೆ ಸಮಗ್ರ ಕಾನೂನು, ಬೆಳೆವಿಮೆ, ಕನಿಷ್ಟ ಕೂಲಿಯ ಗ್ಯಾರಂಟಿ, ಪರಮಾಣು ಶಸ್ತ್ರೀಕರಣಕ್ಕೆ ತಡೆ, ದಲಿತರು, ಬುಡಕಟ್ಟು ಜನಗಳ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ತಡೆ, ಎಲ್ಲರಿಗೂ ಶಿಕ್ಷಣ, ಬಾಲಶ್ರಮದ ರದ್ದತಿ, ಉದ್ಯೋಗ ಭರ್ತಿಯ ಮೇಲಿನ ನಿರ್ಬಂಧದ ರದ್ದತಿ ಇತ್ಯಾದಿ ಎಲ್ಲಾ ಜನ ವಿಭಾಗಗಳ ಬೇಡಿಕೆಗಳನ್ನು ಮುಂದಿಟ್ಟು ಈ ಬೃಹತ್ ಮುಷ್ಕರ ಮತ್ತು ಸಾಮೂಹಿಕ ಕಾರ್ಯಾಚರಣೆ ನಡೆಯಿತು. ಈಗ ಕೇಂದ್ರದಲ್ಲಿನ ಸರಕಾರದ ಸಕ್ರಿಯ ಸಹಾಯದಿಂದ ಕೋಮುವಾದಿ ಉನ್ಮಾದವನ್ನು ಹರಡುವ ಪ್ರಯತ್ನಗಳ ವಿರುದ್ಧ ಜನಗಳಲ್ಲಿ ಒಗ್ಗಟ್ಟು ರೂಪಿಸುವುದೂ ಈ ಐಕ್ಯ ಹೋರಾಟದ ಕಾರ್ಯಕ್ರಮದ ಗುರಿಯಾಗಿತ್ತು.

ಇದು ಬಿಜೆಪಿ ಸರ್ಕಾರ ಹಾಗೂ ಅವರ ಬಾಡಿಕೆ ಪ್ರಚಾರಕರು ಪತ್ರಿಕೆಗಳಲ್ಲಿ ಅಪಪ್ರಚಾರ ಮಾಡುತ್ತಿರುವಂತೆ ಕೆಲವು ವಿಭಾಗದ ಕೆಲವು ಕಾರ್ಮಿಕರು ಸರ್ಕಾರದ ಕೆಲವು ಕ್ರಮಗಳಿಗೆ ವ್ಯಕ್ತಗೊಳಿಸಿರುವ ವಿರೋಧ, ಮತ್ತು ಎಲ್.ಐ.ಸಿ. ನೌಕರರು ವಿಮಾ ವಲಯದಲ್ಲಿ ತಮ್ಮ ಗುತ್ತೇದಾರಿಕೆ ಕಳಕೊಳ್ಳುತ್ತಿದ್ದೇವೆ ಎಂಬ ಭಯದಿಂದ ನಡೆಸಿರುವ ಕಾರ್ಯಾಚರಣೆಯಲ್ಲ. ಇನ್ನೂ ಕೆಲವರು ಭಾರೀ ಉದಾರತೆ ತೋರಿಸುತ್ತಾ ಹೇಳಿರುವಂತೆ ಅಭೂತಪೂರ್ವ ಬೆಲೆಯೇರಿಕೆಯ ವಿರುದ್ಧ ಜನಗಳ ಕ್ರೋಧದ ಮುಂದುವರಿಕೆಯೂ ಅಲ್ಲ. ಈ ಹೋರಾಟದ ಮುಖ್ಯ ಒತ್ತು ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ಪ್ರಸಕ್ತ ಆರ್ಥಿಕ ನೀತಿಗಳ ವಿರುದ್ಧ ಎಂಬುದು ಸುಸ್ಪಷ್ಟ. ಭಾರತದ ಬಹುಪಾಲು ಜನ ಈ ರೀತಿ ಪ್ರತಿಭಟನೆಗಿಳಿದಿದ್ದಾರೆ ಎಂಬುದನ್ನು ಸಹಿಸಲಾಗದ ಆಳುವ ವರ್ಗಗಳ ಜನ ಈ ಅಪಪ್ರಚಾರಕ್ಕೆ ಇಳಿದಿದ್ದಾರೆ. ಈ ಕಾರಣಕ್ಕಾಗಿಯೇ ಕಾರ್ಮಿಕ ವರ್ಗ ಹಾಗೂ ಅದಕ್ಕೆ ಬೆಂಬಲವಾಗಿ ನಿಂತ ಬಹುಪಾಲು ಶ್ರಮಜೀವಿಗಳ ಈ ಕಾರ್ಯಾಚರಣೆ ಆಳುವ ವರ್ಗಗಳ ಧೋರಣೆಗಳ ವಿರುದ್ಧ ಭಾರತೀಯ ಜನತೆಯ ಹೊಸ ಮಟ್ಟದ ಧಾಳಿ. ಡಿಸೆಂಬರ್ 11 ಆಳುವ ವರ್ಗಗಳಿಗೆ ಪ್ರತಿರೋಧ ಒಡ್ಡಬೇಕು, ಮರೆತು ಹೋದ ಅವರ ವಚನಗಳನ್ನು ಈಡೇರಿಸುವಂತೆ ಮಾಡಬೇಕು ಎಂಬ ಭಾರತೀಯ ಜನತೆಯ ಹೊಸ ದೃಢ ನಿರ್ಧಾರದ ಸಂಕೇತ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಲೇಖನವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಸಾಮಾನ್ಯ ಬಳಕೆದಾರರನ್ನು ಸುಲಿದು ಶ್ರೀಮಂತ ಬಳಕೆದಾರರಿಗೆ ಭಕ್ಷೀಸು ನೀಡಲು ದೂರಸಂಪರ್ಕ ಪ್ರಾಧಿಕಾರಕ್ಕೆ ಬಿಜೆಪಿ ಸರಕಾರ ಅವಕಾಶ ನೀಡಿದೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ

ದೂರವಾಣಿ ಮತ್ತಿತರ ವಿವಿಧ ದೂರಸಂಪರ್ಕ ಸೇವೆಗಳ ದರಗಳಲ್ಲಿ ತೀವ್ರ ಬದಲಾವಣೆಗಳನ್ನು ದೂರಸಂಪರ್ಕ ಹತೋಟಿ ಪ್ರಾಧಿಕಾರ (TRAI) ಸೂಚಿಸಿದೆ. ದುರದೃಷ್ಟವಶಾತ್ ಪ್ರಾಧಿಕಾರದ ಪ್ರಸ್ತಾವಗಳು ಕೆಳಮಟ್ಟದ ಬಳಕೆದಾರರಿಗೆ ದರ ಏರಿಸಿ ಶ್ರೀಮಂತ ಬಳಕೆದಾರರಿಗೆ ಅನುಕೂಲ ಮಾಡಿಕೊಡುವ ಗುರಿ ಹೊಂದಿರುವಂತದ್ದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ. ಈ ಪ್ರಸ್ತಾವಗಳಿಂದಾಗಿ ಗ್ರಾಮೀಣ ಬಳಕೆದಾರರು 140% ರಿಂದ 309% ದ ವರೆಗೆ ಹೆಚ್ಚು ತೆರಬೇಕಾಗಿದೆ. ಪಟ್ಟಣದ ದೂರವಾಣಿ ಬಳಕೆದಾರರು 52% ರಿಂದ 72% ಹೆಚ್ಚು ತೆರಬೇಕಾಗುತ್ತದೆ. ಅಂದರೆ ಗ್ರಾಮೀಣ ಬಳಕೆದಾರರು ಇದುವರೆಗೆ ಎರಡು ತಿಂಗಳಿಗೆ 105 ರೂ. ತೆರುತ್ತಿದ್ದವರು ಇನ್ನು ಮುಂದೆ 300 ರೂ. ಹೆಚ್ಚು ತೆರಬೇಕಾಗುತ್ತದೆ. ನಗರದ ಸಾಮಾನ್ಯ ಬಳಕೆದಾರರು 400-500 ರೂ. ಹೆಚ್ಚು ತೆರಬೇಕಾಗುತ್ತದೆ. ತದ್ವಿರುದ್ಧ ವಿಶೇಷ ಸೇವೆಗಳನ್ನು ಪಡೆಯುವ ಶ್ರೀಮಂತ ಬಳಕೆದಾರರಿಗೆ 50% ರಿಂದ 94% ರವರೆಗೂ 'ಪರಿಹಾರ' ಒದಗಿಸಿದೆ. ಒಟ್ಟಾರೆಯಾಗಿ ಸಾಮಾನ್ಯ ಬಳಕೆದಾರರಿಂದೆ ಕಸಿದುಕೊಂಡು ಶ್ರೀಮಂತ ಬಳಕೆದಾರರಿಗೆ ವಾರ್ಷಿಕವಾಗಿ 5000 ಕೋಟಿ ರೂ.ಗಳಷ್ಟು ಬಲವಂತದಿಂದ ವರ್ಗಾಯಿಸಲಾಗಿದೆ. ಈ ದರಗಳಲ್ಲಿ ದೂರವಾಣಿ ಜಾಲದ ವಿಸ್ತರಣೆಯನ್ನು ಕೊಲ್ಲುವಂತವು ಹಾಗೂ ಮಧ್ಯಮ ವರ್ಗಗಳ ಬಹುದೊಡ್ಡ ವಿಭಾಗಗಳಿಗೂ ದೂರವಾಣಿ ಬಹಳ ವೆಚ್ಚದಾಯಕವಾಗಿಸಿವೆ ಎಂದು ಸಿಪಿಐ(ಎಂ) ಖಂಡಿಸಿದೆ.

ದೂರಸಂಪರ್ಕ ಪ್ರಾಧಿಕಾರದ ದರ ಹಾಗೂ ಬಾಡಿಗೆ ಕುರಿತ ಪ್ರಸ್ತಾಪಗಳು ಸಾಮಾನ್ಯ ಬಳಕೆದಾರರ ವಿರುದ್ಧ ಸಂಪೂರ್ಣ ಪಕ್ಷಪಾತದಿಂದ ಕೂಡಿವೆ. ಪ್ರಾಧಿಕಾರ ಈ ವಿಷಯದಲ್ಲಿ ಅನುಸರಿಸಿದ ವಿಧಾನವೂ ಆತಂಕಕಾರಿ ಎಂದು ಸಿಪಿಐ(ಎಂ) ಹೇಳಿದೆ. ಪ್ರಾಧಿಕಾರ ಕೇವಲ ಖಾಸಗೀ ದೂರಸಂಪರ್ಕ ಆಪರೇಟರುಗಳ ಜತೆಗಷ್ಟೇ ಸಮಾಲೋಚನೆ ನಡೆಸಿದಂತಿದೆ. ಕೇವಲ ಒಂದೇ ಬಳಕೆದಾರ ಸಂಸ್ಥೆಯೊಡನೆ ಪ್ರಾಧಿಕಾರ ಸಮಾಲೋಚನೆ ನಡೆಸಿದಂತಿದೆ. ಬಳಕೆದಾರರ ವಿಚಾರ ತಿಳಿಯಲು ಪರಿಣತರ ಅಥವಾ ಸಾರ್ವಜನಿಕ ಹಿತಾಸಕ್ತಿ ಗುಂಪುಗಳ ಸಹಾಯ ಪಡೆಯಲು ಪ್ರಾಧಿಕಾರ ಏನೇನೂ ಪ್ರಯತ್ನ ನಡೆಸಿಲ್ಲ. ಖಾಸಗೀ ಮಂದಿ ದೂರವಾಣಿ ಬಾಡಿಗೆಗಳನ್ನು ಹಾಗೂ ಸ್ಥಳೀಯ ಕರೆಗಳ ದರಗಳನ್ನು ಹೆಚ್ಚಿಸಲು ಸತತವಾಗಿ ಲಾಬಿ ನಡೆಸುತ್ತಿದ್ದರು ಎಂಬುದು ಗುಟ್ಟಿನ ಸಂಗತಿಯೇನಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತಾವಗಳ ಬಗ್ಗೆ ಈ ಖಾಸಗೀ ಮಂದಿ ತೃಪ್ತಿ ವ್ಯಕ್ತಪಡಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ ಎಂದು ಸಿಪಿಐ(ಎಂ) ಹೇಳಿದೆ.

ದರಗಳ ನಿಗದಿಯ ಬಗ್ಗೆ ಸರಕಾರ ದೂರಸಂಪರ್ಕ ಪ್ರಾಧಿಕಾರಕ್ಕೆ ಸ್ಪಷ್ಟ ಧೋರಣಾ ನಿರ್ದೇಶನ ನೀಡಬೇಕಾಗಿತ್ತು. ಧೋರಣೆ ನಿರ್ಧರಿಸುವ ಕೆಲಸ ಸಂಸತ್ತಿನದ್ದು ಮತ್ತು ಸರಕಾರದ್ದು - ನಿಯಂತ್ರಣ ಪ್ರಾಧಿಕಾರಗಳ ಕೆಲಸ ಇಂತಹ ಧೋರಣೆಗಳನ್ನು ನ್ಯಾಯಯುತವಾಗಿ ಜಾರಿಗೆ ತರುವುದಷ್ಟೆ. ಆದರೆ ಬಿಜೆಪಿ ಸರಕಾರ ಇಂತಹ ಧೋರಣೆಯನ್ನು ರೂಪಿಸಿ ದೂರಸಂಪರ್ಕ ಪ್ರಾಧಿಕಾರಕ್ಕೆ ಯಾವುದೇ ನಿರ್ದೇಶನ ನೀಡುವಲ್ಲಿ ವಿಫಲವಾಗಿದೆ ಮಾತ್ರವಲ್ಲ ಬಳಕೆದಾರರನ್ನು ರಕ್ಷಿಸಲು ಕೂಡಾ ಯಾವುದೇ ಪ್ರಯತ್ನ ಮಾಡಿಲ್ಲ. ಅದರ ಬದಲು ಸರಕಾರ ದೂರಸಂಪರ್ಕ ಇಲಾಖೆ ತನ್ನ ಹಿತ ರಕ್ಷಿಸುವ ಅಂಶಗಳನ್ನು ಮಾತ್ರ ಮುಂದಿಟ್ಟಿತು, ಎಸ್.ಟಿ.ಡಿ. ಮತ್ತು ಅಂತರ್ರಾಷ್ಟ್ರೀಯ ಕರೆಗಳ ದರಗಳನ್ನು ಇಳಿಸುವುದಷ್ಟನ್ನೇ ಅದು ವಿರೋಧಿಸಿತು. ಈ ರೀತಿ ದೂರಸಂಪರ್ಕ ಇಲಾಖೆ ಮತ್ತು ಸರಕಾರ ಸಾಮಾನ್ಯ ಬಳಕೆದಾರರ ಮೇಲೆ 5000 ಕೋಟಿ ರೂ.ಗಳ ಹೆಚ್ಚಿನ ಹೊರೆ ಹೊರಿಸಲು ಅನುಮೋದನೆ ನೀಡಿದಂತಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಟೀಕಿಸಿದೆ.

ದೇಶದಲ್ಲಿ ದೂರಸಂಪರ್ಕ ಜಾಲ ವ್ಯಾಪಕವಾಗಿ ಹರಡಿಲ್ಲ. ಇದು ಬಹಳ ಆತಂಕದ ಸಂಗತಿ. ಇದನ್ನು ವ್ಯಾಪಕಗೊಳಿಸಬೇಕಾದರೆ ತಲಾ ಆದಾಯಕ್ಕೆ ಅನುಸಾರವಾಗಿ ದೂರವಾಣಿಯನ್ನು ಪಡೆಯಲು ತಗಲುವ ಖರ್ಚನ್ನು ಇಳಿಸಬೇಕಾಗಿತ್ತು. ಆದ್ದರಿಂದ ಟೆಲಿಫೋನ್ ಬಾಡಿಗೆ ಹಾಗೂ ಮೂಲಭೂತ ಕನಿಷ್ಟ ದರಗಳನ್ನು ಕಮ್ಮಿ ಮಾಡಬೇಕೆಂದು ಕೇಳಿಕೊಳ್ಳಲಾಗಿತ್ತು. ಈ ಮೂಲಕ ದೂರವಾಣಿ ಸಂಪರ್ಕ ಪಡೆಯುವವರ ಸಂಖ್ಯೆಯನ್ನು ವಿಸ್ತರಿಸಿ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗುವಂತೆ ಮಾಡಬಹುದಿತ್ತು. ಏಕೆಂದರೆ ಆರ್ಥಿಕ ಬೆಳವಣಿಗೆಗೆ ಮೂಲಭೂತ ದೂರಸಂಪರ್ಕ ಸೇವೆಗಳು ಅಗತ್ಯ ಎಂದು ಎಲ್ಲರಿಗೂ ಗೊತ್ತು. ಆದರೆ ದೂರಸಂಪರ್ಕ ಪ್ರಾಧಿಕಾರ ಮುಂದಿಟ್ಟಿರುವ ಪ್ರಸ್ತಾವಗಳು ತದ್ವಿರುದ್ಧವಾಗಿವೆ, ಪ್ರತಿಗಾಮಿಯಾಗಿವೆ. ಏಕೆಂದರೆ ಅದು ದೂರವಾಣಿ ಸಂಪರ್ಕ ಪಡೆಯಲು ತಗಲುವ ಖರ್ಚನ್ನು ವಿಪರೀತವಾಗಿ ಹೆಚ್ಚಿಸಿ ಈಗಾಗಲೇ ದೂರವಾಣಿ ಹೊಂದಿದ ಜನಸಾಮಾನ್ಯರೂ ಅದನ್ನು ಮುಂದುವರಿಸಲಾಗದಂತೆ ಮಾಡಿದೆ ಎಂದು ಸಿಪಿಐ(ಎಂ) ಕಟುವಾಗಿ ಟೀಕಿಸಿದೆ.

ದೂರಸಂಪರ್ಕ ಕುರಿತಂತೆ ಸಂಸತ್ತು ಅಂಗೀಕರಿಸಿದ ಏಕೈಕ ದಸ್ತಾವೇಜೆಂದರೆ 1994 ರ 'ರಾಷ್ಟ್ರೀಯ ದೂರಸಂಪರ್ಕ ಧೋರಣೆ'. ದೂರಸಂಪರ್ಕ ಜಾಲವನ್ನು ತ್ವರಿತವಾಗಿ ವಿಸ್ತರಿಸಿ ಬಹಳಷ್ಟು ಜನಗಳಿಗೆ, ಮುಖ್ಯವಾಗಿ ಗ್ರಾಮೀಣ ಜನವಿಭಾಗಗಳಿಗೆ, ದೂರಸಂಪರ್ಕ ಒದಗಿಸುವುದು ಈ ಧೋರಣೆಯ ಗುರಿ. ದೂರಸಂಪರ್ಕ ಪ್ರಾಧಿಕಾರ ಮುಂದಿಟ್ಟಿರುವ ಪ್ರಸ್ತಾವಗಳು ಈ ಗುರಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಜನತೆಗೆ ಜವಾಬ್ದಾರವಾಗಿರದ ಹತೋಟಿ ಪ್ರಾಧಿಕಾರಗಳು ಧೋರಣೆಗಳನ್ನು ರೂಪಿಸಲು ಸಾಧ್ಯವಿಲ್ಲ, ಕೇವಲ ಸಂಸತ್ತಿಗೆ ಈ ಅಧಿಕಾರವಿದೆ ಎಂದು ಸ್ಪಷ್ಟಪಡಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಾಡಿಗೆ ಮತ್ತು ದೂರವಾಣಿ ಕರೆ ದರಗಳನ್ನು ಸಂಪೂರ್ಣವಾಗಿ ಬದಲಿಸಿ ದೂರ ಸಂಪರ್ಕಹತೋಟಿ ಪ್ರಾಧಿಕಾರ ರಾಷ್ಟ್ರೀಯ ದೂರಸಂಪರ್ಕ ಧೋರಣೆಯ ಉದ್ದೇಶಗಳನ್ನು ಸಂಪೂರ್ಣವಾಗಿ ಬದಲಿಸಲು ಪ್ರಯತ್ನಿಸುತ್ತಿದೆ, ಇದು ದೂರಸಂಪರ್ಕ ಜಾಲ ಬೆಳವಣಿಗೆಗೆ ಮಾರಕ ಎಂದಿದೆ.

ಸಂಸತ್ತಿಗೆ ಜವಾಬುದಾರಿಯಾಗಿರುವ 'ರಾಷ್ಟ್ರೀಯ ಭದ್ರತಾ ಮಂಡಳಿ' ಬೇಕು

ಬಿಜೆಪಿ ನೇತೃತ್ವದ ಸರಕಾರ ಒಂದು 'ರಾಷ್ಟ್ರೀಯ ಭದ್ರತಾ ಮಂಡಳಿ' ಯ ರಚನೆಯಾಗಿದೆ ಎಂದು ಪ್ರಕಟಿಸಿದೆ. ಇದರಲ್ಲಿ ಪ್ರಧಾನ ಮಂತ್ರಿ, ಗೃಹಮಂತ್ರಿ, ರಕ್ಷಣಾ ಮಂತ್ರಿ, ವಿದೇಶಾಂಗ ಮಂತ್ರಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಿರುತ್ತಾರೆ. ಒಬ್ಬ ರಾಷ್ಟ್ರೀಯ ಭದ್ರತಾ ಸಲಹೆಗಾರರಿರುತ್ತಾರೆ. ಇವರದ್ದೇ ಪ್ರಮುಖ ಪಾತ್ರ. ಮಂಡಳಿಯಡಿ ಮೂರು ಹಂತದ ವ್ಯವಸ್ಥೆಯಿರುತ್ತದೆ. ಸಾಮರಿಕ ಧೋರಣೆ ತಂಡ, ರಾಷ್ಟ್ರೀಯ ಭದ್ರತಾ ಸಲಹಾ ವ್ಯವಸ್ಥೆ ಹಾಗೂ ಜಂಟಿ ಬೇಹುಗಾರಿಕಾ ಸಮಿತಿ. ಈ ಸಮಿತಿ ಇದರ ಸೆಕ್ರೆಟಾರಿಯೆಟ್ ಆಗಿರುತ್ತದೆ.

ಬಿಜೆಪಿ ನೇತೃತ್ವದ ಸರಕಾರ ಈ ಬಗ್ಗೆ ನೇಮಿಸಿದ ಕೆ.ಸಿ.ಪಂತ್ ನೇತೃತ್ವದ ತಂಡದ ಶಿಫಾರಸಿಗೂ ಈಗ ಪ್ರಕಟಿಸಿರುವ ವ್ಯವಸ್ಥೆಗೂ ವ್ಯತ್ಯಾಸವಿದೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇವೆರಡೂ ಒಂದು ಬಹಳ ಸಂಕುಚಿತ ಚೌಕಟ್ಟಿನೊಳಗೆ 'ರಾಷ್ಟ್ರೀಯ ಭದ್ರತೆ'ಯ ಬಗ್ಗೆ ಚರ್ಚೆ ನಡೆಸಿದಂತಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ರಾಷ್ಟ್ರೀಯ ಭದ್ರತೆಯೆಂದರೆ ರಾಷ್ಟ್ರದ ಹೊರ ಗಡಿಗಳನ್ನು ಹಾಗೂ ರಾಷ್ಟ್ರೀಯ ಸಮಗ್ರತೆಯನ್ನು ರಕ್ಷಿಸುವುದಷ್ಟೇ ಎಂಬ ಸಂಕುಚಿತ ಮಿಲಿಟರೀ ದೃಷ್ಟಿಯಿಂದ ಕಾಣುವುದು ಸರಿಯಲ್ಲ. ಇದು ಒಂದು ಆಧುನಿಕ ಪ್ರಜಾಸತ್ತಾತ್ಮಕ ಧರ್ಮನಿರಪೇಕ್ಷ ದೇಶಕ್ಕೆ ಸರಿಹೊಂದುವ ಪರಿಕಲ್ಪನೆಯಾಗಲು ಸಾಧ್ಯವಿಲ್ಲ. ರಾಷ್ಟ್ರೀಯ ಭದ್ರತೆಯ ಪರಿಕಲ್ಪನೆಯಲ್ಲಿ ಒಂದು ರಾಜಕೀಯ ಮತ್ತು ಆರ್ಥಿಕ ಅಂಶವೂ ಇರಬೇಕು ಎಂದು ಸಿಪಿಐ(ಎಂ)ನ ಕೇಂದ್ರ ಮುಖಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯ ಟಿಪ್ಪಣಿ ಮಾಡುತ್ತಾ ಹೇಳಿದೆ.

ಪಂತ್ ಸಮಿತಿಯ ಶಿಫಾರಸಿನ ಪ್ರಕಾರ ರಾಷ್ಟ್ರೀಯ ಭದ್ರತಾ ಸಲಹೆಗಾರರಿಗೆ ಕ್ಯಾಬಿನೆಟ್ ಸ್ಥಾನಮಾನ ನೀಡಬೇಕಾಗಿದ್ದು ಆತನ ಅಡಿಯಲ್ಲಿ ಮೇಲೆ ಹೇಳಿದ ಮೂರು ವಿಭಾಗಗಳಿರುತ್ತವೆ. ಆದರೆ ಈತ ಸಂಸತ್ತಿಗೆ ಜವಾಬುದಾರನಲ್ಲವಾದ್ದರಿಂದ ಇದು ಅಧ್ಯಕ್ಷ ಮಾದರಿ ವ್ಯವಸ್ಥೆಗೆ ಸೂಕ್ತವೇ ವಿನಃ ಸಂಸದೀಯ ವ್ಯವಸ್ಥೆಗಲ್ಲ.

ಸರಕಾರ ಈ ಶಿಫಾರಸನ್ನು ಸ್ವೀಕರಿಸಿಲ್ಲ. ಇದು ಸರಿಯಾದ ಕ್ರಮ - ಆದರೆ ಸರಕಾರ ಪ್ರಕಟಿಸಿದ ವ್ಯವಸ್ಥೆಯಲ್ಲಿ ಕೂಡಾ ಹಲವು ಆಕ್ಷೇಪಾರ್ಹ ಅಂಶಗಳಿವೆ ಎಂದು 'ಪೀಪಲ್ಸ್ ಡೆಮಾಕ್ರಸಿ' ಅಭಿಪ್ರಾಯಪಟ್ಟಿದೆ.

ಮೊದಲನೆಯದಾಗಿ, ಪ್ರಧಾನ ಮಂತ್ರಿಗಳ ಕಾರ್ಯದರ್ಶಿ ಬ್ರಿಜೇಶ್ ಮಿಶ್ರ ರವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಮಾಡಲಾಗಿದೆ. ಈ ಕುರಿತ ಎಲ್ಲಾ ಅಧಿಕಾರಗಳನ್ನು ಪ್ರಧಾನಮಂತ್ರಿಗಳ ಕಚೇರಿಯಲ್ಲಿ ಕೇಂದ್ರೀಕರಿಸಿದ್ದು ಇಲ್ಲಿಯೂ ಸಂಸತ್ತಿಗೆ ಜವಾಬುದಾರಿಕೆಯ ಅಂಶ ಇಲ್ಲವಾಗಿದೆ. ಒಂದೇ ವ್ಯಕ್ತಿಯಲ್ಲಿ ಎರಡು ಪ್ರಮುಖ ಜವಾಬ್ದಾರಿಗಳ ಸಮರ್ಥ ನಿರ್ವಹಣೆ ಸಾಧ್ಯವೇ ಎಂಬ ಪ್ರಶ್ನೆಯೂ ಬರುತ್ತದೆ. ಈಗಿನ ರಾಜಕೀಯ ವ್ಯವಸ್ಥೆಯಲ್ಲಂತೂ ಈ ರೀತಿಯ ರಾಷ್ಟ್ರೀಯ ಭದ್ರತಾ ಮಂಡಳಿ ದೇಶದ ಬಹುದಿನಗಳ ವಿದೇಶಾಂಗ ಧೋರಣೆಗಳನ್ನು ಕೈಬಿಟ್ಟು ಬಿಜೆಪಿಯ ಧೋರಣೆಯನ್ನು ಅಧಿಕೃತಗೊಳಿಸುವ ವ್ಯವಸ್ಥೆಯಾಗಿ ಬಿಡುತ್ತದೆ. ಪರಮಾಣು ಅಸ್ತ್ರಗಳ ಪರವಾಗಿರುವ ಬ್ರಜೇಶ್ ಮಿಶ್ರರಂತವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರನ್ನಾಗಿ ಮಾಡಿರುವುದು ಈ ಸಂದರ್ಭದಲ್ಲಿ ಗಮನಾರ್ಹ.

ಆದರೆ 'ಭದ್ರತೆ'ಯ ಈ ಪರಿಕಲ್ಪನೆಯನ್ನು ತಿರಸ್ಕರಿಸಿ ಈ ವಿಷಯದಲ್ಲಿ ಒಂದು ಪರ್ಯಾಯ ನಿಲುವು ತಳೆಯಬೇಕಾಗಿದೆ ಎಂದಿರುವ ಸಿಪಿಐ(ಎಂ)ನ ಪತ್ರಿಕೆಯ ಸಂಪಾದಕೀಯ ಈ ಕೆಳಗಿನ ಪರ್ಯಾಯ ವ್ಯವಸ್ಥೆಯನ್ನು ಮುಂದಿಟ್ಟಿದೆ.

ಮೊದಲನೆಯದಾಗಿ, ಭದ್ರತಾ ವಿಷಯಗಳ ಸಂಯೋಜನೆಗೆ ಪ್ರಧಾನ ಮಂತ್ರಿ, ರಕ್ಷಣಾ ಮಂತ್ರಿ, ಗೃಹಮಂತ್ರಿ ಮತ್ತು ಹಣಕಾಸು ಮಂತ್ರಿಗಳು, ಕ್ಯಾಬಿನೆಟ್ ಕಾರ್ಯದರ್ಶಿ, ರಕ್ಷಣಾ ಕಾರ್ಯದರ್ಶಿ, ಸಶಸ್ತ್ರ ಪಡೆಗಳ ಮುಖ್ಯಸ್ಥರು ಹಾಗೂ ಬೇಹುಗಾರಿಕೆ ಮುಖ್ಯಸ್ಥರಿರುವ ಒಂದು ಸಣ್ಣ ವ್ಯವಸ್ಥೆ ಸಾಕು.

ಎರಡನೆಯದಾಗಿ, ಈ ಸಮಿತಿಯ ವ್ಯಾಪ್ತಿಯಲ್ಲಿ ದೀರ್ಘಾವಧಿ ಯೋಜನೆ, ಬೇಹುಗಾರಿಕೆ ಮಾಹಿತಿಯ ವಿಶ್ಲೇಷಣೆ, ಸಂಯೋಜನೆ ಹಾಗೂ ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯ ಸಂಯೋಜನೆಗೆ ಒಂದು ವಿಶೇಷ ಉಪಸಮಿತಿ ಇರಬೇಕು. ಈ ತಂಡಗಳಲ್ಲಿ ಅಧಿಕಾರಿಗಳು, ಮಿಲಿಟರಿಯವರು, ಭದ್ರತಾ ತಜ್ಞರು, ಸಂಸತ್ ಸದಸ್ಯರು, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಂಶಗಳಲ್ಲಿ ಅನುಭವಸ್ಥ ಸಿಬ್ಬಂದಿಯನ್ನು ಸೇರಿಸಬಹುದು.

ಮೂರನೆಯದಾಗಿ, ಸಂಸತ್ತಿನೊಂದಿಗೆ ಇದರ ಸಂಬಂಧವಿರಬೇಕು. ರಕ್ಷಣೆಯ ಕುರಿತ ಸಂಸದೀಯ ಸ್ಥಾಯಿ ಸಮಿತಿಗೆ ಆಗಾಗ ಈ ಸಮಿತಿಯಲ್ಲಿನ ಚರ್ಚೆಗಳ ಬಗ್ಗೆ ರಾಷ್ಟ್ರೀಯ ಭದ್ರತೆಯ ದೀರ್ಘಾವಧಿ ಕಣ್ಣೋಟದ ಬಗ್ಗೆ ತಿಳಿಸುತ್ತಿರಬೇಕು. ಇಂತಹ ಒಂದು ವ್ಯವಸ್ಥೆ ಮಾತ್ರವೇ ಸಂಸದೀಯ ವ್ಯವಸ್ಥೆಗೆ ಅನುರೂಪವಾಗಿರುತ್ತದೆ.


'ಫೈರ್' ಚಲನಚಿತ್ರದ ಮೇಲೆ ಧಾಳಿ

ಬಿಜೆಪಿಯ ಸಂಕುಚಿತ - ಅಸಹಿಷ್ಣು ನಿಲುವು ಮತ್ತೆ ಬಯಲು

ಚಲನಚಿತ್ರ 'ಫೈರ್'(ಬೆಂಕಿ) ನ್ನು ಮತ್ತೆ ಸೆನ್ಸಾರ್ ಮಂಡಳಿಗೆ ಮರು ಪರೀಕ್ಷಣೆಗೆ ಕಳಿಸಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ. ಈ ಫಿಲಂ ಈಗಾಗಲೇ ಸೆನ್ಸಾರ್ ಮಂಡಳಿಯ ಅನುಮೋದನೆ ಪಡೆದು ಹಲವು ಸ್ಥಳಗಳಲ್ಲಿ ಪ್ರದರ್ಶನಗಳನ್ನು ಕಂಡಿದೆ. ದೇಶಾದ್ಯಂತ ಸಾರ್ವಜನಿಕ ಕೋಪ ಹಾಗೂ ಹಿಂಸಾತ್ಮಕ ಪ್ರದರ್ಶನಗಳಿಂದಾಗಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸುದ್ದಿ ಮತ್ತು ಪ್ರಸಾರ ಖಾತೆಯ ರಾಜ್ಯ ಮಂತ್ರಿ ಮುಕ್ತಾರ್ ಅಬ್ಬಾಸ್ ನಖ್ವಿಯವರು ಹೇಳಿದ್ದಾರೆ. ಈ ನಿರ್ಣಯದ ಅತ್ಯಂತ ಖಂಡನೀಯ ಅಂಶವೆಂದರೆ ಇದು ಮುಂಬೈ ಮತ್ತು ದಿಲ್ಲಿಯಲ್ಲಿ ಒಂದೆರಡು ಸಿನೇಮಾ ಮಂದಿರಗಳ ಮೇಲೆ ಶಿವಸೈನಿಕರ ಹಿಂಸಾತ್ಮಕ ಹಲ್ಲೆಗಳಿಗೆ ತಲೆಬಾಗಿ ಕೈಗೊಂಡ ನಿರ್ಣಯ ಎಂದು ಟೀಕಿಸಿರುವ ಸಿಪಿಐ(ಎಂ) ಚಲನಚಿತ್ರ ರಂಗ ಹಾಗೂ ಮಾನವ ಹಕ್ಕುಗಳ ಪ್ರತಿಷ್ಠಿತರು ಕೆಲವರು ಈ ಚಲನಚಿತ್ರ ಸರಾಗವಾಗಿ ಪ್ರದರ್ಶನಗೊಳ್ಳುವಂತೆ ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರಿಗೆ ಅಪೀಲು ಮಾಡಿರುವ ಸಂಗತಿಯತ್ತ ಗಮನ ಸೆಳೆದಿದೆ.

ಶಿವಸೇನಾ ಕಾರ್ಯಕರ್ತರು ಸಿನೇಮಾ ಥಿಯೇಟರುಗಳನ್ನು ಗುರಿಮಾಡಬಾರದು, ಚಲನಚಿತ್ರ ಕಲಾವಿದರ ಮೇಲೆ ಗುರಿಯಿಡಬೇಕು ಎಂದು ಶಿವಸೇನಾ ಮುಖಂಡರು ಹೇಳಿರುವರೆಂದು ವರದಿಯಾಗಿದೆ. ಇದು ಬಿಜೆಪಿ-ಶಿವಸೇನೆಯ ದುಷ್ಟ ಗುರಿಗಳು ಹಾಗೂ ವಿಧಾನಗಳನ್ನು ಸ್ಪಷ್ಟವಾಗಿ ಸೂಚಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಈ ಪ್ರಕರಣ ಹೆಚ್ಚಿನ ವಿಷಯಗಳಲ್ಲಿ ಬಿಜೆಪಿಯ ಸಂಕುಚಿತ ಹಾಗೂ ಅಸಹಿಷ್ಣು ನಿಲುವನ್ನು ಮತ್ತೊಮ್ಮೆ ಬಯಲಿಗೆಳೆದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸರಕಾರ ತನ್ನ ನಿರ್ಣಯವನ್ನು ಹಿಂತೆಗೆದುಕೊಂಡು ದುಂಡಾವರ್ತನೆಗಳಲ್ಲಿ ತೊಡಗಿದವರ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ